Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–9 | ಫೆಬ್ರವರಿ 26–ಮಾರ್ಚ್ 3, 2024 | ಪುಟ 16 | ರೂ.10/–
Volume-18 | Issue-9 | February 26-March 3, 2024 | Pages:16 | Price: 10/-





ಬದುಕು: ಯುವಜನರ ಮುಂದಿನ ದಾರಿ ಯಾವುದು?



ರಾಜ್ಯದ ಬಜೆಟ್: ಹೊಣೆಗಾರಿಕೆ ಮತ್ತು ಸಾಲ ಹೆಚ್ಚಳ

ಇನ್ನೆಲ್ಲಿ ಸರ್ವಾಂಗೀಣ ಅಭಿವೃದ್ಧಿ?

ದೆಹಲಿ ಗಡಿಗಳಲ್ಲಿ ಮತ್ತೇ ಗುಡುಗುತ್ತಿರುವ ರೈತ

ನಿರುದ್ಯೋಗ ಭತ್ಯೆ: ಪ್ರಯೋಜನಕಾರಿಯಾಗದ 'ಯುವನಿಧಿ'

ಭಾರತ ರತ್ನ ಪ್ರಶಸ್ತಿ ಅಷ್ಟೇ ಸಾಕೇ?

ರೈತ ಸಮುದಾಯಕ್ಕೆ ವರದಾನವಾಗಲಿರುವ ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯ ಶಿಫಾರಸ್ಸು



ಇತ್ತೀಚಿನ ವರ್ಷಗಳಲ್ಲಿ ರೈತರ ಬಾಯಲ್ಲಿ, ರೈತ ಸಂಘಟನೆಗಳು ಮತ್ತು ಸರ್ಕಾರದ ಮಾತುಕತೆಯಲ್ಲಿ ಮತ್ತು ದೆಹಲಿಯ ಗಡಿಗಳಲ್ಲಿ ಹಿಂದೆ ನಡೆದಿದ್ದ, ಈಗ ನಡೆಯುತ್ತಿರುವ ರೈತ ಚಳುವಳಿಯಲ್ಲಿ ಕೇಳಿ ಬರುತ್ತಿರುವ ಪ್ರಮುಖ ವಿಷಯವೆಂದರೆ ಅದು ಡಾ. ಎಂ.ಎಸ್. ಸ್ವಾಮಿನಾಥನ್ ವರದಿ. ಈ ಸ್ವಾಮಿನಾಥನ್ ಯಾರು? ಅವರು ನೀಡಿದ ವರದಿಯ ಶಿಫಾರಸ್ಸುಗಳೇನು? ಇದರಿಂದ ರೈತರಿಗೆ ಆಗುವ ಪ್ರಯೋಜನವೇನು? ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನದ ಲೇಖನವಿದು.

ಡಾ.ಎಂ.ಎಸ್.ಸ್ವಾಮಿನಾಥನ್ ರವರು 1925 ರಲ್ಲಿ ಜನಿಸುತ್ತಾರೆ. ಇವರೊಬ್ಬ ಪ್ರಸಿದ್ಧ ಕೃಷಿ ವಿಜ್ಞಾನಿಯಾಗಿ ಗಣನೀಯ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲೂ ಭತ್ತದ ತಳಿಯಲ್ಲಿನ ಇಳುವರಿಯನ್ನು ಹೆಚ್ಚಿಸುವ ಇವರ ಸಂಶೋಧನಾ ಕೊಡುಗೆಗಳನ್ನು ಇಂದಿಗೂ ದೇಶ ನೆನೆಯುತ್ತದೆ. ಅದಕ್ಕಾಗಿಯೇ ಇವರನ್ನು ಹಸಿರು ಕ್ರಾಂತಿಯ ಹರಿಕಾರ ಎಂದು ಕರೆಯಲಾಗುತ್ತದೆ. ಇವರ ಈ ಕೆಲಸ ದೇಶದ ಆಹಾರ ಭದ್ರತೆಯ ವಿಚಾರದಲ್ಲಿ ಗಣನೀಯ ಕೊಡುಗೆಯನ್ನು ನೀಡಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ಸ್ವಾಮಿನಾಥನ್ ಅವರಿಗೆ 'ಭಾರತ ರತ್ನ' ಘೋಷಣೆ ಮಾಡಿದೆ.

ರಾಷ್ಟ್ರೀಯ ಕೃಷಿ ಆಯೋಗ ರಚನೆ

2004 ರಲ್ಲಿ ಕೇಂದ್ರ ಸರ್ಕಾರ "ರಾಷ್ಟ್ರೀಯ ಕೃಷಿ ಆಯೋಗ" ವನ್ನು ರಚಿಸಿ, ಈ ಆಯೋಗಕ್ಕೆ ಕೃಷಿ ವಿಜ್ಞಾನಿ ಡಾ. ಎಂ.ಎಸ್ ಸ್ವಾಮಿನಾಥನ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿತು. ಈ ಆಯೋಗವನ್ನು ರಚಿಸಲು ಇದ್ದ ಒಂದು ಪ್ರಮುಖ ಕಾರಣವೆಂದರೆ, ಆ ಸಂದರ್ಭದಲ್ಲಿ ದೇಶದಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ ಏರುಗತಿಯಲ್ಲಿತ್ತು. ಮಾತ್ರವಲ್ಲದೆ ಮಹಾರಾಷ್ಟ್ರದ ವಿದರ್ಬಾ ಪ್ರದೇಶದಲ್ಲಿ ಅತ್ಯಧಿಕ ರೈತ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿದ್ದವು. ಈ ಹಿನ್ನೆಲೆಯಲ್ಲಿ ರೈತರ ಆತ್ಮಹತ್ಯೆಗಿರುವ ಕಾರಣಗಳೇನು, ಅವುಗಳನ್ನು ತಡೆಗಟ್ಟಲು ಇರುವ ಪರಿಹಾರಗಳ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸುವ ಉದ್ದೇಶದಿಂದ ಸ್ವಾಮಿನಾಥನ್ ರವರ ನೇತೃತ್ವದಲ್ಲಿ "ರಾಷ್ಟ್ರೀಯ ಕೃಷಿ ಆಯೋಗವನ್ನು" ಡಾ.ಸ್ವಾಮಿನಾಥನ್ ರವರ ನೇತೃತ್ವದಲ್ಲಿ ರಚಿಸಲಾಯಿತು.

2004 ರಿಂದ 2006 ರವರೆಗೆ ನಿರಂತರವಾಗಿ ಮೂರು ವರ್ಷಗಳ ಕಾಲ ಸ್ವಾಮಿನಾಥನ್ ರವರ ತಂಡ ಇಡೀ ದೇಶಾದ್ಯಂತ ಪ್ರವಾಸ ಮಾಡಿ ರೈತರು, ಕೃಷಿ ತಜ್ಞರು, ವಿಜ್ಞಾನಿಗಳು, ಕೃಷಿ ಅಧಿಕಾರಿಗಳು, ಜನಪ್ರತಿನಿಧಿಗಳನ್ನು ಭೇಟಿ ಮಾಡಿ ಅವರ ಅಭಿಪ್ರಾಯಗಳನ್ನು ಪಡೆದರು. ಮಾತ್ರವಲ್ಲದೆ ಅತಿಹೆಚ್ಚು ಆತ್ಮಹತ್ಯೆಗಳು ಸಂಭವಿಸಿದ ಮಹಾರಾಷ್ಟ್ರದ ವಿದರ್ಭಕ್ಕೆ ಗ್ರಾಮೀಣ ಪ್ರತ್ರಕರ್ತ ಎಂದು ಹೆಸರಾಗಿರುವ ಪಿ.ಸಾಯಿನಾಥ್ ರವರ ಜೊತೆ ಹಲವು ಹಳ್ಳಿಗಳಿಗೆ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿದ್ದಾಗಿ ಸ್ವತಃ ಸಾಯಿನಾಥ್ ರವರೇ ಬರೆದುಕೊಂಡಿದ್ದಾರೆ. ಅಂತಿಮವಾಗಿ 5 ವರದಿಗಳನ್ನು ಈ ಆಯೋಗ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು.

ಮಾತಿಗೆ ತಪ್ಪಿದ ನರೇಂದ್ರ ಮೋದಿ

ಅಲ್ಲಿಂದ ಇಲ್ಲಿಯವರೆಗೂ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವಾಗಲಿ ಅಥವಾ ಮೋದಿ ನೇತೃತ್ವದ ಬಿಜೆಪಿ ಸರ್ಕಾರವಾಗಲಿ ಈ ವರದಿಯನ್ನು ಅನುಷ್ಠಾನಕ್ಕೆ ತರುವ ಯಾವ ಪ್ರಾಮಾಣಿಕ ಪ್ರಯತ್ನವನ್ನೂ ಮಾಡಲಿಲ್ಲ. ಬದಲಿಗೆ ನರೇಂದ್ರ ಮೋದಿಯವರು 2014 ರ ಚುನಾವಣಾ ಪೂರ್ವದಲ್ಲಿನ ತಮ್ಮ ಭಾಷಣಗಳಲ್ಲಿ, ತಾನು ಅಧಿಕಾರಕ್ಕೆ ಬಂದಕೂಡಲೇ ರೈತರ ಆಧಾಯವನ್ನು ದ್ವಿಗುಣ ಮಾಡುವ ನಿಟ್ಟಿನಲ್ಲಿ ಡಾ.ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರುವುದಾಗಿ ಹೇಳಿದ್ದರು. ಆದರೆ ಅಧಿಕಾರಕ್ಕೆ ಬಂದ 6 ತಿಂಗಳಲ್ಲಿ ಸುಪ್ರಿಂ ಕೋರ್ಟ್ ಗೆ ಪ್ರಮಾಣಪತ್ರ ಸಲ್ಲಿಸಿ 'ಎಂ.ಎಸ್.ಸ್ವಾಮಿನಾಥನ್ ವರದಿಯನ್ನು ಜಾರಿಗೆ ತಂದರೆ ಮಾರುಕಟ್ಟೆಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಿ, ದೇಶದ ಆರ್ಥಿಕತೆ ಏರುಪೇರಾಗುತ್ತದೆ. ಆದ್ದರಿಂದ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ' ಎಂದು ಹೇಳಿದರು. ಇದು ಮೋದಿ ಸರ್ಕಾರ ದೇಶದ ರೈತ ಸಮುದಾಯಕ್ಕೆ ಮಾಡಿದ ಅತ್ಯಂತ ದೊಡ್ಡ ವಂಚನೆಯಾಗಿದೆ.

ವರದಿಯಲ್ಲಿ ಏನಿದೆ?

ಇಂದು ಬಹುತೇಕ ರೈತರ ಬಾಯಲ್ಲಿ ಬರುವ ಒಂದು ಸರ್ವೇ ಸಾಮಾನ್ಯ ಪದ ಎಂದರೆ ಅದು 'ಸ್ವಾಮಿನಾಥನ್ ರಿಪೋರ್ಟ್'. ಸ್ವಾಮಿನಾಥನ್ ನೇತೃತ್ವದ ರಾಷ್ಟ್ರೀಯ ಕೃಷಿ ಆಯೋಗ ಕೃಷಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಚರ್ಚಿಸಿದೆ ಮತ್ತು ನಿರ್ದಿಷ್ಟವಾಗಿ ಶಿಫಾರಸ್ಸುಗಳನ್ನು ನೀಡಿದೆ. ಅದರಲ್ಲಿ ಮಣ್ಣಿನ ಗುಣಮಟ್ಟ, ನೀರಾವರಿ, ಹವಾಮಾನ, ತಳಿ ಅಭಿವೃದ್ಧಿ, ಬಿತ್ತನೆ ಬೀಜಗಳ ಅಭಿವೃದ್ಧಿ, ಮಾರುಕಟ್ಟೆ ಸಂಸ್ಕರಣೆ ಹೀಗೆ ಹತ್ತು ಹಲವು ವಿಷಯಗಳ ಕುರಿತು ಚರ್ಚಿಸಿದೆ. ಆದರೆ ಈಗ ಪ್ರಧಾನವಾಗಿ ಚರ್ಚೆಯಲ್ಲಿರುವುದು "ರೈತರು ಬೆಳೆದ ಬೆಳೆಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚದ ಜೊತೆಗೆ ಶೇ. 50 ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆಯನ್ನು ನಿಗದಿಗೊಳಿಸಬೇಕು" ಎಂಬ ವಿಚಾರ.

ಕನಿಷ್ಟ ಬೆಂಬಲ ಬೆಲೆ ಕುರಿತಂತೆ

ಇದನ್ನು ಸೂತ್ರದ ಆಧಾರದಲ್ಲಿ C2+50% ಎಂದು ಕರೆಯುತ್ತಾರೆ. C2 ಅಂದರೆ Cost of Cultivation ಉತ್ಪಾದನಾ ವೆಚ್ಚ. ಅಂದರೆ ಯಾವುದೇ

ಒ ೦ ದ ು

ಬೆಳೆಯನ್ನು ಬೆಳೆಯಬೇಕಾದರೆ ಅದಕ್ಕೆ ತಗುಲುವ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕಹಾಕಬೇಕು. ವೈಜ್ಞಾನಿಕ ಲೆಕ್ಕ ಅಂದರೆ ಏನು? ಸಾಮಾನ್ಯವಾಗಿ ಯಾವುದೇ ಒಬ್ಬ ರೈತ ತಾನು ಬೆಳೆವ ಬೆಳೆಗೆ ಎಷ್ಟು ಖರ್ಚಾಗಿದೆ ಎಂದು ಲೆಕ್ಕಹಾಕುವಾಗ ನಗದು ರೂಪದಲ್ಲಿನ ಖರ್ಚುಗಳನ್ನು ಮಾತ್ರ ಲೆಕ್ಕಹಾಕುತ್ತಾರೆ. ಉದಾಹರಣೆಗೆ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕ, ಬಿತ್ತನೆ ಮತ್ತು ಕಟಾವು ಸಂದರ್ಭದಲ್ಲಿ ಕೂಲಿಕಾರರನ್ನು ಬಳಸಿದರೆ ಅವರ ಕೂಲಿ, ಮಾರುಕಟ್ಟೆಗೆ ಸಾಗಾಣಿಕೆ ಮಾಡುವ ಖರ್ಚು. ಬಹುತೇಕ ಇವುಗಳನ್ನೇ ಉತ್ಪಾದನಾ ಖರ್ಚು ಎಂದು ಎಂದು ಲೆಕ್ಕ ಹಾಕಲಾಗುತ್ತದೆ.

C2+50% ಸೂತ್ರದ ಆಧಾರದಲ್ಲಿ ಬೆಲೆ ನಿಗದಿ

ಆದರೆ ಸ್ವಾಮಿನಾಥನ್ ಆಯೋಗದ ವರದಿಯಲ್ಲಿ ಇವಿಷ್ಟು ಮಾತ್ರ ಉತ್ಪಾದನಾ ವೆಚ್ಚವಲ್ಲ. ಇದರ ಜೊತೆಗೆ ಬೆಳೆ ಬೆಳೆಯಲು ನಾವು ಬಳಕೆ ಮಾಡುವ ಭೂಮಿಯ ಬಾಡಿಗೆ ವೆಚ್ಚ (ಭೂಮಿ ಸ್ವಂತದ್ದೇ ಆಗಿದ್ದರೂ ಅದರ ಬಾಡಿಗೆಯನ್ನು ಲೆಕ್ಕ ಹಾಕಬೇಕು) ನೀರಾವರಿಗೆ ತಗುಲಿದ ವೆಚ್ಚ ಮತ್ತು ಮುಖ್ಯವಾಗಿ ಬೆಳೆಗಳ ಆಧಾರದ ಮೇಲೆ ಮೂರು ತಿಂಗಳೋ, ಆರು ತಿಂಗಳೋ ವರ್ಷಗಟ್ಟಲೆಯೋ ಕೃಷಿ ಚಟುವಟಿಕೆಗಳಲ್ಲಿ ಸಂಪೂರ್ಣ ತೊಡಗಿಸಿಕೊಂಡಿರುವ ಕುಟುಂಬ ಸದಸ್ಯರ ಕೂಲಿಯನ್ನು ಉತ್ಪಾದನಾ ವೆಚ್ಚಕ್ಕೆ ಸೇರ್ಪಡೆ ಮಾಡಬೇಕು. (ಇವರುಗಳು ತಮ್ಮ ಭೂಮಿಯಲ್ಲಿ ಕೆಲಸ ಮಾಡದಿದ್ದರೆ ಅವರು ಬೇರೆಡೆಗೆ ಕೆಲಸಕ್ಕೆ ಹೋಗಿದ್ದರೆ ದುಡಿಮೆ ಮಾಡುತ್ತಿರಲಿಲ್ಲವೇ, ಹಾಗೆ ಅವರದೇ ಭೂಮಿಯಲ್ಲಾದರೂ ಬಿಟ್ಟಿಯಾಗಿ ಏಕೆ ದುಡಿಯಬೇಕು?) ಹೀಗೆ ಒಂದು ಬೆಳೆ ಬೆಳೆಯಲು ತಗುಲುವ ಎಲ್ಲಾ ರೀತಿಯ ಖರ್ಚುಗಳನ್ನು ಲೆಕ್ಕಹಾಕಿ ಅದಕ್ಕೆ ಶೇಕಡಾ 50 ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆಯನ್ನು ನಿಗದಿಪಡಿಸಬೇಕು.

ಇದನ್ನು ಇನ್ನೂ ಸರಳವಾಗಿ ಅರ್ಥಮಾಡಿಕೊಳ್ಳುವುದಾದರೆ, ಉದಾಹರಣೆಗೆ ಒಂದು ಕ್ವಿಂಟಾಲ್ ಆಲೂಗಡ್ಡೆ ಬೆಳೆಯಲು 1,000 ರೂಪಾಯಿ ಉತ್ಪಾದನಾ ವೆಚ್ಚವಾದರೆ, ಅದಕ್ಕೆ ಶೇ. 50 ರಷ್ಟು ಲಾಭಾಂಶ ಅಂದರೆ 500 ರೂಪಾಯಿ ಸೇರಿಸಿ, ಒಂದು ಕ್ವಿಂಟಾಲ್ ಆಲೂಗಡ್ಡೆಗೆ 1,500 ರೂ.ಗಳನ್ನು ನಿಗದಿಪಡಿಸಬೇಕು. ಇದು ಸ್ವಾಮಿನಾಥನ್ ನೇತೃತ್ವದ ರಾಷ್ಟ್ರಿಯ ಕೃಷಿ ಆಯೋಗವು ನೀಡಿದ C2+50% ಅಂದರೆ ಇದೆ. ಇದರ ಆಧಾರದ ಮೇಲೆ ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕು.

ರೈತ ಚಳುವಳಿಯ ಬೇಡಿಕೆ

ಈಗ ದೆಹಲಿಯ ಗಡಿಗಳಲ್ಲಿ ನಡೆಯುತ್ತಿರುವ ರೈತ ಚಳುವಳಿ ಮತ್ತು ದೇಶದಾದ್ಯಂತ ರೈತ ಚಳುವಳಿಗಳ ಪ್ರಮುಖ ಬೇಡಿಕೆಯೆಂದರೆ C2+50% ಸೂತ್ರದ ಆಧಾರದಲ್ಲಿ ಎಲ್ಲಾ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಖಾತ್ರಿಗೊಳಿಸುವ ಕಾನೂನನ್ನು ಸಂಸತ್ತಿನಲ್ಲಿ ಜಾರಿಗೆ ತರಬೇಕು. ಈ ಸೂತ್ರದ ಆಧಾರದಲ್ಲಿ ಎಲ್ಲಾ ಬೆಳೆಗಳಿಗೂ ಬೆಲೆಯನ್ನು ನಿಗದಿಪಡಿಸಬೇಕು. ಯಾವುದಾದರೂ ಬೆಳೆಗೆ ಮಾರುಕಟ್ಟೆಯಲ್ಲಿ ಬೆಲೆ ಕುಸಿದರೆ ಕೂಡಲೇ ಸರ್ಕಾರ ಮಧ್ಯಪ್ರವೇಶ ಮಾಡಿ, ಸ್ವಾಮಿನಾಥನ್ ಶಿಫಾರಸ್ಸಿನಂತೆ ಬೆಂಬಲ ಬೆಲೆ ನಿಗದಿಪಡಿಸಿ ಖರೀದಿ ನಡೆಸಬೇಕು. ಇದನ್ನು ಅನುಸರಿಸದವರಿಗೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಇದು ಪ್ರಮುಖವಾದ ವಿಚಾರ.

ಕೈಗಾರಿಕಾ ಉತ್ಪನ್ನಗಳಿಗೆ MRP

ಇಂದಿನ ಮಾರುಕಟ್ಟೆಯಲ್ಲಿ ಮಾರಾಟವಾಗುವ ಯಾವುದೇ ವಸ್ತುಗಳ ಬೆಲೆ ನಿಗದಿಯಾಗುವುದು ಆ ವಸ್ತುವಿನ ಉತ್ಪಾದನಾ ವೆಚ್ಚವನ್ನು ಲೆಕ್ಕಹಾಕಿ ಮತ್ತು ಅದಕ್ಕೆ ಲಾಭಾಂಶವನ್ನು ಸೇರಿಸಿ MRP (ಕನಿಷ್ಟ ಚಿಲ್ಲರೆ ದರ) ದರವನ್ನು ನಿಗದಿ ಪಡಿಸಲಾಗುತ್ತದೆ. ಅದಕ್ಕಿಂತ ಕಡಿಮೆ ಬೆಲೆಗೆ ವಸ್ತುವನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಉಳಿದ ಎಲ್ಲಾ ಉತ್ಪನ್ನಗಳಿಗೂ ಈ ನೀತಿ ಅನ್ವಯವಾಗುವುದಾದರೆ ಕೃಷಿ ಉತ್ಪನ್ನಗಳಿಗೆ ಯಾಕೆ ಸಾಧ್ಯವಿಲ್ಲ. ಇದು ಇಂದು ದೇಶಾದ್ಯಂತ ಚರ್ಚೆಯಲ್ಲಿದೆ. ಅದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರೈತ ಸಮುದಾಯ ಚಳುವಳಿ ನಡೆಸುತ್ತಿದೆ. ಈ ನೀತಿ ಜಾರಿಯಾದರೆ ಯಾವ ರೈತನೂ ಕೃಷಿ ಕಾರಣಕ್ಕಾಗಿ ಸಾಲ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ನಿರ್ಮಾಣವಾಗುವುದಿಲ್ಲ.

ಆಯೋಗದ ಕೆಲವು ಪ್ರಮುಖ ಶಿಫಾರಸ್ಸುಗಳು

ಸ್ವಾಮಿನಾಥನ್ ರವರ ನೇತೃತ್ವದಲ್ಲಿ ರಚನೆಯಾಗಿದ್ದ ರಾಷ್ಟ್ರೀಯ ಕೃಷಿ ಆಯೋಗ ಕೇವಲ ಬೆಂಬಲ ಬೆಲೆ ನಿಗದಿಗೊಳಿಸುವ ಶಿಫಾರಸ್ಸನ್ನು ಮಾತ್ರ ನೀಡಿಲ್ಲ. ಕೃಷಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಅವರು ಶಿಫಾರಸ್ಸು ಮಾಡಿದ್ದಾರೆ. ಅದರಲ್ಲಿನ ಕೆಲವು ಪ್ರಮುಖ ಶಿಫಾರಸ್ಸುಗಳನ್ನು ನೋಡೋಣ.

ರೈತರ ಆತ್ಮಹತ್ಯೆಗಳನ್ನು ತಡೆಯಲು ರೈತರಿಗೆ ಜೀವನ ಭದ್ರತೆ, ದೇಶಕ್ಕೆ ಆಹಾರ ಭದ್ರತೆ ಹಾಗೂ ಆರೋಗ್ಯ ಭದ್ರತೆಯನ್ನು ಒದಗಿಸಲು ಆಯೋಗದ ಶಿಫಾರಸ್ಸುಗಳು ಕೆಳಗಿನಂತಿವೆ:

1. ರೈತರ ಸಂಪೂರ್ಣ ಸಾಲ ಮನ್ನಾ ಮಾಡಿ ಋಣಮುಕ್ತರನ್ನಾಗಿಸುವುದು. (ಖಾಸಗಿ ಸಾಲಗಳನ್ನು ಒಳಗೊಂಡಂತೆ) ರೈತರಿಗೆ ಆಗತ್ಯವಿರುವಷ್ಟು ಸಾಲವನ್ನು ಶೇ. 4 ರ ಬಡ್ಡಿ ದರದಲ್ಲಿ ನೀಡುವಂತಾಗಬೇಕು. ರೈತರ ಕೃಷಿಗಾಗಿಯೇ ಪ್ರತ್ಯೇಕ ಬ್ಯಾಂಕುಗಳನ್ನು ಸ್ಥಾಪಿಸಬೇಕು. ಕೃಷಿಯೇತರ ಹಣಕಾಸು ಚಟುವಟಿಕೆಗಳಿಗೆ ಈ ಬ್ಯಾಂಕಿನಿಂದ ಸಾಲ ನೀಡಕೂಡದು.
2. ರೈತರ ಕೃಷಿ ಉತ್ಪಾದನಾ ವೆಚ್ಚದ ಜೊತೆ ಶೇ. 50 ರಷ್ಟು ಲಾಭಾಂಶವನ್ನು ಸೇರಿಸಿ, ಬೆಳೆಗಳಿಗೆ ಬೆಲೆಗಳನ್ನು ನಿಗದಿಪಡಿಸುವಂತಾಗಬೇಕು. ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ ಸಿಗುವಂತಾಗಲು, ಮುಂದುವರಿದ ದೇಶಗಳಿಂದ ಆಮದು ಮಾಡಿಕೊಳ್ಳುವ ಕೃಷಿ ಉತ್ಪಾದನೆಗಳಿಗೆ ಹೆಚ್ಚಿನ ತೆರಿಗೆಯನ್ನು ವಿಧಿಸಬೇಕು. ಇಲ್ಲವೇ ವಿಶೇಷ ಸಹಾಯಧನಗಳನ್ನು ಬೆಳೆಯಾಧಾರಿತವಾಗಿ ಒದಗಿಸಿ, ರೈತರು ನಷ್ಟಕ್ಕೆ ಗುರಿಯಾಗದಂತೆ ರಕ್ಷಣೆ ಒದಗಿಸಬೇಕು.
3. ಕೃಷಿಗೆ ಪ್ರೋತ್ಸಾಹ ನೀಡಲು ಕೇಂದ್ರ–ರಾಜ್ಯ ಸರ್ಕಾರಗಳು ಸರಕಾರದ ವೆಚ್ಚದಲ್ಲಿ ಮೂಲಸೌಕರ್ಯಗಳನ್ನು ಒದಗಿಸುವಂತಾಗಬೇಕು. ರಸ್ತೆ, ವಿದ್ಯುತ್, ನೀರು, ಕೃಷಿಯ ಯಂತ್ರಗಳು, ಸಂಸ್ಕರಣೆ, ಸಂಗ್ರಹಣೆ, ಸಾಗಾಣಿಕೆ, ಮಾರುಕಟ್ಟೆ, ತರಬೇತಿಗಳನ್ನು ಒದಗಿಸುವಂತಾಗಬೇಕು.
4. ಕೃಷಿಯಲ್ಲಿ ಮಹಿಳೆಯರಿಗೆ ಜಂಟಿ ಪಟ್ಟಾ ವ್ಯವಸ್ಥೆಯೊಂದಿಗೆ ಮಹಿಳಾ

ಪುಟ 12 ಕ್ಕೆ

ನರೇಂದ್ರ ಮೋದಿಯವರು 2014 ರ ಚುನಾವಣಾ ಪೂರ್ವದಲ್ಲಿನ ತಮ್ಮ ಭಾಷಣಗಳಲ್ಲಿ, ತಾನು ಅಧಿಕಾರಕ್ಕೆ ಬಂದಕೂಡಲೇ ರೈತರ ಆಧಾಯವನ್ನು ದ್ವಿಗುಣ ಮಾಡುವ ನಿಟ್ಟಿನಲ್ಲಿ ಡಾ.ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರುವುದಾಗಿ ಹೇಳಿದ್ದರು. ಆದರೆ ಅಧಿಕಾರಕ್ಕೆ ಬಂದ 6 ತಿಂಗಳಲ್ಲಿ ಸುಪ್ರಿಂ ಕೋರ್ಟ್ ಗೆ ಪ್ರಮಾಣಪತ್ರ ಸಲ್ಲಿಸಿ 'ಎಂ.ಎಸ್.ಸ್ವಾಮಿನಾಥನ್ ವರದಿಯನ್ನು ಜಾರಿಗೆ ತಂದರೆ ಮಾರುಕಟ್ಟೆಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಿ, ದೇಶದ ಆರ್ಥಿಕತೆ ಏರುಪೇರಾಗುತ್ತದೆ. ಆದ್ದರಿಂದ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ' ಎಂದು ಹೇಳಿದರು. ಇದು ಮೋದಿ ಸರ್ಕಾರ ದೇಶದ ರೈತ ಸಮುದಾಯಕ್ಕೆ ಮಾಡಿದ ಅತ್ಯಂತ ದೊಡ್ಡ ವಂಚನೆಯಾಗಿದೆ.

"ಕರ್ನಾಟಕ ಮಾದರಿ ಅಭಿವೃದ್ಧಿಯ" ಹೊಸ ದೃಷ್ಟಾಂತ ಎಂದು ಬಣ್ಣಿಸಲಾದ ಕಾಂಗ್ರೆಸ್ ಸರ್ಕಾರದ ಸಿದ್ದರಾಮಯ್ಯನವರ 15 ನೇ ಬಜೆಟ್ ಮಂಡನೆಯಾಗಿದೆ. ಸಾಮಾಜಿಕ ನ್ಯಾಯ, ಶರಣರ ಕಾಯಕ ಮತ್ತು ದಾಸೋಹ ತತ್ವಗಳ ಪ್ರೇರಣೆ, ಸಂಪತ್ತಿನ ನ್ಯಾಯಯುತ ಹಂಚಿಕೆ, ಮುಂತಾದ ಆಶಯಗಳನ್ನು ಸಾಕಾರಗೊಳಿಸುವ ಬಜೆಟ್ ಇದೆಂದು ಹೇಳಲಾಗಿದೆ. ಬಜೆಟ್ ನಿಜಕ್ಕೂ ಈ ಆಶಯಗಳನ್ನು ಈಡೇರಿಸುವ ಅಂಶಗಳನ್ನು ಹೊಂದಿದೆಯಾ ಎಂಬುದೇ ಪ್ರಶ್ನೆ. ಒಟ್ಟಾರೆಯಾಗಿ, ಈ ಬಜೆಟ್, ಒಕ್ಕೂಟ ಮತ್ತು ರಾಜ್ಯ ಸರ್ಕಾರದ ನಡುವಿನ ಹಣಕಾಸು ಹಂಚಿಕೆಯ ಸಂಘರ್ಷ ಮತ್ತು ರಾಜ್ಯ ಕಾಂಗ್ರೆಸ್ ಸರ್ಕಾರದ ಒಳಗಿನ ಸಾಮಾಜಿಕ ನ್ಯಾಯ ಮತ್ತು ಕಾರ್ಪೋರೇಟ್ ಶಕ್ತಿಗಳ ನಡುವಿನ ಸಂಘರ್ಷದ ಪ್ರತೀಕವಾಗಿಯೂ ಕಾಣುತ್ತದೆ.

ರಾಜ್ಯ ಬಜೆಟ್: ಹೊಣೆಗಾರಿಕೆ ಮತ್ತು ಸಾಲ ಹೆಚ್ಚಳದ ನಡುವೆ ಸರ್ವಾಂಗೀಣ ಅಭಿವೃದ್ಧಿಯ ಮಂತ್ರ

ಡಾ.ಕೆ.ಪ್ರಕಾಶ್
–ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

ಕೆಲವು ಅಂಶಗಳ ಹೊರತಾಗಿಯೂ ರಾಜ್ಯದ ಬಜೆಟ್ ವಿಶಾಲ ಜನಸಮೂಹಗಳಿಗೆ ಅಲ್ಪಸ್ವಲ್ಪ ಪರಿಹಾರ ನೀಡುವ ಪ್ರಸ್ತಾಪಗಳನ್ನು ಹೊಂದಿದೆ. ವಿವಿಧ ಕ್ಷೇತ್ರಗಳಿಗೆ ನೀಡಿರುವ ಹಣಕಾಸಿನ ಆಧಾರದಲ್ಲಿ ಸರ್ಕಾರದ ಆದ್ಯತೆಗಳನ್ನು ಗಮನಿಸಬಹುದು. ಸಾಮಾಜಿಕ ನ್ಯಾಯಕ್ಕೆ ಕಳೆದ ಬಾರಿಗಿಂತ 10,867 ಕೋಟಿ ರೂ. ಹೆಚ್ಚಾಗಿ ನೀಡಲಾಗಿದೆ. ಕೃಷಿ ಮತ್ತು ಕೃಷಿ ಸಂಬಂಧಿತ ವಲಯಕ್ಕೆ 3,022 ಕೋಟಿ ರೂ., ಗ್ರಾಮೀಣ ಅಭಿವೃದ್ಧಿಗೆ 847 ಕೋಟಿ ರೂ., ವಿದ್ಯುತ್ 1940 ಕೋಟಿ ರೂ., ರಸ್ತೆ ಸಾರಿಗೆ 2,164 ಕೋಟಿ ರೂ. ಮತ್ತು ಇತರ ಕೆಲವು ಕ್ಷೇತ್ರಗಳಿಗೆ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ಬೆಂಗಳೂರನ್ನು ಹೊರತುಪಡಿಸಿದ ನಗರಾಭಿವೃದ್ಧಿಗೆ ಕೇವಲ 1,279 ಕೋಟಿ ರೂ. ಗಳನ್ನು ನೀಡಲಾಗಿದೆ. ಇದು ಕಳೆದ ವರ್ಷದ ಪರಿಷ್ಕೃತ ಬಜೆಟಿಗಿಂತ 692 ಕೋಟಿ ರೂ ಕಡಿಮೆಯಾಗಿದೆ. ಪೌಷ್ಟಿಕಾಂಶಕ್ಕೆ 998 ಕೋಟಿ ರೂ. ಕಡಿತಗೊಳಿಸಲಾಗಿದೆ. ಬಡ್ಡಿ ಪಾವತಿಗೆ ಕಳೆದ ಬಾರಿಗಿಂತ 8,691 ಕೋಟಿ ರೂ ಹೆಚ್ಚಾಗಿ ಪಾವತಿಸಬೇಕಾಗಿದೆ.

ರಾಜ್ಯ ಜಿ.ಎಸ್.ಟಿ. ಸಂಗ್ರಹದಲ್ಲಿ ಕಳೆದ ವರ್ಷದ ಪರಿಷ್ಕೃತ ಅಂದಾಜಿನಲ್ಲಿ 4,783 ಕೋಟಿ ರೂ. ಕೊರತೆಯಿದೆ. ಹಾಗಿದ್ದರೂ ಈ ಬಜೆಟಿನಲ್ಲಿ ಇನ್ನೂ 15,108 ಕೋಟಿ ರೂ. ಹೆಚ್ಚುವರಿ ಸಂಗ್ರಹದ ನಿರೀಕ್ಷೆ ಹೊಂದಲಾಗಿದೆ. ರಾಜ್ಯವು ಯಾವುದೇ ಸಮಸ್ಯೆಗಳಿಲ್ಲದೆ ಅಭಿವೃದ್ಧಿ ಹೊಂದಿದಲ್ಲಿ ಸಾಧಿಸಬಹುದಾದ ಅಂಶವಿದು. ಅದೇ ರೀತಿ ಕಾರ್ಪೋರೇಟ್ ತೆರಿಗೆ ಮತ್ತು ಆದಾಯ ತೆರಿಗೆಗಳಲ್ಲಿ ಹೆಚ್ಚಿನ ಸಂಗ್ರಹದ ನಿರೀಕ್ಷೆ ಇದೆ.

ರಾಜ್ಯವು ತಾನು ವಿಧಿಸಬಹುದಾದ ತೆರಿಗೆ ಬಾಬತ್ತುಗಳಿಂದ ಹೆಚ್ಚಿನ ಆದಾಯ ನಿರೀಕ್ಷೆ ಮಾಡುತ್ತಿದೆ. ರಾಜ್ಯ ಅಬಕಾರಿಯಿಂದ 4025 ಕೋಟಿ ರೂ., ಸ್ಟಾಂಪ್ಸ್ ಮತ್ತು ನೋಂದಣಿಯಿಂದ 6000 ಕೋಟಿ ರೂ., ವಾಹನಗಳ ಮೇಲಿನ ತೆರಿಗೆಯಿಂದ 1600 ರೂ., ವಿದ್ಯುತ್ ಮೇಲಿನ ತೆರಿಗೆಯಿಂದ 857 ಕೋಟಿ ರೂ.ಗಳನ್ನು ಹೆಚ್ಚಿನ ಆದಾಯವನ್ನು ನಿರೀಕ್ಷಿಸುತ್ತಿದೆ. ಈ ಅಂಕಿ–ಅಂಶಗಳು 2023–24 ರ ಪರಿಷ್ಕೃತ ಬಜೆಟಿಗಿಂತ ಹೆಚ್ಚಾಗಿರುವ ನಿರೀಕ್ಷೆ ಇದೆ. ಇದು ಸಾಮಾನ್ಯ ಜನರ ಜೀವನ ವೆಚ್ಚಗಳನ್ನು ದುಬಾರಿ ಮಾಡಲಿದೆ.

ಅಸಂಘಟಿತ ಕಾರ್ಮಿಕರ...

ದುಡಿವ ಜನ ವಿಶೇಷವಾಗಿ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ನೀಡಬೇಕಾದ ಮಹತ್ವ ಮತ್ತು ಪಾಲು ನೀಡಿಲ್ಲ. ಸ್ಕೀಮ್ ನೌಕರರಿಗೆ ಮತ್ತಿತರರಿಗೆ ನೀಡಿದ ಭರವಸೆಯಂತೆ ಹಾಗೂ ಅವರ ಹಕ್ಕೊತ್ತಾಯದಂತೆ ತೀವ್ರ ಬೆಲೆ ಏರಿಕೆಯ ಪ್ರಶ್ನೆಗಳನ್ನು ಕಡೆಗಣಿಸಲಾಗಿದೆ ಮತ್ತು ವೇತನ ಹೆಚ್ಚಳಗಳನ್ನು ಮಾಡಿಲ್ಲ. ಗುತ್ತಿಗೆ ಹಾಗೂ ಮುನಿಸಿಪಲ್ ಕಾರ್ಮಿಕರ ನೇರಪಾವತಿ, ಸಮಾನ ವೇತನದ ಪ್ರಶ್ನೆಗಳನ್ನು ನಿರ್ಲಕ್ಷಿಸಲಾಗಿದೆ. ಸರ್ಕಾರಿ ನೌಕರರ ವೇತನದ ಪ್ರಶ್ನೆಯನ್ನು ವೇತನ ಆಯೋಗದ ಅವಧಿಯ ನೆಪದಲ್ಲಿ ಮುಂದೂಡಲಾಗಿದೆ. ಹಳೇ ಪಿಂಚಣಿ ಯೋಜನೆಯ ಪ್ರಶ್ನೆಯನ್ನು ಪರಿಹರಿಸಿಲ್ಲ.



ಪುಟ 14 ಕ್ಕೆ

ನವ–ಉದಾರವಾದಿ ನೀತಿಗಳಿಗೆ ಜೋತು ಬೀಳುವ ಪ್ರಯತ್ನ

ರಾಜ್ಯ ಮಧ್ಯಮಾವಧಿ ವಿತ್ತೀಯ ವರದಿಯು ಚಿತ್ರಿಸಿರುವ ರಾಜ್ಯದ ಆರ್ಥಿಕ ಪರಿಸ್ಥಿತಿ ಹೀಗಿದೆ: ಕರ್ನಾಟಕದ ಜಿ.ಎಸ್.ಡಿ.ಪಿ.ಯು 2023–24 (ಖಇ) ರಲ್ಲಿ 25,67,340 ಕೋಟಿ ರೂ.ಗಳು. ಇದರ ಆಧಾರದಲ್ಲಿ ಬೆಳವಣಿಗೆ ದರ ಶೇ. 10.2 ರಷ್ಟಾಗಲಿದೆ ಎಂದು ಅಂದಾಜಿಸಲಾಗಿದೆ. 2024–25 ರಲ್ಲಿ 28,09,063 ಕೋಟಿ ರೂ.ಗಳು ಎಂದು, ಶೇ. 12.3 ರಷ್ಟು ಬೆಳವಣಿಗೆ ದರ ಇರಲಿದೆ ಎಂದು ಅಂದಾಜಿಸಲಾಗಿದೆ. (ಇದಕ್ಕೆ ಒಕ್ಕೂಟ ಸರ್ಕಾರ ಇನ್ನೂ ಸೂಚಿಸಿಲ್ಲ). ಆಂತರಿಕ ಬೇಡಿಕೆ ಹೆಚ್ಚಳವಾಗುವುದರಿಂದ ಈ ಬೆಳವಣಿಗೆ ಆಗುತ್ತದೆ ಎನ್ನಲಾಗಿದೆ. ಆದರೆ ಈ ನಿರೀಕ್ಷೆಗೆ ವಿರುದ್ಧವಾಗಿ ರಾಜ್ಯದ ಹಣದುಬ್ಬರ ಪ್ರಮಾಣವು ಕಳೆದ ವರ್ಷ ಶೇ. 5.48 ರಷ್ಟು ಇದ್ದದ್ದು ಈ ವರ್ಷ ಶೇ. 6.65 ಕ್ಕೆ ಹೆಚ್ಚಳವಾಗಿದೆ. ಈ ವರ್ಷದಲ್ಲಿ ಹಣದುಬ್ಬರ ಕಡಿಮೆಯಾಗುವ ಸಾಧ್ಯತೆಗಳು ಆಶಾದಾಯಕವಾಗಿ ಕಾಣುತ್ತಿಲ್ಲ. ಇದು ಜನರ ಕೊಳ್ಳುವ ಶಕ್ತಿಯನ್ನು ಖಂಡಿತವಾಗಿ ಕಡಿಮೆ ಮಾಡಲಿದೆ. ಜೊತೆಗೆ, ವಿದೇಶೀ ನೇರ ಹೂಡಿಕೆಯಲ್ಲಿ ದೇಶದಲ್ಲಿ 3 ನೇ ಸ್ಥಾನದಲ್ಲಿರುವ ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಶೇ. 47 ರಷ್ಟು ವಿದೇಶೀ ಹೂಡಿಕೆ ಕಡಿಮೆಯಾಗಿದೆ. ಮುಂದಿನ ಅವಧಿಯಲ್ಲಿ ತೀವ್ರವಾದ ಬರ, ನಿರುದ್ಯೋಗ ಮುಂತಾದ ಅಂಶಗಳು, ಒಟ್ಟಾರೆ ಜಿ.ಎಸ್.ಡಿ.ಪಿ. ಬೆಳವಣಿಗೆ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಹೀಗಿರುವಾಗ ಇದನ್ನು ಸಾಧಿಸಲು ಸಿದ್ದರಾಮಯ್ಯ ಸರ್ಕಾರ ನವ–ಉದಾರವಾದಿ ನೀತಿಗಳಿಗೆ ಜೋತು ಬೀಳುವ ಪ್ರಯತ್ನಗಳನ್ನು ಮಾಡಿದ್ದಾರೆ.

2023–24 ರಲ್ಲಿ ವಿತ್ತೀಯ ಕೊರತೆ 68,505 ಕೋಟಿ ರೂ. ಗಳು. ಜಿ.ಎಸ್.ಡಿ.ಪಿ.ಗೆ ವಿತ್ತೀಯ ಕೊರತೆಯ ಅನುಪಾತವು ಶೇ. 2.67 ಆಗಿದೆ. 2024–25 ರಲ್ಲಿ ವಿತ್ತೀಯ ಕೊರತೆ 82,981 ಕೋಟಿ ರೂ.ಗಳು. ಜಿ.ಎಸ್.ಡಿ.ಪಿ. ಅನುಪಾತವು ಶೇ. 2.95 ಕ್ಕೆ ಹೆಚ್ಚಾಗಲಿದೆ. ಹೀಗಾಗಿ ವಿತ್ತೀಯ ಕೊರತೆಯು ಜಿ.ಎಸ್.ಡಿ.ಪಿ.ಯ ಶೇ. 3 ರ ಮಿತಿಯೊಳಗೇ ಇದೆ ಎನ್ನಲಾಗಿದೆ. ಒಟ್ಟು ಸಾಲಗಳು ಮತ್ತು ಹೊಣೆಗಾರಿಕೆಗಳು 2024–25 ರಲ್ಲಿ 6,65,095 ಕೋಟಿ ರೂ.ಗಳು. ಇದು ಜಿ.ಎಸ್.ಡಿ.ಪಿ.ಯ ಶೇ. 23.68 ರಷ್ಟಿದೆ. ಇದೂ ಕೂಡಾ ಜಿ.ಎಸ್.ಡಿ.ಪಿ.ಯ ಶೇ. 25 ರ ಮಿತಿಯೊಳಗೇ ಇದೆ ಎನ್ನಲಾಗಿದೆ.

ಪ್ರಸ್ತುತ ಬಜೆಟ್‌ನಲ್ಲಿ ಒಟ್ಟಾರೆ ರೆವನ್ಯೂ ಸ್ವೀಕೃತಿಯನ್ನು ಶೇ. 16 ರಷ್ಟು ಹೆಚ್ಚಳದೊಂದಿಗೆ 2,63,178 ಕೋಟಿ ರೂ.ಗಳೆಂದು, ಒಟ್ಟು ವೆಚ್ಚವನ್ನು ಶೇ. 17 ರಷ್ಟು ಹೆಚ್ಚಳದೊಂದಿಗೆ 3,71,383 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ಬಂಡವಾಳ ವೆಚ್ಚವನ್ನು 55,877 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದ್ದು ಇದನ್ನು ಪೂರ್ಣವಾಗಿ ಸಾಲದ ಹಣದಿಂದಲೇ ನಿರ್ವಹಿಸಲು ತೀರ್ಮಾನಿಸಲಾಗಿದೆ. ಈ ಸಾಲಿನ ಒಟ್ಟಾರೆ ಸಾಲ 1,05,246 ಕೋಟಿ ರೂಗಳೆಂದು ಅಂದಾಜಿಸಲಾಗಿದೆ.

ವೆಚ್ಚಗಳಲ್ಲಿ ಪ್ರಧಾನವಾಗಿ ರಾಜ್ಯ ಸರ್ಕಾರಿ ಮತ್ತು ಸಂಬಂಧಿತ ನೌಕರರ ವೇತನಗಳು ಮತ್ತು ಪಿಂಚಣಿಗಳಿಗೆ ರಾಜಸ್ವ ವೆಚ್ಚದ ಶೇ. 39 ರಷ್ಟು ಖರ್ಚಾಗಲಿದೆ. ಬಡ್ಡಿ ಪಾವತಿಗಳಿಗೆ ರಾಜಸ್ವ ವೆಚ್ಚದ ಶೇ. 14 ರಷ್ಟು ಖರ್ಚಾಗಲಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇ. 15 ರಷ್ಟು ಹೆಚ್ಚಳವನ್ನು ಕಂಡಿದೆ.

ಜೀವನ ನಿರ್ವಹಣೆಯ ವೆಚ್ಚಗಳನ್ನು ಹೆಚ್ಚಿಸಲಿರುವ ರಾಜ್ಯ ವಿತ್ತೀಯ ಕಾರ್ಯನೀತಿ

ರಾಜ್ಯದ ವಿತ್ತೀಯ ಕಾರ್ಯನೀತಿಯು ನಾಲ್ಕು ಪ್ರಮುಖವಾದ ಅಂಶಗಳ ಮೇಲೆ ನಿಂತಿದೆ ಎಂದು ಹೇಳಲಾಗಿದೆ.

ಒಂದು, ರಾಜಸ್ವ ಹೆಚ್ಚಿಸುವುದು:–ಸಾಮಾನ್ಯ ಮೂಲಗಳನ್ನು ದಕ್ಷಗೊಳಿಸುವುದು ಎಂಬುದರ ಜೊತೆಯಲ್ಲಿ, ತೆರಿಗೆಯೇತರ ಸ್ವೀಕೃತಿಗಳಲ್ಲಿ ಮುಖ್ಯವಾಗಿ ಬಳಕೆದಾರರ ಪುಟ 15 ಕ್ಕೆ

ಎಲ್.ಪಿ.ಜಿ. ನೀತಿಗಳಿಗೆ ಜೋತು ಬಿದ್ದು 'ಸಾರ್ವಜನಿಕ–ಖಾಸಗಿ ಸಹಭಾಗಿತ್ವ' (ಪಿಪಿಪಿ) ಯೋಜನೆ

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಎನ್ನುವಂತೆ ವ್ಯಾಪಕವಾದ ಖಾಸಗೀಕರಣ ಯೋಜನೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮೂಲಕ ಜಾರಿಗೊಳಿಸಲು ಹೊರಟಿದೆ. ರಾಜ್ಯದ ಮೂಲಸೌಕರ್ಯ ಯೋಜನೆಗಳನ್ನು ಖಾಸಗಿ ಹೂಡಿಕೆಯೊಂದಿಗೆ ಅಭಿವೃದ್ಧಿಪಡಿಸಲು ಈಗಿರುವ ಪಿಪಿಪಿ (ಸಾರ್ವಜನಿಕ–ಖಾಸಗಿ ಸಹಭಾಗಿತ್ವ) ನೀತಿ – 2018 ನ್ನು ಮಧ್ಯಂತರ ಪರಿಷ್ಕರಣೆ ಮಾಡುವುದಾಗಿ ಸರ್ಕಾರ ಪ್ರಕಟಿಸಿದೆ. ಈ ಸರ್ವಾಂಗೀಣ ಖಾಸಗೀಕರಣದ ಯೋಜನೆಯು ಸರ್ಕಾರದ ದುರ್ಬಲ ಆರ್ಥಿಕ ಸ್ಥಿತಿಯನ್ನು ಮತ್ತು ನವ–ಉದಾರವಾದಿ ನೀತಿಗಳಿಗೆ ಮಣೆ ಹಾಕಿರುವುದನ್ನು ಸೂಚಿಸುತ್ತದೆ.

ಖಾಸಗೀಕರಣದ ವ್ಯಾಪಕತೆ ಹೇಗಿದೆಯೆಂಬುದನ್ನು, ಪಿಪಿಪಿ ವ್ಯಾಪ್ತಿಗೆ ತರಲಾದ ಕೆಳಕಂಡ ಯೋಜನೆಗಳ ಮೂಲಕ ತಿಳಿಯಬಹುದು: ಸಿರಿಧಾನ್ಯ ಯೋಜನೆ – ನಮ್ಮ ಮಿಲ್ಲೆಟ್ ಯೋಜನೆ, ಕೃಷಿ ಇಲಾಖೆಯ ಆರ್.ಕೆ.ಶಾಲಾ ಕೃಷಿ ಕ್ಷೇತ್ರವನ್ನು ಜ್ಞಾನ ಕೇಂದ್ರವನ್ನಾಗಿ ಮಾಡುವ ಯೋಜನೆ, ಶಿವಮೊಗ್ಗ, ವಿಜಯಪುರ ಮತ್ತು ಬೆಂಗಳೂರು ವಿಮಾನ ನಿಲ್ದಾಣಗಳ ಬಳಿ ಆಹಾರ ಪಾರ್ಕ್‌ಗಳ ಸ್ಥಾಪನೆ, ಬೆಂಗಳೂರಿನಲ್ಲಿ ವಾಣಿಜ್ಯ ಪುಷ್ಪ ಮಾರುಕಟ್ಟೆ, ತೋಟಗಾರಿಕೆ ಬೆಳಗಳ ಸಂಸ್ಕರಣೆ ಮತ್ತು ರಫ್ತು ಹೆಚ್ಚಿಸಲು ನಿರ್ವಹಣಾ ಕೇಂದ್ರಗಳು, ಚಿಕ್ಕಮಗಳೂರಿನಲ್ಲಿ ಸಾಂಬಾರು ಪದಾರ್ಥಗಳ ಸ್ಪೈಸ್ ಪಾರ್ಕ್, ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬಳ್ಳಾರಿ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಳಗಾವಿ ಎಪಿಎಂಸಿ ಮಾರುಕಟ್ಟೆಗಳಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪನೆ, ಎಪಿಎಂಸಿ ಗಳಲ್ಲಿ ವಿದ್ಯುತ್ ವಾಹನಗಳ ಚಾರ್ಜಿಂಗ್ ಕೇಂದ್ರಗಳು ಹಾಗೂ ಪೆಟ್ರೋಲ್ ಬಂಕುಗಳ ಸ್ಥಾಪನೆ, ಕರ್ನಾಟಕ ರಾಜ್ಯ ಉಗ್ರಾಣದ ಖಾಲಿ ಜಾಗಗಳಲ್ಲಿ ಶೀಥಲ ಗೃಹಗಳ ಸ್ಥಾಪನೆ, ಮೈಸೂರಿನ ಬೃಂದಾವನ್ ಗಾರ್ಡನ್ ಉನ್ನತೀಕರಣ, ಜಲಸಂಪನ್ಮೂಲ ಇಲಾಖೆಯ ಜಮೀನುಗಳಲ್ಲಿ ಮತ್ತು ಜಲಾಶಯಗಳ ಹಿನ್ನೀರಿನಲ್ಲಿ ಸೋಲಾರ್ ಪಾರ್ಕುಗಳ ಸ್ಥಾಪನೆ, ಕೊಡಗಿನ ವೈದ್ಯಕೀಯ ಕಾಲೇಜಿನಲ್ಲಿ ಕಾರ್ಡಿಯಾಕ್ ಯೂನಿಟ್ ಸ್ಥಾಪನೆ, ಐಟಿಐಗಳಲ್ಲಿ ಉದ್ಯೋಗಶೀಲತೆ ಹೆಚ್ಚಳದ ಹೆಸರಿನ ಡ್ಯುಯೆಲ್ ಸಿಸ್ಟಂ ಆಫ್ ಟ್ರೈನಿಂಗ್, 27,000 ಕೋಟಿ ರೂ ವೆಚ್ಚದಲ್ಲಿ 73 ಕಿ.ಮೀ.ಗಳ ಫೆರಿಫೆರಲ್ ರಿಂಗ್ ರಸ್ತೆಯನ್ನು ಬೆಂಗಳೂರು ಬಿಸಿನೆಸ್ ಕಾರಿಡಾರ್ ಆಗಿ ಪರಿವರ್ತನೆ, ಬಿಎಂಟಿಸಿಯಲ್ಲಿ ವಿದ್ಯುತ್ ಖಾಸಗಿ ಬಸ್ಸುಗಳ ಹೆಚ್ಚಳ, ಬೆಂಗಳೂರಿನ ಮಾದಾವರದಿಂದ ತುಮಕೂರಿಗೆ ಮತ್ತು ಬೆಂಗಳೂರು ವಿಮಾನ ನಿಲ್ದಾಣದಿಂದ ದೇವನಹಳ್ಳಿಯವರೆಗೆ ಮೆಟ್ರೋ ರೈಲು, ಮೈಸೂರಿನ ಪೆರಿಫೆರಲ್ ರಿಂಗ್ ರಸ್ತೆ, ಬೆಂಗಳೂರು ಮತ್ತು ಸುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸಬ್–ಸ್ಟೇಷನ್‌ಗಳ ಸ್ಥಾಪನೆ, 2,500 ವಿದ್ಯುತ್ ವಾಹನಗಳ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ, ಉತ್ತರ ಕನ್ನಡದಲ್ಲಿ ಆಳಸಮುದ್ರ ಸರ್ವ ಋತು ಬಂದರು, ಕಾರವಾರ, ಮಲ್ಪೆ ಮತ್ತು ಹಳೇ ಮಂಗಳೂರು ಬಂದರುಗಳಲ್ಲಿ ನಾಲ್ಕು ಬರ್ತ್ ಗಳ ಅಭಿವೃದ್ಧಿ, ಹಳೆ ಮಂಗಳೂರು ಮತ್ತು ಹಂಗಾರಕಟ್ಟೆ ಬಂದರುಗಳಲ್ಲಿ ಆಧುನಿಕ ಹಡಗು ನಿರ್ಮಾಣ, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ಮೈಸೂರು ವಿಭಾಗಗಳಲ್ಲಿ ಜವಳಿ ಪಾರ್ಕ್‌ಗಳ ಸ್ಥಾಪನೆ, ಬೆಂಗಳೂರು ಉತ್ತರದಲ್ಲಿ ಕ್ರೀಡಾ ನಗರ ಮತ್ತು ನಾಲ್ಕು ಕ್ರೀಡಾ ಸಂಕೀರ್ಣಗಳ ಸ್ಥಾಪನೆ, ಜಲಕ್ರೀಡೆಗಳು ಮತ್ತು ಜಲಸಾಹಸ ಕೇಂದ್ರಗಳು, ಕೇಬಲ್ ಕಾರ್ ಪ್ರವಾಸೋದ್ಯಮ, ವಾಹನಗಳ ಎಫ್.ಸಿ. ಮಾಡಲು 32 ಸ್ಥಳಗಳಲ್ಲಿ ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳು, ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಪಿಪಿಪಿ ಮಾದರಿಯ ಆರ್ಥಿಕ ಬೆಳವಣಿಗೆಯನ್ನು ಕಾಂಗ್ರೆಸ್ ಸರ್ಕಾರ ಪ್ರಸ್ತಾಪಿಸಿದೆ. ಖಾಸಗೀಕರಣದ ದಾರಿಯಲ್ಲಿ ಇದು ದೂರಗಾಮಿ ಜನವಿರೋಧಿ ಪರಿಣಾಮಗಳನ್ನು ಬೀರಲಿದೆ. ಒಕ್ಕೂಟ ಮತ್ತು ರಾಜ್ಯಗಳ ಸಂಪನ್ಮೂಲಗಳ ಹಂಚಿಕೆ ವಿಚಾರದಲ್ಲಿ ಸರಿಯಾಗೇ ಪ್ರತಿರೋಧ ವ್ಯಕ್ತಪಡಿಸಿರುವ ರಾಜ್ಯ ಸರ್ಕಾರವು, ಸಂಪನ್ಮೂಲಗಳ ಬಿಕ್ಕಟ್ಟಿನಿಂದ ಹೊರಬರಲು ಎಲ್.ಪಿ.ಜಿ. ನೀತಿಗಳಿಗೇ ಜೋತುಬಿದ್ದಿರುವುದು ಭವಿಷ್ಯದಲ್ಲಿ ಸಮಸ್ಯೆಗಳನ್ನು ಸೃಷ್ಟಿಸಲಿದೆ.

ಭಾರತೀಯ ಜನತಾ ಪಕ್ಷದ 2014ರ ಚುನಾವಣಾ ಆಶ್ವಾಸನೆಗಳಲ್ಲಿ "ದೇಶದಲ್ಲಿನ ನಿರುದ್ಯೋಗ ಸಮಸ್ಯೆ ಬಗೆಹರಿಸುತ್ತೇವೆ" ಎಂಬುದೂ ಒಂದು. ತಾನು ಅಧಿಕಾರಕ್ಕೆ ಬಂದರೆ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಅಂದು ಮೋದಿ ಜನತೆಗೆ ಭರವಸೆ ಕೊಟ್ಟಿದ್ದರು. ಅವರ ಈ ಭರವಸೆ ಈಡೇರಿದ್ದರೆ, ಅವರ ಆಡಳಿತದ 10 ವರ್ಷಗಳ ಅವಧಿಯಲ್ಲಿ ಹೊಸದಾಗಿ 20 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಈ ರೀತಿ ಆಗಿದ್ದರೆ ಇಂದು ಜನರು ಉದ್ಯೋಗ ಹುಡುಕುತ್ತಾ ಅಲೆಯುವ ಸ್ಥಿತಿ ಇರುತ್ತಿರಲಿಲ್ಲ. ಮೋದಿ ಸರ್ಕಾರ ಮತ್ತಷ್ಟು ಉದ್ಯೋಗ ಸೃಷ್ಟಿಸುವ ಮಾತಿರಲಿ, ಅಂದು ಇದ್ದ ಬಹಳಷ್ಟು ಉದ್ಯೋಗಗಳನ್ನೇ ನಾಶ ಮಾಡುವಂತಹ ನೀತಿಗಳನ್ನು ಅನುಸರಿಸುತ್ತಿದ್ದಾರೆ. 2014ರಲ್ಲಿ 5.44 ರಷ್ಟು ನಿರುದ್ಯೋಗ ದರವು, ಇತ್ತೀಚಿನ ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (CMIE) ವರದಿಯ ಪ್ರಕಾರ, ಜುಲೈ 2023 ರ ಹೊತ್ತಿಗೆ ಭಾರತದಲ್ಲಿ ಒಟ್ಟಾರೆ ನಿರುದ್ಯೋಗ ದರವು ಶೇ. 7.95 ರಷ್ಟಿದೆ. 2023ರ ಅಕ್ಟೋಬರ್ ನಲ್ಲಿ ಇದು ಶೇ. 10.05 ರಷ್ಟಿತ್ತು.

'ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ' ಭರವಸೆ ಏನಾಯ್ತು?

ದೇಶದ ಚುಕ್ಕಾಣಿ ಹಿಡಿದಿರುವ ಬಿಜೆಪಿ 2014ರ ಚುನಾವಣೆಗೂ ಮುನ್ನ ಆಡಿದ ಮಾತುಗಳೇನು? ಅದು ಜನರಿಗೆ ನೀಡಿದ ಭರವಸೆಗಳೇನು? ಅದು ಇಂದು ತನ್ನ ಆಡಳಿತದಲ್ಲಿ ಮಾಡುತ್ತಿರುವುದೇನು? ಮೊದಲೇ, ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿ, ಜನರು ಸಂಕಷ್ಟದಲ್ಲಿ ಸಿಲುಕಿದ್ದರು. ಇಂತಹ ಸಂಕಷ್ಟಗಳನ್ನೇ ಬಂಡವಾಳ ಮಾಡಿಕೊಂಡು, ತನಗೆ ಅಧಿಕಾರ ಕೊಟ್ಟರೆ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಜನರನ್ನು ನಂಬಿಸಿ ಬಿಜೆಪಿ ಅಧಿಕಾರಕ್ಕೆ ಬಂತು. ಇಂತಹ ಸಂದರ್ಭದಲ್ಲಿ ಉದ್ಯೋಗಾವಕಾಶಗಳ ಹೆಚ್ಚಳಕ್ಕೆ ಪೂರಕವಾದ ಯೋಜನೆಗಳನ್ನು ಸರ್ಕಾರ ರೂಪಿಸಬೇಕಿತ್ತು. ಜನರ ಆದಾಯ ಹೆಚ್ಚಿಸುವ ಮೂಲಕ, ಮಾರುಕಟ್ಟೆಯಲ್ಲಿ ಹಣದ ಹರಿವು ಹೆಚ್ಚಿಸುವ ಮೂಲಕ, ಜನರ ಕೊಳ್ಳುವ ಶಕ್ತಿ ಹೆಚ್ಚಿಸಲು ಬೇಕಾದ ವಾತಾವರಣ ನಿರ್ಮಿಸಬೇಕಿತ್ತು. ಇದರಿಂದ ಸರಕುಗಳ ಮಾರಾಟ ಹೆಚ್ಚಳವಾಗಿ ಸರಕುಗಳ ಬೇಡಿಕೆ ಹೆಚ್ಚಾಗುತ್ತದೆ, ಸರಕುಗಳನ್ನು ಉತ್ಪಾಧಿಸುವ ಮತ್ತಷ್ಟು ಸಣ್ಣ ಮತ್ತು ದೊಡ್ಡ ಉದ್ಯಮಗಳ ಸ್ಥಾಪನೆಯಾಗುತ್ತವೆ, ಹಲವರಿಗೆ ಇದರಿಂದ ಸ್ವಂತ ಉದ್ಯೋಗ ಸೃಷ್ಟಿಸಿಕೊಳ್ಳುವ ಅವಕಾಶ ಒದಗುತ್ತದೆ. ಮತ್ತೊಂದೆಡೆ, ಜನರ ಪ್ರವಾಸ ಹೆಚ್ಚಾಗಿ ಪ್ರವಾಸೋದ್ಯಮದ ವೃದ್ಧಿಯ ಜೊತೆಗೆ ಸೇವಾ ವಲಯದಲ್ಲಿ ಬೇಡಿಕೆ ಹೆಚ್ಚಾಗುತ್ತದೆ, ಇದರಿಂದಾಗಿ ಸರಕು ಮತ್ತು ಸೇವಾ ವಲಯಗಳಲ್ಲಿ ಹೊಸ ಹೊಸ ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹ ಸಿಗುತ್ತದೆ.

ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (CMIE) ಲೆಕ್ಕಾಚಾರಗಳ ಪ್ರಕಾರ, ನಿರುದ್ಯೋಗವು 2019 ರಲ್ಲಿ ಶೇ. 5.27 ರಿಂದ 2020 ರಲ್ಲಿ ಶೇ. 8 ಕ್ಕೆ ಏರಿದೆ. ಆ ನಂತರದ ಎರಡು ವರ್ಷಗಳಲ್ಲಿ ಶೇ. 5.98 ಹಾಗೂ ಶೇ. 7.33ರಷ್ಟು ದಾಖಲಾಗಿದೆ. 2023 ರಲ್ಲಿ ಇದು ಮತ್ತಷ್ಟು ಹೆಚ್ಚಾಗಿದೆ. ಈಗ ದೇಶದಲ್ಲಿ ಉದ್ಯೋಗಕ್ಕಾಗಿ ಅಲೆಯುವವರ ಸಂಖ್ಯೆ ಹೆಚ್ಚಾಗಿದೆ. ಆದರೆ ಲಭ್ಯವಿರುವ ಉದ್ಯೋಗಗಳ ಹೆಚ್ಚಳವಿಲ್ಲದೆ ಹಾಗೆಯೇ ಉಳಿದಿವೆ. ವರ್ಷದಿಂದ ವರ್ಷಕ್ಕೆ ಸೂಕ್ತ ವಯೋಮಾನದವರ ಸಂಖ್ಯೆ ಮತ್ತು ಉದ್ಯೋಗ ಅರಸಿ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಮತ್ತೊಂದಡೆ, ಉದ್ಯೋಗಾವಕಾಶಗಳ ಪ್ರಮಾಣದಲ್ಲಿ ಹೆಚ್ಚಾಗುತ್ತಿಲ್ಲ.

ಏಕಾಏಕಿ ನೋಟು ಅಮಾನ್ಯೀಕರಣ

ಮಾರುಕಟ್ಟೆಯಲ್ಲಿ ಹಣದ ಹರಿವು ಹೆಚ್ಚಿಸಬೇಕಾಗಿದ್ದ ಮೋದಿ ಸರ್ಕಾರ ಮಾಡಿದ್ದೇನು? 2016 ರ ನವೆಂಬರ್ 8ರ ರಾತ್ರಿ ಏಕಾಏಕಿ 500 ಮತ್ತು 1000 ರೂ ಮೌಲ್ಯದ ನೋಟುಗಳನ್ನು ಅಮಾನ್ಯೀಕರಣ ಮಾಡಿ ಘೋಷಣೆ ಮಾಡುವ ಮೂಲಕ, ಜನರ ಬಳಿ ಇದ್ದ ಅಲ್ಪ ಸ್ವಲ್ಪ ಹಣವನ್ನೂ ಹಿಂಪಡೆದು ಬಿಟ್ಟರು. ಇದರಿಂದ ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಜನರ ಕೊಳ್ಳುವ ಶಕ್ತಿ ಮಣ್ಣುಪಾಲಾಯಿತು. ಬಹುತೇಕ ಹಣ ಬ್ಯಾಂಕುಗಳ ಖಜಾನೆ ಸೇರಿ ಬೆಚ್ಚಗೆ ಮಲಗಿತು. ಸರ್ಕಾರದ ಇಂತಹ ಅವೈಜ್ಞಾನಿಕ ನಿರ್ಧಾರವು ದೇಶದಾದ್ಯಂತ ಆರ್ಥಿಕ ಅಡೆತಡೆಗಳನ್ನು ಉಂಟುಮಾಡಿತು. ಉತ್ಪಾಧನಾ ಸಂಸ್ಥೆಗಳು ಉತ್ಪಾಧಿಸಿದ ಸರಕುಗಳನ್ನು ಕೊಳ್ಳುವವರೇ ಇಲ್ಲದಂತಾಯಿತು. ಸರಕುಗಳ ಮಾರಾಟವಿಲ್ಲದೆ ಲಕ್ಷಾಂತರ ಸಂಖ್ಯೆಯಲ್ಲಿ ಸಣ್ಣ ಪುಟ್ಟ ಕಾರ್ಖಾನೆಗಳು ಬಾಗಿಲು ಮುಚ್ಚಿದವು. ಅತಿ ಸಣ್ಣ, ಸಣ್ಣ ಉದ್ಯಮಿಗಳು ಸಾಲದ ಸುಳಿಗೆ ಸಿಲುಕಿಕೊಂಡರು. ಇದರಿಂದ ಕೋಟ್ಯಾಂತರ ಕಾರ್ಮಿಕರು ಕೆಲಸ ಕಳೆದುಕೊಂಡರು. ಮತ್ತೊಂದೆಡೆ, ಮದುವೆ ಮತ್ತು ಇತರೆ ಶುಭ ಕಾರ್ಯಗಳಿಗೆ ಜನರ ಬಳಿ ಹಣವೇ ಇರದ ಪರಿಸ್ಥಿತಿ ನಿರ್ಮಾಣವಾಯಿತು. ಜನರ ಪ್ರವಾಸಗಳು ನಿಂತುಹೋದವು. ಪ್ರವಾಸೋದ್ಯಮ ನೆಲ ಕಚ್ಚಿತು. ಹೋಟೆಲುಗಳು, ಬಸ್ಸು, ಟ್ಯಾಕ್ಸಿ, ಆಟೋ, ಇಂತಹ ಸೇವಾ ವಲಯದಲ್ಲಿ ದುಡಿಯುವ ಜನರ ಆದಾಯ ಕುಸಿಯಿತು. ಇಲ್ಲಿಯೂ ಬಹಳಷ್ಟು ಉದ್ಯೋಗಗಳ ನಷ್ಟವಾಯ್ತು.



ಸರಕು ಮತ್ತು ಸೇವಾ ತೆರಿಗೆ (GST)

ನೋಟು ಅಮಾನ್ಯೀಕರಣದಂತಹ ಸರ್ಕಾರದ ಅವೈಜ್ಞಾನಿಕ ನಿರ್ಧಾರದಿಂದ ತೀವ್ರವಾಗಿ ಬಸವಳಿದಿದ್ದ ದೇಶದ ಆರ್ಥಿಕತೆ ಇನ್ನೇನು ಸುಧಾರಿಸಿಕೊಳ್ಳುತ್ತಿದೆ ಎನ್ನುತ್ತಿರುವಾಗಲೇ, 2017ರಲ್ಲಿ ಸರಕು ಮತ್ತು ಸೇವಾ ತೆರಿಗೆ (GST) ಅನುಷ್ಠಾನ ಗೊಳಿಸುವ ಮೂಲಕ ಸಣ್ಣ, ಅತಿ ಸಣ್ಣ ಕೈಗಾರಿಕೆಗಳು ಹಾಗೂ ವ್ಯಾಪಾರಿಗಳಿಗೆ ಮೋದಿ ಮತ್ತೊಂದು ಹೊಡೆದ ನೀಡಿದರು. ತೆರಿಗೆ ರಚನೆಯನ್ನು ಸರಳಗೊಳಿಸುವ ಗುರಿಯನ್ನು ಜಿ.ಎಸ್.ಟಿ. ಹೊಂದಿದೆಯಾದರೂ, ಇದು ಸಣ್ಣ ಉದ್ಯಮಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಸಾಕಷ್ಟು ಅಡೆತಡೆಗಳನ್ನು ಉಂಟುಮಾಡಿತು ಮಾತ್ರವಲ್ಲ, ರಾಜ್ಯಗಳಿಗೆ ಬರುತ್ತಿದ್ದ ಆದಾಯಕ್ಕೂ ಕೊರತೆ ಉಂಟಾಗಿ, ರಾಜ್ಯಗಳ ಜನಪರ ಕಲ್ಯಾಣ ಯೋಜನೆಗಳಿಗೆ ಸಂಪನ್ಮೂಲದ ಕೊರತೆ ಉಂಟಾಯಿತು. ಇದು ಉದ್ಯೋಗದ ಮೇಲೆ ಮತ್ತಷ್ಟು ಕೆಟ್ಟ ಪರಿಣಾಮ ಬೀರಿತು.

ಹಠಾತ್ ಲಾಕ್‌ಡೌನ್ ಘೋಷಣೆ

ಜನಸಾಮಾನ್ಯರ ಮೇಲಿನ ಪ್ರಭುತ್ವದ ಇಂತಹ ದಾಳಿಗಳ ಜೊತೆಗೆ, ಪ್ರಕೃತಿಯೂ ಸೇರಿಕೊಂಡಿತು. ಭಾರತವೂ ಸೇರಿದಂತೆ ಜಗತ್ತಿನ ಎಲ್ಲಡೆ ಕೊರೊನಾ ವೈರಸ್ ದಾಳಿ ಮಾಡಿತು. ಈ ಸಾಂಕ್ರಾಮಿಕ ಭಾರತವನ್ನು ಪ್ರವೇಶಿಸದಂತೆ ಆರಂಭದಲ್ಲೇ ತಡೆಯುವ ಪ್ರಯತ್ನವನ್ನು ಸರ್ಕಾರ ಮಾಡಲಿಲ್ಲ. ಪ್ರವೇಶಿದ ನಂತರವೂ ಅದು ಮತ್ತಷ್ಟು ಹರಡದಂತೆ ಸಾಕಷ್ಟು ಮಂಜಾಗ್ರತಾ ಕ್ರಮವನ್ನೂ ಕೈಗೊಳ್ಳಲಿಲ್ಲ. ಸಾಂಕ್ರಾಮಿಕ ಹರಡಿದ ಮೇಲೆ ಮತ್ತಷ್ಟು ಹರಡದಂತೆ ಸರ್ಕಾರ ತೆಗೆದುಕೊಂಡ ಕ್ರಮವೆಂದರೆ 2020 ರಲ್ಲಿ ಹಠಾತ್ ಲಾಕ್‌ಡೌನ್ ಘೋಷಣೆ. ಜನರು ಜೀವನ ಸಾಗಿಸಲು ಅವಶ್ಯಕವಾದ ಯಾವುದೇ ಪೂರ್ವ ಸಿದ್ಧತೆಯನ್ನು ಸರ್ಕಾರವೂ ಮಾಡದೆ, ಜನತೆ ತಾವೇ ಸ್ವತಃ ವ್ಯವಸ್ಥೆ ಮಾಡಿಕೊಳ್ಳಲು ಒಂದು ದಿನವೂ ಅವಕಾಶ ಕೊಡದೆ, ರಾತ್ರೋರಾತ್ರಿ ಹಠಾತ್ ಲಾಕ್‌ಡೌನ್ ಘೋಷಿಸಿ, ದೇಶದ 130 ಕೋಟಿ ಜನರನ್ನು ಗೃಹಬಂಧನದಲ್ಲಿ ಇರಿಸಿಬಿಟ್ಟರು. ಇದು ನಿರುದ್ಯೋಗವು ಗಗನಕ್ಕೇರಲು ಕಾರಣವಾಯಿತು. ಮೇ 2021 ರಲ್ಲಿ ಕರೋನಾವನ್ನು ನಿಯಂತ್ರಣಕ್ಕೆ ತಂದ ನಂತರ, ನಿರುದ್ಯೋಗ ಹೆಚ್ಚಳವು ಈಗ ಮತ್ತೆ ಗೋಚರಿಸುತ್ತಿದೆ.

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ

ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಶೇ. 100 ರಷ್ಟು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಗೆ ಮೋದಿ ಸರ್ಕಾರ ಅನುಮತಿ ನೀಡಿದೆ. 10 ವರ್ಷಗಳ ಹಿಂದೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಈ ನಿರ್ಧಾರವನ್ನು ಬಿಜೆಪಿ ಬಲವಾಗಿ ವಿರೋಧಿಸಿತ್ತು.

ಎಫ್.ಡಿ.ಐ. ವಿರೋಧಿಸಿ ಬಿಜೆಪಿ ಅಂದು ಹೇಳಿದ್ದು ಹೀಗೆ: "ಸುಧಾರಣೆ ಹೆಸರಿನಲ್ಲಿ, ಸರ್ಕಾರವು ದೀರ್ಘಾವಧಿಯ ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಂಡಿದೆ, ಇದು ನಮ್ಮ ಆರ್ಥಿಕತೆಯ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಕಾಂಗ್ರೆಸ್ ನೇತೃತ್ವದ ಯುಪಿಎ ವಿದೇಶಿ ಒತ್ತಡಕ್ಕೆ ಮಣಿದಿದೆ, ಈ ನಿರ್ಧಾರವು ಉದ್ಯೋಗ ಕಳೆದುಕೊಳ್ಳಲಿರುವ ಲಕ್ಷಾಂತರ ಸಣ್ಣ ವ್ಯಾಪಾರಿಗಳ ಮೇಲೆ ಪರಿಣಾಮ ಬೀರುವುದು ಖಚಿತ. ಎಫ್‌ಡಿಐ ಅಡಿಯಲ್ಲಿ ಶೇಕಡಾ 60–70 ರಷ್ಟು ವ್ಯವಹಾರವು ಕೇವಲ ಎರಡು ಅಥವಾ ಮೂರು ಕಂಪನಿಗಳ ಕೈಗೆ ಹೋಗುತ್ತದೆ, ಇದು ರೈತರಿಗೆ ಹಾನಿಕಾರಕವಾಗಿದೆ. ರೈತರು ತಮ್ಮ ಉತ್ಪನ್ನಗಳನ್ನು ಅವರಿಗೆ ಮಾರಾಟ ಮಾಡುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಮಾರಾಟಗಾರರ ಸಂಖ್ಯೆ ಕಡಿಮೆಯಾದಾಗ, ರೈತರಿಗೆ ಹೇಗೆ ಪ್ರಯೋಜನವಾಗುತ್ತದೆ?". ಬಿಜೆಪಿ ಅಂದು ಹೇಳಿದ ಈ ಮಾತುಗಳಲ್ಲಿ ಎಷ್ಟು ಸತ್ಯ ಇದೆಯಲ್ಲವೇ? ಆದರೆ, ಅದು ಅವರ ಒಡಲಾಳದ ಮಾತುಗಳಾಗಿರಲಿಲ್ಲ ಎಂಬುದೂ ಅಷ್ಟೇ ಸತ್ಯ.

ಆರ್ಥಿಕ ಬೆಳವಣಿಗೆ; ಉದ್ಯೋಗಗಳ ಬೆಳವಣಿಗೆಯಲ್ಲ

ದೇಶದಲ್ಲಿ ಆರ್ಥಿಕ ಬೆಳವಣಿಗೆ ದಾಖಲಾಗಿದ್ದರೂ ಅದು ಉದ್ಯೋಗ ಬೆಳವಣಿಗೆಗೆ ಕಾರಣವಾಗುವುದಿಲ್ಲ. ನವ ಉದಾರೀಕರಣ ನೀತಿಯಿಂದಾಗಿ ಸಣ್ಣ ಮತ್ತು ಮಧ್ಯಮ ಉದ್ಯಮ ವಲಯವು ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿದೆ. ಸರ್ಕಾರ ಈ ಕ್ಷೇತ್ರಕ್ಕೆ ನೀಡುತ್ತಿದ್ದ ಬೆಂಬಲವನ್ನು ಕ್ರಮೇಣ ಹಿಂತೆಗೆದುಕೊಂಡಿತು. ಮೇಲಾಗಿ ವಿದೇಶಿ ಉತ್ಪನ್ನಗಳ ಆಮದಿಗೆ ಯಾವುದೇ ನಿರ್ಬಂಧಗಳಿಲ್ಲದೇ ಇರುವುದರಿಂದ ಈ ವಲಯಕ್ಕೆ ಪೈಪೋಟಿ ಹೆಚ್ಚಿದೆ. ಇಂತಹ ಸ್ಪರ್ಧೆಯನ್ನು ಎದುರಿಸಲು ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಸರ್ಕಾರ ಬೆಂಬಲಿಸಬೇಕಿತ್ತು. ಆದರೆ ಅದಕ್ಕಿಂತ ಭಿನ್ನವಾಗಿ, ಹಿಂದೆ ಇದ್ದ ಬೆಂಬಲವನ್ನೂ ಹಿಂತೆಗೆದುಕೊಂಡಿತು. ಕೋವಿಡ್ ನಂತರದ ಕಾಲದಲ್ಲಿ ಆರ್ಥಿಕ ಬೆಳವಣಿಗೆಯ ದರ ಏರಿದ್ದರೂ ಸಹ, ಅದು ಈ ವಲಯಕ್ಕೆ ಯಾವುದೇ ರೀತಿಯಲ್ಲಿ ಸಹಾಯ ಮಾಡಿಲ್ಲ. ಸಣ್ಣ ಮತ್ತು ಮಧ್ಯಮ ಉದ್ಯಮಗಳ ವಲಯವು ಅತ್ಯುನ್ನತ ಮಟ್ಟದ ಉದ್ಯೋಗಾವಕಾಶಗಳನ್ನು ಹೊಂದಿದೆ. ಅಂತಹ ವಲಯದ ಚೇತರಿಕೆಗೆ ಕೊಡುಗೆ ನೀಡದ ಆರ್ಥಿಕ ಬೆಳವಣಿಗೆಯ ಸ್ವರೂಪದಿಂದಾಗಿ, ಒಂದು ಕಡೆ ಆರ್ಥಿಕ ಬೆಳವಣಿಗೆಯ ದರವು ಹೆಚ್ಚುತ್ತಿರುವಂತೆ ತೋರುತ್ತಿದೆ, ಆದರೆ ಉದ್ಯೋಗಾವಕಾಶಗಳು ಹೆಚ್ಚಿಲ್ಲ.

ಸ್ಟಾರ್ಟಪ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಘೋಷಣೆಗಳು ಘೋಷಣೆಗಳಾಗಿಯೇ ಉಳಿದಿವೆ. ಇದುವರೆಗೆ ರೈತರು, ಕೃಷಿ ಕಾರ್ಮಿಕರ ಆತ್ಮಹತ್ಯೆ ಬಗ್ಗೆ ಕೇಳಿದ್ದೇವೆ. ಈಗ ನಿರುದ್ಯೋಗಿಗಳ ಆತ್ಮಹತ್ಯೆಗಳೂ ನಡೆಯುತ್ತಿವೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಅಂಕಿಅಂಶಗಳು ಹೇಳುತ್ತವೆ. ದೇಶವನ್ನು ಮುನ್ನಡೆಸಬೇಕಾದ ಯುವಕರು ನಿರುದ್ಯೋಗ ಪುಟ 10 ಕ್ಕೆ

ಬಂಡವಾಳಶಾಹಿಯ ಬಿಕ್ಕಟ್ಟು

ಇಂದಿನ ಆರ್ಥಿಕ ಬಿಕ್ಕಟ್ಟು ಜಾಗತಿಕವಾಗಿದೆ ನಿಜ. ಅನೇಕ ಯುರೋಪಿಯನ್ ರಾಷ್ಟ್ರಗಳಲ್ಲಿ ತೀವ್ರ ಆರ್ಥಿಕ ಹಿಂಜರಿತವಿದೆ. ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಬಂಡವಾಳಶಾಹಿ ರಚನೆಯಲ್ಲಿ ಆರ್ಥಿಕ ಬಿಕ್ಕಟ್ಟು ಹಲವು ಬಾರಿ ಸಂಭವಿಸಿದೆ ಮತ್ತು ನಂತರ ಅದು ಚೇತರಿಸಿಕೊಂಡಿದೆ. ಆದರೆ, 2008ರಲ್ಲಿ ಉಂಟಾದ ಆರ್ಥಿಕ ಬಿಕ್ಕಟ್ಟು ಬಹುಕಾಲ ಮುಂದುವರಿದಿದೆ. ಮಾರ್ಕ್ಸ್‌ವಾದ ಪ್ರತಿಪಾದಿಸುವ ಮೂಲಭೂತ ಬದಲಾವಣೆಯನ್ನು ಮಾಡುವ ಮೂಲಕ ಮಾತ್ರ ಆರ್ಥಿಕ ಸಂಕಷ್ಟಗಳನ್ನು ಹೋಗಲಾಡಿಸಬಹುದು. ಬಂಡವಾಳಗಾರರು ಲಾಭ ಹೆಚ್ಚಿಸಿಕೊಳ್ಳಲು ತಮ್ಮ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಗಳನ್ನು ವಿಧಿಸುತ್ತಾರೆ. ಮತ್ತೊಂದೆಡೆ ಉತ್ಪಾದಕತೆಯನ್ನು ಹೆಚ್ಚಿಸಲು ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡಲು ಅವರು ಯಂತ್ರಗಳು ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸುತ್ತಾರೆ. ಇದು ಬಂಡವಾಳಶಾಹಿಗಳಿಗೆ ಲಾಭವನ್ನು ಹೆಚ್ಚಿಸುತ್ತದೆ. ಮತ್ತೊಂದೆಡೆ ಉದ್ಯೋಗ ನಷ್ಟ, ಆದಾಯ ನಷ್ಟ ಮತ್ತು ಜನರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ವಸ್ತುಗಳ ಮಾರಾಟವಾಗದಿದ್ದರೆ, ಇದು ಉತ್ಪಾದನೆಯನ್ನು ನಿಧಾನಗೊಳಿಸುತ್ತದೆ. ಕಾರ್ಖಾನೆಗಳು ಕಾರ್ಯನಿರ್ವಹಿಸುವುದಿಲ್ಲ. ಬಂಡವಾಳಶಾಹಿ ಈ ಸುಳಿದಲ್ಲಿ ಸಿಲುಕಿಕೊಂಡಿದೆ. ಇದು ಇಂದಿನ ಭಾರತದ ಸ್ಥಿತಿ. ಮೋದಿ ಸರ್ಕಾರ ಈ ಇದನ್ನೇ ಅನುಸರಿಸುತ್ತಿದೆ.

‘ಯುವನಿಧಿ’ ಪ್ರಯೋಜನ ಎಷ್ಟು?

‘ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯೆ’ ಎಂಬ ಯುವಜನರ ಘೋಷಣೆಗೆ ಪ್ರಯೋಜನಕಾರಿಯಾಗದ ‘ಯುವನಿಧಿ’

“ಉದ್ಯೋಗದ ಹಕ್ಕು ಮೂಲಭೂತ ಹಕ್ಕು”, “ಉದ್ಯೋಗ ಕೊಡಿ, ಇಲ್ಲವೇ ನಿರುದ್ಯೋಗ ಭತ್ಯೆ ಕೊಡಿ”, ಇದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.)ನ ಹಲವು ಘೋಷಣೆಗಳಲ್ಲಿ ಒಂದು. ಡಿ.ವೈ.ಎಫ್.ಐ. ನಂತಹ ಎಡ ಸಂಘಟನೆಗಳು ದಶಕಗಳ ಕಾಲದಿಂದ ಈ ಬೇಡಿಕೆಯನ್ನು ಇಟ್ಟು ಹೋರಾಟ ನಡೆಸುತ್ತಾ ಬಂದಿವೆ. ನಿರುದ್ಯೋಗದ ವಿರುದ್ಧ ದೇಶಾದ್ಯಂತ ಆಂದೋಲನವನ್ನು ಕಟ್ಟುವಲ್ಲಿ ಡಿ.ವೈ.ಎಫ್.ಐ. ಸಾಕಷ್ಟು ಪ್ರಯತ್ನಗಳನ್ನು ಮಾಡಿದೆ. ಕರ್ನಾಟಕದಲ್ಲಿಯೂ ಇದಕ್ಕಾಗಿ ಹಲವು ದೊಡ್ಡ ಮಟ್ಟದ ಹೋರಾಟಗಳನ್ನು ನಡೆಸಿದೆ. ವಿಜಯನಗರದ ಉಕ್ಕು ಕಾರ್ಖಾನೆ ಸ್ಥಾಪನೆ ಮಾಡಬೇಕು ಎಂಬುದೂ ಸೇರಿದಂತೆ ಸಾರ್ವಜನಿಕ ಉದ್ಯಮಗಳ ಸ್ಥಾಪನೆಗಾಗಿ ಬಹಳಷ್ಟು ಹೋರಾಟಗಳನ್ನು ನಡೆಸಿದೆ. ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ನೇಮಕಾತಿ ನಿಷೇಧದ ವಿರುದ್ಧ ಬೀದಿಗಿಳಿದು ಹೋರಾಡುತ್ತಿದೆ. ಹೀಗಾಗಿ, ಕರ್ನಾಟಕ ರಾಜ್ಯ ಸರ್ಕಾರ ಈಗ ಘೋಷಿಸಿರುವ ‘ಯುವ ನಿಧಿ’ ಎಂಬುದೂ ಯುವಜನತೆಯ ಹೋರಾಟ ಮತ್ತು ಆಳುವ ಪಕ್ಷಗಳ ಮೇಲಿನ ಒತ್ತಡವೂ ಕಾರಣವಾಗಿದೆ.

‘ಯುವನಿಧಿ’ ಎಷ್ಟು ಪರಿಣಾಕಾರಿ?

ಕರ್ನಾಟಕದಲ್ಲಿ ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷವು ನೀಡಿದ ಐದು ಚುನಾವಣಾ ಭರವಸೆಗಳಲ್ಲಿ ಯುವ ನಿಧಿಯೂ ಒಂದು. ಇದನ್ನು ಈಗಾಗಲೇ ಜಾರಿಗೆ ತಂದಿದೆ. ‘ಯುವ ನಿಧಿ’ ಯೋಜನೆ ನಿರುದ್ಯೋಗಿಗಳಿಗೆ ನಿಜಕ್ಕೂ ಸಹಕಾರಿಯಾಗಲಿದೆಯೇ? ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಎಲ್ಲಾ ನಿರುದ್ಯೋಗಿಗಳಿಗೆ ‘ನಿರುದ್ಯೋಗ ಭತ್ಯೆ’ ಸಿಗಲಾರದು ಎಂಬುದು ಯುವನಿಧಿ ವಿಧಿಸಿರುವ ಅರ್ಹತಾ ಮಾನದಂಡಗಳಿಂದ ತಿಳಿಯುತ್ತದೆ.

ಈ ಯೋಜನೆಯಡಿಯಲ್ಲಿ 2022–23ನೇ ಸಾಲಿನಲ್ಲಿ ಉತ್ತೀರ್ಣರಾಗಿ 6 ತಿಂಗಳು (180 ದಿನಗಳು) ಉದ್ಯೋಗ ಸಿಗದ, ವೃತ್ತಿಪರ ಕೋರ್ಸ್ ಒಳಗೊಂಡು ಎಲ್ಲಾ ಪದವೀಧರರರಿಗೆ ಪ್ರತಿ ತಿಂಗಳು 3,000 ರೂ., ಹಾಗೂ ಡಿಪ್ಲೊಮಾ ಪದವೀಧರರಿಗೆ ಮಾಸಿಕ 1,500 ರೂ. ನಿರುದ್ಯೋಗ ಭತ್ಯೆ ಸಿಗಲಿದೆ. ಉದ್ಯೋಗ ಸಿಗುವವರೆಗೆ ಅಥವಾ ಗರಿಷ್ಠ 2 ವರ್ಷಗಳ ಅವಧಿಗೆ ಈ ಯೋಜನೆಯಡಿ ನಿರುದ್ಯೋಗ ಭತ್ಯೆ ಸಿಗಲಿದೆ. ಎಷ್ಟು ನಿರುದ್ಯೋಗಿಗಳಿಗೆ ಸರ್ಕಾರವು ನಿಗದಿಪಡಿಸಿದ ಇಂತಹ ಕಠಿಣ ಮಾನದಂಡಗಳನ್ನು ಪೂರೈಸಲು ಸಾಧ್ಯ?.

ಪದವಿ ಶಿಕ್ಷಣ ಮುಗಿಸಿದ ನಂತರ ಉನ್ನತ ವ್ಯಾಸಂಗಕ್ಕೆ ದಾಖಲಾಗಿ, ವಿದ್ಯಾಭ್ಯಾಸ ಮುಂದುವರಿಸುವವರು, ಅಪ್ರೆಟೀಸ್ ವೇತನ ಪಡೆಯುತ್ತಿರುವವರು, ಸರ್ಕಾರಿ ಅಥವಾ ಖಾಸಗಿ ಉದ್ಯೋಗ ಪಡೆದಿರುವವರು, ಸರ್ಕಾರದ ನಾನಾ ಯೋಜನೆಗಳಡಿ ಅಥವಾ ಬ್ಯಾಂಕ್ ಸಾಲ ಪಡೆದು ಸ್ವಯಂ ಉದ್ಯೋಗ ಹೊಂದಿದವರು ಈ ಯೋಜನೆಯ ಲಾಭ ಪಡೆಯಲು ಅರ್ಹರಲ್ಲ.

ಬಹಳಷ್ಟು ಪದವೀದರ ನಿರುದ್ಯೋಗಿಗಳಿಗೆ ವಂಚನೆ

ಪದವಿ ಶಿಕ್ಷಣ ಮುಗಿಸಿ ಹಲವು ವರ್ಷಗಳಾದರೂ ಶಿಕ್ಷಣಕ್ಕೆ ಅರ್ಹವಾದ ಉದ್ಯೋಗ ಸಿಗದ ಕಾರಣದಿಂದ ಲಕ್ಷಾಂತರ ಯುವಜನತೆ ನಿರುದ್ಯೋಗಿಗಳಾಗಿಯೇ ಇದ್ದಾರೆ. ಇಂತಹ ನಿರುದ್ಯೋಗಿಗಳಿಗೆ ಯುವ ನಿಧಿ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯವಿಲ್ಲ. ಏಕೆಂದರೆ, 2022–23 ರಲ್ಲಿ ಸಾಲಿನಲ್ಲಿ ಪದವಿ ಉತ್ತೀರ್ಣರಾಗಿರುವ ಹಾಗೂ ಉತ್ತೀರ್ಣರಾಗಿ 6 ತಿಂಗಳು ಯಾವುದೇ ಉದ್ಯೋಗ ಸಿಗದಿದ್ದಾಗ, ನಿರುದ್ಯೋಗಿ ಯುವಜನತೆ ‘ಯುವ ನಿಧಿ’ ಯೋಜನೆಯಿಂದ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ. ಇದಕ್ಕೂ ಹಿಂದಿನ ವರ್ಷಗಳಲ್ಲಿ ಪದವಿ ಮುಗಿಸಿರುವ ನಿರುದ್ಯೋಗಿ ಯುವಜನರು ಯುವನಿಧಿ ಯೋಜನೆಗೆ ಅರ್ಹರಲ್ಲ! ಇಷ್ಟು ಮಾತ್ರವಲ್ಲ, ಯುವ ನಿಧಿಗೆ ಅರ್ಹರಾದವರೂ ಕೂಡ 2 ವರ್ಷಗಳು ಮಾತ್ರ ನಿರುದ್ಯೋಗ ಭತ್ಯೆ ಪಡೆಬಹದಷ್ಟೆ. 2 ವರ್ಷಗಳ ನಂತರವೂ



ಉದ್ಯೋಗ ಸಿಗದಿದ್ದರೆ, ಆ ನಂತರ ನಿರುದ್ಯೋಗ ಭತ್ಯೆ ಪಡೆಯಲಾಗದು. ಯುವ ನಿಧಿ ಮೂಲಕ ನಿರುದ್ಯೋಗ ಭತ್ಯೆ ಪಡೆಯುವವರು 2 ವರ್ಷಗಳ ಅವಧಿಯಲ್ಲಿ ಉದ್ಯೋಗ ಸಿಕ್ಕರೆ ಸರ್ಕಾರಕ್ಕೆ ಮಾಹಿತಿ ನೀಡಿ, ಭತ್ಯೆ ಪಡೆಯುವುದರಿಂದ ಹೊರ ಬರಬೇಕು.

ನಿಗದಿತ ಅವಧಿಯ ಉದ್ಯೋಗವೂ ಉದ್ಯೋಗ ಎಂಬ ಲೆಕ್ಕಕ್ಕೆ ಬರುತ್ತದೆಯೇ?

ಇಂದು ಯಾವುದಾದರೂ ಒಂದು ಉದ್ಯೋಗವನ್ನು ಪಡೆಯುವುದೇ ಒಂದು ದೊಡ್ಡ ಸಾಹಸವಾಗಿದೆ. ಆದರಲ್ಲೂ ಸಾಮಾಜಿಕ ಭದ್ರತೆಯೊಂದಿಗೆ ಖಾಯಂ ಉದ್ಯೋಗ ಪಡೆಯುವ ಬಹು ಜನರ ಕನಸು ಕನಸಾಗಿಯೇ ಉಳಿಯುತ್ತದೆ. ಕೆಲಸಕ್ಕೆ ಸೇರುವ ಸಮಯದಲ್ಲಿ, ನಿರ್ಗಮನ ದಿನಾಂಕವನ್ನು ಪ್ರಮಾಣಪತ್ರದಲ್ಲಿ ನಮೂದಿಸಿದರೆ, ಅದು ನಿವೃತ್ತಿಯ ವಯಸ್ಸಿನ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಒಂದು ನಿರ್ದಿಷ್ಟ ಅವಧಿಗೆ ಮಾತ್ರ ಬಳಸಲು ದಿನಾಂಕವನ್ನು ಗುರುತಿಸಿ ನಂತರ ಬಿಡುಗಡೆ ಮಾಡಿದರೆ, ಅದು ‘ನಿಗದಿತ ಅವಧಿಯ ಉದ್ಯೋಗ’ವಾಗಿದೆ. ಇಂದು, ನವ ಉದಾರವಾದವು ನೀಡುವ ಉದ್ಯೋಗದ ಸ್ವರೂಪವು ’ನಿಶ್ಚಿತ ಅವಧಿಯ ಉದ್ಯೋಗ’ ರೂಪದಲ್ಲಿದೆ. ಖಾಯಂ ಉದ್ಯೋಗವಿಲ್ಲ ಎಂದು ಸರ್ಕಾರ ಮತ್ತು ಖಾಸಗಿಯವರು ಒಟ್ಟಾಗಿ ಹೇಳುತ್ತಿರುವುದು ಸ್ಪಷ್ಟವಾಗಿದೆ.

> **ಶೈಕ್ಷಣಿಕ ವರ್ಷದ ಷರತ್ತುಗಳಿಲ್ಲದೆ, ಕಾಲಮಿತಿ ಇಲ್ಲದೆ, ಎಲ್ಲಾ ನಿರುದ್ಯೋಗಿಗಳಿಗೂ, ಅವರಿಗೆ ಉದ್ಯೋಗ ಸಿಗುವವರೆಗೂ ನಿರುದ್ಯೋಗ ಭತ್ಯೆ ನೀಡುವ ಯೋಜನೆ ಬರಬೇಕಿದೆ. ಮಾಸಿಕ ನಿರುದ್ಯೋಗ ಭತ್ಯೆಯನ್ನು ಕನಿಷ್ಠ 5,000 ರೂ ಗಳಿಗೆ ನಿಗದಿಪಡಿಸಬೇಕು. ಹೆಚ್ಚೆಚ್ಚು ಉದ್ಯೋಗ ಸೃಷ್ಟಿ ಮಾಡುವ ಯೋಜನೆಗಳನ್ನು ರೂಪಿಸುವ ಮೂಲಕ ಉದ್ಯೋಗ ಬಯಸುವ ಎಲ್ಲರಿಗೂ ಉದ್ಯೋಗ ದೊರಕುವಂತೆ ಮಾಡಬೇಕಿದೆ.**

ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ಗುತ್ತಿಗೆ ಅಥವಾ ಹೊರಗುತ್ತಿಗೆ ಮೂಲಕ ಉದ್ಯೋಗವನ್ನು ನೀಡುತ್ತವೆ. ಸರ್ಕಾರದ ಸಾಮಾಜಿಕ ಭದ್ರತಾ ಕ್ರಮಗಳ ಕೊರತೆಯಿಂದಾಗಿ ಯುವಜನರು ಇಂತಹ ಕೆಲಸ ಮಾಡುವ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಗುತ್ತಿಗೆ ಆಧಾರಿತ ಉದ್ಯೋಗವು ಸಾಮಾಜಿಕ ಭದ್ರತೆಗೆ ಬದಲಿಯಾಗಿರಲು ಸಾಧ್ಯವಿಲ್ಲ. ಇದು ಖಾಸಗಿ ಲೂಟಿಗೆ ಮಾತ್ರ ದಾರಿ ಮಾಡಿಕೊಡುತ್ತದೆ. ಸಾಮಾಜಿಕ ಭದ್ರತಾ ಯೋಜನೆಗಳು ಇಲ್ಲದಿರುವುದು, ಕೆಲಸಕ್ಕೆ ಹೋಗುವ ಯುವಜನರ ಸ್ಥಿತಿ, ಅನಿಯಮಿತ ಕೆಲಸದ ಅವಧಿ, ಕನಿಷ್ಠ ವೇತನ ಕಾನೂನು ಪಾಲಿಸದಿರುವುದು ಇವುಗಳಿಂದ ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಯುವಜನತೆ ರಕ್ತದೊತ್ತಡ, ಆಯಾಸ, ಮಧುಮೇಹ ಮತ್ತು ಖಿನ್ನತೆಯಂತಹ ರೋಗಗಳಿಗೆ ತುತ್ತಾಗುತ್ತಿರುವುದನ್ನು ಕಾಣಬಹುದು. ಭಾರತದ ಮಾನವ ಸಂಪನ್ಮೂಲ ಸೂಚ್ಯಂಕವು ಸರಿಯಾದ ದಿಕ್ಕಿನಲ್ಲಿ ಸಾಗಲು ಇದು ಅತ್ಯಂತ ದೊಡ್ಡ ಅಡಚಣೆಯಾಗಿದೆ ಎಂಬುದನ್ನು ಸರ್ಕಾರಗಳು ಅರಿತುಕೊಳ್ಳಬೇಕು.

ಯಾವುದು ಉದ್ಯೋಗ?

ಸರ್ಕಾರ ಹೇಳುವ ಉದ್ಯೋಗ ಯಾವುದು? ಖಾಯಂ ಅಲ್ಲದ, ಸುರಕ್ಷಿತವಲ್ಲದ, ನಿಗದಿತ ಅವಧಿಯ, ಉದ್ಯೋಗಗಳೂ ಉದ್ಯೋಗದ ಲೆಕ್ಕಕ್ಕೆ ಬರುತ್ತದೆಯೇ? ಪದವೀದರನೊಬ್ಬ ತಾನು ಪಡೆದ ಶಿಕ್ಷಣಕ್ಕೆ ಅರ್ಹವಾದ ಉದ್ಯೋಗ ಸಿಗದೆ, ಹೊಟೆಲುಗಳಲ್ಲೋ, ಶಾಪಿಂಗ್ ಮಾಲ್ ಗಳಲ್ಲೋ, ಆಹಾರ ಮತ್ತು ದಿನಸಿ ವಿತರಣಾ ಸಂಸ್ಥೆಗಳಲ್ಲಿ ಸುರಕ್ಷಿತವಲ್ಲದ, ಖಾಯಂ ಅಲ್ಲದ, ಪಾರ್ಟ್ ಟೈಮ್ ಉದ್ಯೋಗ ಮಾಡುವವರನ್ನೂ, ತನ್ನ ಶೈಕ್ಷಣಿಕ ಅರ್ಹತೆಗೆ ತಕ್ಕ ಉದ್ಯೋಗ ಸಿಗದೆ, ಅನಿವಾರ್ಯವಾಗಿ ಆಟೋ ರಿಕ್ಷಾ ಅಥವಾ ಟ್ಯಾಕ್ಸಿ ಚಾಲಕರಾಗಿ ತಾತ್ಕಾಲಿಕ ಸ್ವಯಂ ಉದ್ಯೋಗ ಮಾಡುವವರನ್ನೂ ಉದ್ಯೋಗಿಗಳು ಎಂದು ಪರಿಗಣಿಸುವುದು ಸರಿಯೇ?

ಶೈಕ್ಷಣಿಕ ವರ್ಷದ ಷರತ್ತುಗಳಿಲ್ಲದೆ, ಕಾಲಮಿತಿ ಇಲ್ಲದೆ, ಎಲ್ಲಾ ನಿರುದ್ಯೋಗಿಗಳಿಗೂ, ಅವರಿಗೆ ಉದ್ಯೋಗ ಸಿಗುವವರೆಗೂ ನಿರುದ್ಯೋಗ ಭತ್ಯೆ ನೀಡುವ ಯೋಜನೆ ಬರಬೇಕಿದೆ. ಮಾಸಿಕ ನಿರುದ್ಯೋಗ ಭತ್ಯೆಯನ್ನು ಕನಿಷ್ಠ 5,000 ರೂ ಗಳಿಗೆ ನಿಗದಿಪಡಿಸಬೇಕು. ಹೆಚ್ಚೆಚ್ಚು ಉದ್ಯೋಗ ಸೃಷ್ಟಿ ಮಾಡುವ ಯೋಜನೆಗಳನ್ನು ರೂಪಿಸುವ ಮೂಲಕ ಉದ್ಯೋಗ ಬಯಸುವ ಎಲ್ಲರಿಗೂ ಉದ್ಯೋಗ ದೊರಕುವಂತೆ ಮಾಡಬೇಕಿದೆ. ಶೈಕ್ಷಣಿಕ ಅರ್ಹತೆಗೆ ತಕ್ಕ ಉದ್ಯೋಗ ಸಿಗುವಂತಾಗಬೇಕು. ಕೌಶಲ್ಯ ರಹಿತ ಕಾರ್ಮಿಕರಿಗೂ ಉದ್ಯೋಗ ಒದಗಿಸಿಕೊಡಬೇಕು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ವರ್ಷಕ್ಕೆ 200 ದಿನಗಳ ಕೆಲಸ ಮತ್ತು 600 ರೂ ಕೂಲಿ ನಿಗದಿಪಡಿಸಬೇಕು. ಈ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ಆ ಮೂಲಕ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸರ್ಕಾರ ಕಾರ್ಯ ಯೋಜನೆ ರೂಪಿಸುವ ಅಗತ್ಯವಿದೆ.

ನಿರುದ್ಯೋಗಿಗಳಿಗೆ ಪರಿಹಾರದ ಇತಿಹಾಸ

ಜಗತ್ತಿನ ಎರಡನೆಯ ಮಹಾಯುದ್ಧದ ನಂತರ ಸೋವಿಯತ್ ಒಕ್ಕೂಟದಲ್ಲಿದ್ದ ಸಮಾಜವಾದವನ್ನು ಅನುಸರಿಸುವ ದೇಶಗಳ ಸಂಖ್ಯೆ ಹೆಚ್ಚಾಯಿತು. ಸಮಾಜವಾದಿ ರಾಷ್ಟ್ರಗಳು ಉದ್ಯೋಗ ಅಥವಾ ನಿರುದ್ಯೋಗಿಗಳಿಗೆ ವಿವಿಧ ಬಗೆಯ ಪರಿಹಾರವನ್ನು ಖಾತರಿಪಡಿಸಿದವು. ಇದು ಹಲವಾರು ಸಾಮಾಜಿಕ ಭದ್ರತಾ ನೀತಿಗಳನ್ನು ಸಹ ಹೊಂದಿತ್ತು. ಈ ಕಾರಣದಿಂದಾಗಿ, ಹಿಂದಿನ ಸಮಾಜವಾದಿ ದೇಶಗಳಲ್ಲಿನ ಸಾಮಾಜಿಕ ಭದ್ರತಾ ವ್ಯವಸ್ಥೆಗಳು ಪ್ರಪಂಚದ ಅನೇಕ ದೇಶಗಳ ಆಡಳಿತದ ಮೇಲೆ ಪ್ರಭಾವ ಬೀರಿತು. ಇದರ ಪರಿಣಾಮವಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಅನುಸರಿಸುವ ದೇಶಗಳೂ ತಮ್ಮನ್ನು ತಾವು ’ಕಲ್ಯಾಣ ರಾಜ್ಯ’ ಎಂದು ಘೋಷಿಸಿಕೊಂಡವು. ಈ ದೇಶಗಳು ತಮ್ಮ ಪ್ರಜೆಗಳಿಗೆ ಉದ್ಯೋಗ ಅಥವಾ ನಿರುದ್ಯೋಗಿಗಳಿಗೆ ತಾತ್ಕಾಲಿಕ ಪರಿಹಾರದ ನೀತಿಯನ್ನು ಸಹ ಜಾರಿಗೊಳಿಸಿದವು. ಅನೇಕ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ಸಾಮಾಜಿಕ ಭದ್ರತಾ ನೀತಿಯು ಇಂದಿಗೂ ಜಾರಿಯಲ್ಲಿದೆ.

ಆದರೆ ಸೋವಿಯತ್ ಒಕ್ಕೂಟ ಸೇರಿದಂತೆ ಕೆಲವು ಸಮಾಜವಾದಿ ದೇಶಗಳು ಹಿನ್ನಡೆ ಅನುಭವಿಸಿದ ನಂತರ, ಬಂಡವಾಳಶಾಹಿ ರಾಷ್ಟ್ರಗಳು ಕಾರ್ಮಿಕರ ಶೋಷಣೆಯ ನೀತಿಗಳನ್ನು ಇನ್ನಷ್ಟು ವೇಗವಾಗಿ ತೀವ್ರಗೊಳಿಸಿದವು. ಆಧುನಿಕ ಯಂತ್ರೋಪಕರಣಗಳು, ಯಾಂತ್ರೀಕೃತಗೊಂಡ ಮತ್ತು ರೋಬೋಟೈಸೇಶನ್ ಮೂಲಕ ಹೆಚ್ಚಿನ ಕೆಲಸಗಳನ್ನು ಮಾಡಿಸುವುದು, ಸ್ಪರ್ಧೆಯನ್ನು ಹೆಚ್ಚಿಸುವುದು ಮತ್ತು ಕಾರ್ಮಿಕರಿಗೆ ಉದ್ಯೋಗಾವಕಾಶಗಳನ್ನು ಕುಗ್ಗಿಸುವುದು ಇವೆಲ್ಲವೂ ಇಂದು ಸಾಮಾನ್ಯ ಎಂಬಂತಾಗಿದೆ. ಇದು ಶೋಷಣೆಯಲ್ಲಿ ಮತ್ತು ಬಂಡವಾಳ ಕ್ರೋಢೀಕರಣದಲ್ಲಿ ಬಹಳಷ್ಟು ಸಹಾಯಕವಾಗಿದೆ. ಇನ್ನೂ ವಿಶೇಷವೆಂದರೆ, ಈ ದೇಶಗಳು ನಿರುದ್ಯೋಗ ಭತ್ಯೆ ಕೊಡುವುದನ್ನು ಕೈಬಿಡುತ್ತಿವೆ.


ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

2004ರ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳು 61 ಸಂಸತ್ ಸದಸ್ಯರನ್ನು ಹೊಂದಿದ್ದವು. ಯುಪಿಎ ಒಂದರ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಟ್ಟಿದ್ದ ಎಡಪಕ್ಷಗಳ ಒತ್ತಡಕ್ಕೆ ಮಣಿದು, 2004ರಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯನ್ನು ಅನುಷ್ಠಾನಕ್ಕೆ ತಂದಿತು. ಈ ಯೋಜನೆಯ ಮೂಲಕ ವರ್ಷಕ್ಕೆ 200 ದಿನಗಳ ಉದ್ಯೋಗ ಮತ್ತು 600 ರೂ ವೇತನ ನಿಗದಿ ಮಾಡಬೇಕು ಹಾಗೂ ನಗರ ಪ್ರದೇಶಕ್ಕೂ ನರೇಗಾ ಯೋಜನೆ ವಿಸ್ತರಿಸುವ ಮೂಲಕ, ನಗರದ ನಿರುದ್ಯೋಗಿಗಳಿಗೂ ಉದ್ಯೋಗ ಒದಗಿಸಬೇಕೆಂಬ ಬೇಡಿಕೆಯೂ ಇದೆ. ಆದರೆ, ಈಗಿನ ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರ ನರೇಗಾ ಯೋಜನೆಗೆ ಮೀಸಲಿಡುವ ಹಣವನ್ನು ಕ್ರಮೇಣವಾಗಿ ಪುಟ 12 ಕ್ಕೆ

ಮತ್ತೆ ದೆಹಲಿಯ ಗಡಿಗಳಲ್ಲಿ ಗುಡುಗುತ್ತಿರುವ ಅನ್ನದಾತ

ಕೇಂದ್ರ ಸರ್ಕಾರ ರೈತರನ್ನು ಶತೃಗಳಂತೆ ನಡೆಸಿಕೊಳ್ಳುವುದು ದೇಶದ್ರೋಹಕ್ಕೆ ಸಮಾನ

ರಾಷ್ಟ್ರ ರಾಜಧಾನಿ ದೆಹಲಿ ಈಗ ಮತ್ತೊಮ್ಮೆ ಸುದ್ದಿಯಲ್ಲಿದೆ. ದೆಹಲಿ ಹಲವು ಕಾರಣಗಳಿಗಾಗಿ ಯಾವಾಗಲೂ ಸುದ್ದಿಯಲ್ಲಿರುತ್ತದೆ. ಅದು ಪ್ರಜಾಪ್ರಭುತ್ವದ ಶಕ್ತಿ ಕೇಂದ್ರವಲ್ಲವೇ, ಈಗ ಮತ್ತೆ ಅನ್ನದಾತ ರೈತರ ಕಾರಣಕ್ಕಾಗಿ ಸುದ್ದಿಯಾಗಿದೆ. ರೈತರು ಕೇಳುತ್ತಿರುವ ಬೇಡಿಕೆಗಳಲ್ಲಿ ದೇಶದ್ರೋಹದ ಅಂಶಗಳೇನಾದರೂ ಯಾರಿಗಾದರೂ ಗೋಚರಿಸುತ್ತಿದೆಯಾ? ಆದರೆ ರೈತರು ಬೀದಿಗಿಳಿದ ಕೂಡಲೇ ಸರ್ಕಾರಕ್ಕೆ ಅದನ್ನು ಸಹಿಸಿಕೊಳ್ಳಲಾಗಲಿಲ್ಲ. ದೆಹಲಿಯ ಗಡಿಗಳಲ್ಲಿ ತಮ್ಮ ಪೊಲೀಸ್ ಮತ್ತು ಅರೆ ಮಿಲಿಟರಿ ಪಡೆಗಳನ್ನು ಬಳಸಿ ರಣರಂಗವನ್ನೇ ನಿರ್ಮಾಣ ಮಾಡಿದ್ದಾರೆ. ಭಯಾನಕವಾದ ದೃಶ್ಯಗಳನ್ನು ನಾವು ಈಗ ದೆಹಲಿಯ ಗಡಿಗಳಲ್ಲಿ ನೋಡುತ್ತಿದ್ದೇವೆ.



ಎಚ್.ಆರ್.ನವೀನ್ ಕುಮಾರ್

ನಮಗೆಲ್ಲರಿಗೂ ನೆನಪಿರಬಹುದು, 2020 ನವೆಂಬರ್ 26 ರಂದು ಲಕ್ಷಾಂತರ ರೈತರು ತಮ್ಮ ಮಿತ್ರ ಟ್ರ್ಯಾಕ್ಟರ್‌ಗಳ ಜೊತೆ ದೆಹಲಿಯ 5 ಗಡಿಗಳಲ್ಲಿ ಬೀಡುಬಿಟ್ಟರು. ಪಂಜಾಬ್, ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ರೈತರು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲು ದೆಹಲಿಯತ್ತ ಹೆಜ್ಜೆ ಹಾಕಿದರು. ಇವರುಗಳನ್ನು ಕೇಂದ್ರ ಗೃಹ ಇಲಾಖೆಯ ಅಧೀನದಲ್ಲಿರುವ ದೆಹಲಿ ಪೊಲೀಸರು ರಾಷ್ಟ್ರೀಯ ಹೆದ್ದಾರಿಗಳಲ್ಲೇ ತಡೆದರು. ತಡೆದದ್ದು ಮಾತ್ರವಲ್ಲ, ಇನ್ನಿಲ್ಲದ ರೀತಿಯಲ್ಲಿ ರೈತರ ಮೇಲೆ ಲಾಠಿ ಬೀಸಿ, ಅಶೃವಾಯು ಸಿಡಿಸಿ, ಜಲಫಿರಂಗಿಗಳನ್ನು ಬಳಸಿ ದಾಳಿ ಮಾಡಿ, ರೈತರು ದೆಹಲಿ ಕಡೆ ಬರದಂತೆ ತಡೆಗೋಡೆಗಳನ್ನು ನಿರ್ಮಿಸಿದರು. ಇದನ್ನು ಪ್ರತಿಭಟಿಸಿ ರೈತರೂ ಅಲ್ಲಿಯೇ ಕುಳಿತು ಆಳವಾಗಿ ಬೇರೂರಿ, ಆಲದ ಮರದಂತೆ ಹೆಮ್ಮರವಾಗಿ ಬೆಳೆದು ಒಂದು ವರ್ಷಗಳ ಕಾಲ ಈ ಚಳುವಳಿಯನ್ನು ಮುನ್ನಡೆಸಿ, ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ಮಾಡಿಸಿದ್ದು ಈಗ ಇತಿಹಾಸ.

ಆದರೆ ನಾಲ್ಕು ವರ್ಷಗಳ ನಂತರ ಮತ್ತದೇ ರೀತಿಯ, ಅದಕ್ಕಿಂತಲೂ ಭಯಾನಕವಾದ ದೃಶ್ಯಗಳನ್ನು ನಾವು ಈಗ ದೆಹಲಿಯ ಗಡಿಗಳಲ್ಲಿ ನೋಡುತ್ತಿದ್ದೇವೆ. 2024 ರ ಫೆಬ್ರವರಿ 13 ರಂದು ಪಂಜಾಬ್, ಹರಿಯಾಣದ ರೈತರು ತಮ್ಮ ಬೇಡಿಕೆಗಳಾದ ರೈತರು ಬೆಳೆದ ಬೆಳೆಗಳಿಗೆ ಕೃಷಿ ತಜ್ಞ ಡಾ.ಎಂ.ಎಸ್. ಸ್ವಾಮಿನಾಥನ್ ರವರ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚದ ಮೇಲೆ ಶೇಕಡಾ 50 ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆ ನಿಗದಿಪಡಿಸುವ ಕಾನೂನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತಿದ್ದಾರೆ. ಅದರ ಜೊತೆಗೆ ಈಗ ಅಧಿಕಾರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಸರ್ಕಾರ ರೈತರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸುವಂತೆ ಆಗ್ರಹಿಸುತ್ತಿದ್ದಾರೆ.

ರೈತರ ಮೇಲೆ ದಾಳಿ ಎಂದರೆ ಅಂತಿಂತ ದಾಳಿಯಲ್ಲ

ರೈತರು ಎತ್ತಿರುವ ಬೇಡಿಕೆಗಳನ್ನು ಈಡೇರಿಸಲಾಗದ ಮೋದಿ ಸರ್ಕಾರ ರೈತರ ಮೇಲೆ ದಾಳಿ ಮಾಡಲು ತನ್ನ ಶಕ್ತಿ ಸಾಮರ್ಥ್ಯವನ್ನು ಬಳಸುತ್ತಿದೆ. ದಾಳಿ ಎಂದರೆ ಅಂತಿಂತ ದಾಳಿಯಲ್ಲ. ಕಳೆದ ಹೋರಾಟದ ಸಂದರ್ಭದಲ್ಲಿ ರೈತರನ್ನು ಇಲ್ಲಿಯವರೆಗು ಬಿಟ್ಟಿದ್ದೇ ನಾವು ಮಾಡಿದ ತಪ್ಪು ಎನ್ನುವಂತೆ ಈಗ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ರಾಜ್ಯಗಳ ಗಡಿಗಳನ್ನು ರೈತರು ದಾಟಿ ದೆಹಲಿ ರಾಜ್ಯದ ಗಡಿಗೆ ಪ್ರವೇಶಿಸದಂತೆ ವ್ಯಾಪಕ ಬಂದೂಬಸ್ತ್ ಮಾಡಲಾಗಿದೆ. ಎಷ್ಟರ ಮಟ್ಟಿಗೆ ಎಂದರೆ, ಹರಿಯಾಣದ ಶಂಬು ಗಡಿಯನ್ನು ಯಾವ ಕಚ್ಚಾ ರಸ್ತೆಗಳಿಂದಲೂ ದಾಟಲು ಸಾಧ್ಯವಿಲ್ಲ. ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳನ್ನು ಕಾಂಕ್ರೀಟ್ ಬ್ಲಾಕ್‌ಗಳಿಂದ ಮುಚ್ಚಲಾಗಿದೆ. ಎಲ್ಲಾ ಗಡಿಗಳಲ್ಲೂ ಅತ್ಯಾಧುನಿಕ ಯಂತ್ರಗಳು ಶಸ್ತ್ರಗಳನ್ನು ಹಿಡಿದು ದೆಹಲಿ ಪೊಲೀಸ್ ಮತ್ತು ಸೈನ್ಯ ಸಜ್ಜಾಗಿ ನಿಂತಿದೆ.


ಸಾಮಾಜಿಕ ಮಾಧ್ಯಮಗಳಲ್ಲಿ ಬರುತ್ತಿರುವ ವೀಡಿಯೋ ಮತ್ತು ಫೋಟೋ, ಸುದ್ದಿಗಳನ್ನು ನೋಡುತ್ತಿದ್ದರೆ ಯಾವುದೋ ಎರಡು ಶತೃ ದೇಶಗಳ ನಡುವಿನ ಗಡಿ ಸಮಸ್ಯೆ ಬುಗಿಲೆದ್ದಾಗ, ಶತೃಗಳು ಆ ಕಡೆಯಿಂದ ಈ ಕಡೆಗೆ ನುಸುಳಬಾರದೆಂದು ಕಂದಕಗಳನ್ನು ನಿರ್ಮಿಸುವುದು, ದೊಡ್ಡ ದೊಡ್ಡ ಮುಳ್ಳು ತಂತಿ ಬೇಲಿಗಳನ್ನು ನಿರ್ಮಿಸುವುದನ್ನು ನೋಡಿದ್ದೇವೆ. ಇಷ್ಟು ಮಾತ್ರವಲ್ಲ, ರಸ್ತೆಗೆ ಅಡ್ಡಲಾಗಿ ಆಳೆತ್ತರದ ಸಿಮೆಂಟ್ ಬ್ಲಾಕ್ಸ್‌ಗಳನ್ನು ನಿರ್ಮಿಸಿ ಅದರ ಮಧ್ಯೆ ಕಾಂಕ್ರೀಟ್ ಗೋಡೆ ನಿರ್ಮಿಸಿದ್ದಾರೆ, ರಸ್ತೆಗೆ ಅಡ್ಡಲಾಗಿ ಚೂಪಾದ ಕಬ್ಬಿಣದ ಸಲಾಖೆಗಳನ್ನು ನೆಡಯಲಾಗಿದೆ. ಹಳೆಯ ಸಿನಿಮಾಗಳಲ್ಲಿ ಡಕಾಯಿತಿ ಮಾಡುವವರು ವಾಹನಗಳ ಟೈಯಸ್ ಪಂಚರ್ ಮಾಡಲು ಚೂಪಾದ ಸರಣಿ ಮೊಳೆಗಳಿರುವ ಹಲಗೆಗಳನ್ನು ರಸ್ತೆಗೆ ಅಡ್ಡಲಾಗಿ ಇಡುತ್ತಿದ್ದರಲ್ಲ ಹಾಗೆ, ಇಲ್ಲಿಯೂ ರೈತರ ಟ್ರ್ಯಾಕ್ಟರ್‌ಗಳು ಮುಂದೆ ಬರದಂತೆ ತಡೆಯಲು ರಸ್ತೆಗೆ ಚೂಪಾದ ಬೃಹತ್ ಗಾತ್ರದ ಮೊಳೆ ಹೊಡೆಯಲಾಗಿದೆ. ಅಡ್ಡಲಾಗಿ ಬೃಹತ್ ಗಾತ್ರದ ಕಂಟೈನರ್‌ಗಳನ್ನು ನಿಲ್ಲಿಸಲಾಗಿದೆ. ಒಂದು ಅರ್ಥದಲ್ಲಿ ಏಳು ಸುತ್ತಿನ ಕೋಟೆಯೇ ನಿರ್ಮಾಣವಾದಂತಿದೆ.

ಇವೆಲ್ಲವುಗಳನ್ನು ನೋಡಿದರೆ ದೇಶದ ಅನ್ನದಾತ ರೈತನ ಮೇಲೆ ಆಳುವ ಸರ್ಕಾರ ಎಂತಹ ಭಾವನೆಯನ್ನು ಹೊಂದಿದೆ ಮತ್ತು ಅವರ ಮೇಲೆ ಎಷ್ಟು ಕ್ರೂರವಾಗಿ ನಡೆದುಕೊಳ್ಳುತ್ತಿದೆ ಎಂಬುದು ಅರ್ಥವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟಿಸಲು ಅವಕಾಶವಿಲ್ಲದಿದ್ದರೆ ಅದನ್ನು ಸರ್ವಾಧಿಕಾರಿ ವ್ಯವಸ್ಥೆ ಎಂದು ಸುಲಭವಾಗಿ ಹೇಳಬಹುದು. ದೆಹಲಿಯಲ್ಲಿ ನಡೆಯುತ್ತಿರುವುದು ಸರ್ವಾಧಿಕಾರಿ ಪ್ರವೃತ್ತಿಯ ರೈತ ವಿರೋಧಿ ಸರ್ಕಾರದ ನಡೆಯಾಗಿದೆ. ಇವರುಗಳ ಮೇಲೆ ಅಶೃವಾಯುಗಳನ್ನು ಸಿಡಿಸಿ, ಲಾಠಿ ಚಾರ್ಜ್ ಮಾಡಲಾಗಿದೆ. ಇವೆಲ್ಲವುಗಳನ್ನು ಎದುರಿಸಿದ ಹಲವು ರೈತರು ಗಾಯಾಳುಗಳಾದರು. ಇಷ್ಟೆಲ್ಲಾ ಆದರೂ ನಾವು ಮಾತ್ರ ಪ್ರತಿಭಟನೆಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ, ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ನಾವು ಇಲ್ಲಿಯೇ ಇರುತ್ತೇವೆ ಎಂದು ಪೊಲೀಸರು ತಡೆದ ಜಾಗಗಳಲ್ಲೇ ರೈತರು ವಿಶ್ರಾಂತಿ ಪಡೆಯಲು ಪ್ರಾರಂಭಿಸಿದರು.

ಇತಿಹಾಸದಲ್ಲಿ ನಾವು ಓದಿರುವುದೇನೆಂದರೆ, ಹಿಂದೆ ರಾಜ ರಾಜರುಗಳ ನಡುವೆ ಯುದ್ಧ ನಡೆಯುತ್ತಿದ್ದಾಗಲೂ ಸೂರ್ಯ ಮುಳುಗಿದ ಮೇಲೆ ಕದನ ವಿರಾಮ ಘೋಷಣೆಯಾಗುತ್ತಿತ್ತು. ರಾತ್ರಿ ಸಮಯದಲ್ಲಿ ಯುದ್ಧ ನಡೆಯುತ್ತಿರಲಿಲ್ಲ. ಮತ್ತು ಯಾರೂ ಶಸ್ತ್ರಾಸ್ತ್ರಗಳನ್ನು ಬಳಸುತ್ತಿರಲಿಲ್ಲ. ಇದರ ನಡುವೆ ಕುಂತಂತ್ರದಿಂದ ಕೆಲವರು ಇದೇ ಸಮಯವನ್ನು ಬಳಸಿ ದಾಳಿ ಮಾಡಿರುವ ಉದಾಹರಣೆಗಳೂ ಇವೆ. ಅದೇ ರೀತಿ ಇತಿಹಾಸವನ್ನು ಬದಲಿಸಲೆಂದೇ ಬಂದಿರುವ ಕೇಂದ್ರದ ಈಗಿನ ಸರ್ಕಾರ, ರಾತ್ರಿ ವಿಶ್ರಾಂತಿ ಪಡೆಯುತ್ತಿದ್ದ ರೈತರ ಮೇಲೆ ದ್ರೋಣ್‌ಗಳನ್ನು ಬಳಸಿ ಅಶ್ರುವಾಯುಗಳನ್ನು ಸಿಡಿಸಿದ್ದಾರೆ. ಇದರಿಂದ ಹಲವರು ಗಾಯಗೊಂಡಿದ್ದಾರೆ.

ಇತಿಹಾಸದಲ್ಲಿ ನಾವು ಓದಿರುವುದೇನೆಂದರೆ, ಹಿಂದೆ ರಾಜ ರಾಜರುಗಳ ನಡುವೆ ಯುದ್ಧ ನಡೆಯುತ್ತಿದ್ದಾಗಲೂ ಸೂರ್ಯ ಮುಳುಗಿದ ಮೇಲೆ ಕದನ ವಿರಾಮ ಘೋಷಣೆಯಾಗುತ್ತಿತ್ತು. ರಾತ್ರಿ ಸಮಯದಲ್ಲಿ ಯುದ್ಧ ನಡೆಯುತ್ತಿರಲಿಲ್ಲ. ಮತ್ತು ಯಾರೂ ಶಸ್ತ್ರಾಸ್ತ್ರಗಳನ್ನು ಬಳಸುತ್ತಿರಲಿಲ್ಲ. ಇದರ ನಡುವೆ ಕುಂತಂತ್ರದಿಂದ ಕೆಲವರು ಇದೇ ಸಮಯವನ್ನು ಬಳಸಿ ದಾಳಿ ಮಾಡಿರುವ ಉದಾಹರಣೆಗಳೂ ಇವೆ. ಅದೇ ರೀತಿ ಇತಿಹಾಸವನ್ನು ಬದಲಿಸಲೆಂದೇ ಬಂದಿರುವ ಕೇಂದ್ರದ ಈಗಿನ ಸರ್ಕಾರ, ರಾತ್ರಿ ವಿಶ್ರಾಂತಿ ಪಡೆಯುತ್ತಿದ್ದ ರೈತರ ಮೇಲೆ ದ್ರೋಣ್‌ಗಳನ್ನು ಬಳಸಿ ಅಶೃವಾಯುಗಳನ್ನು ಸಿಡಿಸಿದ್ದಾರೆ. ಇದರಿಂದ ಹಲವರು ಗಾಯಗೊಂಡಿದ್ದಾರೆ.

ದೆಹಲಿಯ ಗಡಿಗಳಿಂದ ಬರುತ್ತಿರುವ ಸುದ್ದಿಗಳನ್ನು ನೋಡಿದರೆ ಈ ಪ್ರತಿಭಟನೆ ಮುಂದಿನ ದಿನಗಳಲ್ಲಿ ಬೃಹತ್ ಸ್ವರೂಪ ಪಡೆಯುವ ಸಾಧ್ಯತೆಗಳು ಕಾಣುತ್ತಿವೆ. ಮಾತ್ರವಲ್ಲದೆ ರೈತರ ಮೇಲಿನ ಕೇಂದ್ರ ಸರ್ಕಾರದ ಈ ದೌರ್ಜನ್ಯವನ್ನು ಖಂಡಿಸಿ 500 ಕ್ಕೂ ಹೆಚ್ಚು ಸಂಘಟನೆಗಳನ್ನು ಒಳಗೊಂಡಿರುವ ಸಂಯುಕ್ತ ಕಿಸಾನ್ ಮೋರ್ಚಾ SKM ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ವೇದಿಕೆ ಎಲಅಖಿಗ ಒಟ್ಟಿಗೆ ಫೆಬ್ರವರಿ 16 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಿವೆ.



ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ಸುಮಾರು 25 ಸಾವಿರ ರೈತರು, ಸುಮಾರು 5 ಸಾವಿರದಷ್ಟು ಟ್ರ್ಯಾಕ್ಟರ್ ಗಳಲ್ಲಿ ತಮ್ಮ ಬೇಡಿಕೆಗಳನ್ನು ಆಳುವ ವರ್ಗಕ್ಕೆ ಅರ್ಥಮಾಡಿಸುವ ಸಲುವಾಗಿ ದೆಹಲಿಯತ್ತ ಹೊರಟಾಗ ಇವರನ್ನು ಹರಿಯಾಣ, ಪಂಜಾಬ್‌ನ ಗಡಿಗಳಲ್ಲೇ ಅಂದರೆ ದೆಹಲಿಯಿಂದ 200 ಕಿಲೋ ಮೀಟರ್ ದೂರದಲ್ಲೇ ತಡೆಯಲಾಗಿದೆ.

ಬೇಡಿಕೆಗಳಾದರೂ ಏನು?

ಈ ರೈತರು, ರೈತ ಸಂಘಟನೆಗಳು ಎತ್ತಿರುವ ಬೇಡಿಕೆಗಳಾದರೂ ಏನು? ಈಗಾಗಲೇ ನಮಗೆ ಗೊತ್ತಿರುವಂತೆ 2021 ರ ಡಿಸೆಂಬರ್ ನಲ್ಲಿ ಒಂದು ವರ್ಷಗಳ ಐತಿಹಾಸಿಕ ರೈತ ಚಳುವಳಿ ಮುಕ್ತಾಯವಾಗಲು ಕೇಂದ್ರ ಸರ್ಕಾರ ಮೂರು ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿದ್ದು ಒಂದು. ಇದೇ ಸಂದರ್ಭದಲ್ಲಿ ಮೋದಿ ಸರ್ಕಾರ ರೈತ ಸಮುದಾಯಕ್ಕೆ ಲಿಖಿತವಾಗಿ ಕೆಲವು ಭರವಸೆಗಳನ್ನು ಕೊಟ್ಟಿತ್ತು. ಅವುಗಳನ್ನು ಈಡೇರಿಸಬೇಕು ಎಂದು ರೈತರು ದನಿ ಎತ್ತಿದ್ದಾರೆ.

ಡಾ.ಎಂ.ಎಸ್.ಸ್ವಾಮಿನಾಥನ್ ಶಿಫಾರಸ್ಸು ಜಾರಿಗೆ ತಂದು ರೈತರು ಬೆಳೆದ ಬೆಳೆಗಳಿಗೆ ಉತ್ಪಾದನಾ ವೆಚ್ಚದ ಜೊತೆ ಶೇಖಡಾ 50 ರಷ್ಟು ಲಾಭಾಂಶ ಸೇರಿಸಿ ಬೆಲೆ ನಿಗದಿ ಮಾಡಬೇಕು. ಉತ್ತರ ಪ್ರದೇಶದ ಲಕೀಂಪುರ್ ಕೇರಿಯಲ್ಲಿ ಕೇಂದ್ರ ಸಚಿವರ ಬೆಂಗಾವಲು ವಾಹನ ಪ್ರತಿಭಟನಾ ನಿರತ ರೈತರ ಮೇಲೆ ದಾಳಿ ಮಾಡಿ 5 ಜನ ರೈತರು ಮತ್ತು ಒಬ್ಬ ಪತ್ರಕರ್ತರು ನಿಧನರಾದರು. ಇವರಿಗೆ ಪರಿಹಾರ ಕೊಡಬೇಕು ಮತ್ತು ಈ ಘಟನೆಗೆ ಕಾರಣರಾದ ಕೇಂದ್ರ ಮಂತ್ರಿ ಥೋಮರ್ ರನ್ನು ಶಿಕ್ಷಿಸಬೇಕು. ರೈತರು ಕೃಷಿ ಉದ್ದೇಶಕ್ಕಾಗಿ ಮಾಡಿರುವ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. 60 ವರ್ಷದ ನಂತರದ ರೈತರಿಗೆ ಪಿಂಚಣಿ ನೀಡಬೇಕು, ವಿದ್ಯುತ್ ಖಾಸಗೀಕರಣವನ್ನು ನಿಲ್ಲಿಸಬೇಕು, ದೇಶದ ವಿವಿಧ ಭಾಗಗಳಲ್ಲಿ ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಪ್ರತಿಭಟನೆ ನಡೆಸಿದವರ ಮೇಲೆ ಪೊಲೀಸರು ಹೂಡಿರುವ ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆಯಬೇಕು ಇವುಗಳು ರೈತರ ಬೇಡಿಕೆಗಳಾಗಿವೆ.

ಶಂಬು ಗಡಿಯಲ್ಲಿ ಪೊಲೀಸರು ತಡೆದ ಮೇಲೆ ರೈತರು ತಮ್ಮ ಟ್ರ್ಯಾಕ್ಟರ್‌ಗಳನ್ನು ಅಲ್ಲಿಯೇ ನಿಲ್ಲಿಸಿ ಎಲ್ಲರೂ ಒಟ್ಟಿಗೆ ಸೇರಿ ಅಡುಗೆ ಮಾಡಿ ಊಟ ಮಾಡಲು ಶುರುಮಾಡಿದಾಗ, ಊಟ ಮಾಡುತ್ತಿದ್ದ ರೈತ ಸಮುದಾಯದ ಮೇಲೆ ಏಕಾ ಏಕಿ ಅಶೃವಾಯುಗಳನ್ನು ಸಿಡಿಸಿ, ರಬ್ಬರ್ ಬುಲೆಟ್‌ಗಳನ್ನು ಬಳಸಿ ಮನಸೋಯಿಚ್ಛೆ ಶೂಟ್ ಮಾಡಲಾಯಿತು. ಇದರಿಂದ ನೂರಾರು ರೈತರು ಗಾಯಗೊಂಡಿದ್ದಾರೆ. ಈ ರೀತಿಯ ನಿರಂತರ ದಾಳಿಯನ್ನು ಎದುರಿಸಲು ರೈತ ಸಮುದಾಯವೂ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ.

2000 ಟಿಯರ್ ಗ್ಯಾಸ್ ಬಳಕೆ

ಟಿಯರ್ ಗ್ಯಾಸ್ ಎಂದರೆ ಅದೊಂದು ರೀತಿಯ ಕಣ್ಣು ಮೂಗುಗಳಲ್ಲಿ ಅತ್ಯಂತ ಘಾಟಿನ, ಹುರಿ ಉಂಟುಮಾಡುವ ವಿಷಕಾರಕ ಅನಿಲ. ಇದನ್ನು ಸಿಡಿಸಿದಾಗ ಅದು ಯತೇಚ್ಚವಾದ ಹೊಗೆಯನ್ನು ಉತ್ಪತ್ತಿ ಮಾಡಿ ಅಲ್ಲಿರುವವರನ್ನೆಲ್ಲ ಚದುರುವಂತೆ ಮಾಡುತ್ತದೆ. ಒಂದು ವರದಿಯ ಪ್ರಕಾರ ಪ್ರತಿಭಟನೆ ಪ್ರಾರಂಭವಾದ ಮೂರು ದಿನಗಳಲ್ಲಿ ಸುಮಾರು 2000 ಟಿಯರ್ ಗ್ಯಾಸ್ ಶೆಲ್‌ಗಳನ್ನು ಪೊಲೀಸರು ಬಳಸಿದ್ದಾರೆ. ಮತ್ತು

ಪುಟ 12 ಕ್ಕೆ

ಗಾಜಾ ಯುದ್ಧ ಕುರಿತು ಬೂಟಾಟಿಕೆ ನಿಲುವು ಅಮೆರಿಕ–ಭಾರತ ಸಮಾನ ಅಪರಾಧಿಗಳು

ಪ್ರಕಾಶ್ ಕಾರತ್



ಗಾಜಾದಲ್ಲಿ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸಲು ತಕ್ಷಣವೇ ಕದನ ವಿರಾಮ ಘೋಷಿಸಬೇಕೆಂದು ಆಗ್ರಹಿಸಿ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯಲ್ಲಿ 2024 ಫೆಬ್ರವರಿ 20ರಂದು ಮಂಡಿಸಲಾಗಿದ್ದ ಇನ್ನೊಂದು ನಿರ್ಣಯಕ್ಕೆ ಅಮೆರಿಕ ವಿಟೋ ಚಲಾಯಿಸಿದೆ. ಪ್ರಸ್ತುತ ಯುದ್ಧಕ್ಕೆ ಸಂಬಂಧಿಸಿ ಕದನ ವಿರಾಮಕ್ಕೆ ಕರೆ ಕೊಡುವ ಗೊತ್ತುವಳಿಗಳಿಗೆ ಅಮೆರಿಕ ವಿಟೋ ಚಲಾಯಿಸಿ ಅದನ್ನು ವಿಫಲಗೊಳಿಸಿದ್ದು ಇದು ಮೂರನೇ ಸಲವಾಗಿದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಮೊದಲನೇ ಸಲ ಹಾಗೂ ಡಿಸೆಂಬರ್‌ನಲ್ಲಿ ಎರಡನೇ ಬಾರಿ ಅದು ಹೀಗೆ ಮಾಡಿತ್ತು.

ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ನರಮೇಧ ಸಮರವು ಅಕ್ಟೋಬರ್ 7 ರಿಂದೀಚೆಗೆ 29,500ಕ್ಕೂ ಹೆಚ್ಚು ಪ್ಯಾಲೆಸ್ತೀನಿಯರ ಸಾವು ಮತ್ತು 69,000ಕ್ಕೂ ಅಧಿಕ ಜನರು ಗಾಯಗೊಳ್ಳುವುದಕ್ಕೆ ಕಾರಣವಾಗಿದೆ. ಮೃತರಲ್ಲಿ 12,500ಕ್ಕೂ ಹೆಚ್ಚು ಮಕ್ಕಳಿದ್ದಾರೆ.

ಗಾಜಾದಲ್ಲಿ ಕೊನೆಯದಾಗಿ ಉಳಿದಿರುವ ರಫಾ ನಗರದ ಮೇಲೆ ಶೀಘ್ರವೇ ಭೂ ದಾಳಿಯನ್ನು ಆರಂಭಿಸಲಾಗುವುದೆಂದು ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೇತನ್ಯಾಹು ಪ್ರಕಟಿಸಿದ್ದಾರೆ. ರಫಾ ನಗರ ಗಾಜಾದ ಅತ್ಯಂತ ದಕ್ಷಿಣ ತುದಿಯಲ್ಲಿದ್ದು 14 ಲಕ್ಷ ಜನರಿಂದ ಕಿಕ್ಕಿರಿದು ತುಂಬಿದೆ. ಅವರಲ್ಲಿ ಬಹುತೇಕ ಮಂದಿ ಇಸ್ರೇಲ್ ದಾಳಿಯಿಂದಾಗಿ ಉತ್ತರ ಮತ್ತು ಮಧ್ಯ ಗಾಜಾದಿಂದ ಪಲಾಯನ ಮಾಡಿ ಆಶ್ರಯ ಪಡೆದವರಾಗಿದ್ದಾರೆ. ರಫಾ ಮೇಲಿನ ದಾಳಿಯಿಂದ ಮಹಾ ದುರಂತವಾಗಲಿದೆ ಹಾಗೂ ಅದು ನಾಗರಿಕರಿಗೆ ವಿನಾಶಕಾರಿ ಪರಿಣಾಮಗಳನ್ನು ಉಂಟು ಮಾಡಲಿದೆ ಎಂದು ವಿಶ್ವ ಸಂಸ್ಥೆ ಎಚ್ಚರಿಕೆ ನೀಡಿದೆ.

ಪ್ಯಾಲೆಸ್ತೀನಿಯರಲ್ಲಿ ಹೆಚ್ಚು ಸಾವು–ನೋವು ಸಂಭವಿಸುತ್ತಿರುವುದಕ್ಕೆ ಅಮೆರಿಕ ಈಚೆಗೆ ಕಳವಳ ವ್ಯಕ್ತಪಡಿಸಲು ಆರಂಭಿಸಿದೆ ಹಾಗೂ ಗಾಜಾ ಮೇಲೆ ದಾಳಿ ನಡೆಸದಂತೆ ಇಸ್ರೇಲ್‌ಅನ್ನು ಆಗ್ರಹಿಸುತ್ತಿದೆ. ಆದಾಗ್ಯೂ, ಯುದ್ಧ ನಿಲ್ಲಿಸಲು ಸಹಾಯಕ ಆಗಬಹುದಾದ ಗೊತ್ತುವಳಿಯನ್ನು ವಿಶ್ವ ಸಂಸ್ಥೆ ಭದ್ರತಾ ಮಂಡಳಿ ಅಂಗೀಕರಿಸಲು ಮುಂದಾದಾಗ ಇದೇ ಅಮೆರಿಕ ಅದನ್ನು ಮೊಟಕು ಮಾಡಿದೆ. ಇದು ಅಧ್ಯಕ್ಷ ಜೋ ಬೈಡೆನ್ ಮತ್ತು ಅವರ ಆಡಳಿತದ ದ್ವಂದ್ವ ನೀತಿಗೆ ಅನುಗುಣವಾಗಿದೆ. ಆದರೆ ಅದು ಕಳೆದ ಕೆಲವು ವಾರಗಳಲ್ಲಿ ಗಾಜಾದಲ್ಲಿ ಅಪಾರ ಸಂಖ್ಯೆಯ ನಾಗರಿಕರ ಸಾವು–ನೋವಿನ ಬಗ್ಗೆ ದೊಡ್ಡದಾಗಿ ಸದ್ದು ಮಾಡುತ್ತಿದೆ. ಅದೇ ಹೊತ್ತಿಗೆ, ಮಾನವತೆಯ ವಿರುದ್ಧ ಅಪರಾಧಗಳನ್ನು ಮುಂದುವರಿಸಲು ಇಸ್ರೇಲ್‌ಗೆ ರಕ್ಷಣೆಯನ್ನೂ ಒದಗಿಸುತ್ತಿದೆ.

ಅಮೆರಿಕದ ಶಸ್ತ್ರಾಸ್ತ್ರ

ಗಾಜಾದಲ್ಲಿ ಇಸ್ರೇಲ್ ಬಳಸುತ್ತಿರುವ ಬಹುತೇಕ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳು ಅಮೆರಿಕವೇ ಪೂರೈಸಿದ್ದಾಗಿವೆ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ (ಸಚಿವ) ಅಂತೋಣಿ ಬ್ಲಿಂಕೆನ್ ಇಸ್ರೇಲ್ ಮತ್ತು ನೆರೆಯ ಅರಬ್ ದೇಶಗಳಿಗೆ ಪದೇ ಪದೇ ಭೇಟಿ ಕೊಟ್ಟು ನಡೆಸಿದ ರಾಜತಾಂತ್ರಿಕ ಪ್ರಯತ್ನಗಳು ಹಮಾಸ್ ವಶದಲ್ಲಿರುವ ಇಸ್ರೇಲಿ ಒತ್ತೆಸೆರೆಯಾಳುಗಳನ್ನು ಬಿಡಿಸಿಕೊಳ್ಳುವ ಗುರಿಯನ್ನು ಹೊಂದಿದೆಯೇ ಹೊರತು ಯುದ್ಧವನ್ನು ನಿಲ್ಲಿಸುವುದಂತೂ ಅದರ ಉದ್ದೇಶವಲ್ಲ.

ಅಂತಿಮವಾಗಿ, ಗಾಜಾದಲ್ಲಿನ ನರಮೇಧದ ಬಗ್ಗೆ ಬೆಳೆಯುತ್ತಿರುವ ಜಾಗತಿಕ ಆಕ್ರೋಶದಿಂದಾಗಿ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯಲ್ಲಿ ಅಮೆರಿಕ ಪರ್ಯಾಯ ಗೊತ್ತುವಳಿಯೊಂದನ್ನು ಮಂಡಿಸಿತು. ಅದು ಇದೇ ಮೊದಲ ಬಾರಿಗೆ 'ಕದನ ವಿರಾಮ' ಎಂಬ ಪದವನ್ನು ಬಳಸಿದೆ. ಆದರೆ, 'ಕಾರ್ಯಸಾಧ್ಯವಾದಾಗ', ಅಂದರೆ ಅದು ಸೂಕ್ತವೆಂದು ಇಸ್ರೇಲ್ ಭಾವಿಸಿದಾಗ ಮಾತ್ರ ಅದು ಜಾರಿಗೆ ಬರಬೇಕು ಎಂದು ಅದರ ಒಕ್ಕಣೆ ಹೇಳಿದೆ.

ಮೋದಿ ಸರ್ಕಾರದ ಇಬ್ಬಗೆ ಧೋರಣೆ

ಗಾಜಾ ಯುದ್ಧದ ಕುರಿತು ನರೇಂದ್ರ ಮೋದಿ ಸರಕಾರದ ಧೋರಣೆ ಕೂಡ ಅಮೆರಿಕದ ಇದೇ ದ್ವಂದ್ವ ನೀತಿ ಹಾಗೂ ಬೂಟಾಟಿಕೆಯನ್ನು ಪ್ರತಿಬಿಂಬಿಸುತ್ತದೆ. ಕಳೆದ ವರ್ಷ ಅಕ್ಟೋಬರ್ 7ರಂದು ಹಮಾಸ್ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಇಸ್ರೇಲ್‌ಗೆ ಸಂಪೂರ್ಣ ಬೆಂಬಲ ಘೋಷಿಸಿದ್ದ ಬಿಜೆಪಿ ಸರಕಾರ, ಗಾಜಾ ಮೇಲಿನ ಇಸ್ರೇಲ್ ದಾಳಿಯನ್ನು ಖಂಡಿಸುವ ಗೋಜಿಗೇ ಹೋಗಲಿಲ್ಲ. ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ (ಮಹಾಧಿವೇಶನ) ಕದನ ವಿರಾಮ ಕುರಿತ ಗೊತ್ತುವಳಿ ಮೇಲೆ ಮೊದಲ ಬಾರಿ ಮತದಾನ ನಡೆದಾಗ ಭಾರತ ಅದರಿಂದ ಗೈರಾಗಿತ್ತು. 2023 ಅಕ್ಟೋಬರ್‌ನ ಕದನ ವಿರಾಮ ಗೊತ್ತುವಳಿಗೂ ಅದು ಬೆಂಬಲ ನೀಡಲಿಲ್ಲ. ಡಿಸೆಂಬರ್‌ನಲ್ಲಿ ಜನರಲ್ ಅಸೆಂಬ್ಲಿಯಲ್ಲಿ ಎರಡನೇ ಸಲ ಕದನ ವಿರಾಮ ನಿರ್ಣಯ ಮಂಡನೆಯಾದಾಗ ಇಸ್ರೇಲ್ ದುಷ್ಕೃತ್ಯಕ್ಕೆ ಜಗತ್ತಿನಾದ್ಯಂತ ಖಂಡನೆ ವ್ಯಕ್ತವಾಗುತ್ತಿರುವುದನ್ನು ಗಮನಿಸಿದ ಭಾರತ, ಗೊತ್ತುವಳಿಗೆ ಬೆಂಬಲ ಕೊಟ್ಟಿತು. ಹಮಾಸ್‌ನ ಹಿಂಸಾತ್ಮಕ ದಾಳಿಗಳನ್ನು ಖಂಡಿಸುವುದನ್ನು ಒಳಗೊಳ್ಳುವ ತಿದ್ದುಪಡಿಗೆ ಬೆಂಬಲ ನೀಡುವ ವಿಫಲ ಪ್ರಯತ್ನ ನಡೆಸಿದ ನಂತರ ಗೊತ್ತುವಳಿಗೆ ಪರವಾಗಿ ಮತ ಚಲಾಯಿಸಿತ್ತು.

'ಹಮಾಸ್‌ನ ಅಕ್ಟೋಬರ್ 7ರ ದಾಳಿಗೆ ಪ್ರತಿಕ್ರಿಯೆಯಲ್ಲಿ ನಾಗರಿಕರ ಸಾವು–ನೋವಿನ ಬಗ್ಗೆ ಇಸ್ರೇಲ್ ಎಚ್ಚರಿಕೆಯಿಂದ ಇರಬೇಕಿತ್ತು' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದರು. 'ಅಂತಾರಾಷ್ಟ್ರೀಯ ಮಾನವತಾ ಕಾನೂನುಗಳನ್ನು ಪಾಲಿಸುವುದು ಇಸ್ರೇಲ್ ಕರ್ತವ್ಯವಾಗಿದೆ' ಎಂದೂ ಜೈಶಂಕರ್ ಹೇಳಿದ್ದಾರೆ. ಫೆಬ್ರವರಿ 17ರಂದು ನಡೆದ ಮ್ಯೂನಿಚ್ ಭದ್ರತಾ ಸಮ್ಮೇಳನದ ಸಂದರ್ಭದಲ್ಲಿ ಅವರು ಹೀಗೆ ಹೇಳಿದ್ದಾರೆ.

ದಾಳಿ ಮಾಡದಂತೆ ಸಲಹೆಯೇ ಇಲ್ಲ

ಇಷ್ಟೆಲ್ಲ ಹೇಳಿದರೂ ರಫಾ ನಗರದ ಮೇಲೆ ದಾಳಿ ನಡೆಸದಂತೆ ಇಸ್ರೇಲ್‌ಗೆ ಭಾರತ ಸರಕಾರ ಇನ್ನೂ ಸಾರ್ವಜನಿಕವಾಗಿ ಕರೆ ಕೊಟ್ಟಿಲ್ಲ. ರಫಾದಲ್ಲಿ ಮಿಲಿಟರಿ ಕಾರ್ಯಾಚರಣೆಯಿಂದ ಸಂಭವಿಸಬಹುದಾದ ಮಹಾ ದುರಂತದ ಬಗ್ಗೆ ಆಸ್ಟ್ರೇಲಿಯಾ, ಕೆನಡಾ ಮತ್ತು ನ್ಯೂಜಿಲೆಂಡ್ ಪ್ರಧಾನ ಮಂತ್ರಿಗಳು ಜಂಟಿ ಹೇಳಿಕೆಯೊಂದರಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ಹಾಗೂ ತಕ್ಷಣವೇ ಕದನ ವಿರಾಮಕ್ಕೆ ಕರೆ ನೀಡಿದ್ದಾರೆ. ಆದರೆ ಭಾರತ ಸರಕಾರ ಹಾಗೆ ಮಾಡಿಲ್ಲ. ಈ ಮೂರೂ ದೇಶಗಳು ಅಮೆರಿಕದ ನಿಕಟ ಮಿತ್ರರು ಮತ್ತು ಆಸ್ಟ್ರೇಲಿಯಾವು ಭಾರತದಂತೆ ಕ್ವಾಡ್‌ನ ಪಾಲುದಾರನಾಗಿದೆ. ಭಾರತವು ಇಸ್ರೇಲ್–ಪರ ನೀತಿ ಅನುರಿಸುತ್ತಿದೆ. ಇದು ಭಾರತವೂ ಒಳಗೊಂಡ

ಬ್ರಿಕ್ಸ್ ಕೂಟದ ಭಾಗಿದಾರ ದಕ್ಷಿಣ ಆಫ್ರಿಕಾ ಮತ್ತು ಬ್ರೆಜಿಲ್ ದೇಶಗಳ ಇಸ್ರೇಲ್–ವಿರೋಧಿ ಧೋರಣೆಗೆ ಸ್ಪಷ್ಟ ವಿರುದ್ಧವಾಗಿದೆ. ನರಮೇಧ ವಿರುದ್ಧದ ಅಂತಾರಾಷ್ಟ್ರೀಯ ಒಡಂಬಡಿಕೆಯನ್ನು ಇಸ್ರೇಲ್ ಉಲ್ಲಂಘಿಸಿದೆ ಎಂದು ಘೋಷಿಸುವಂತೆ ಅಂತಾರಾಷ್ಟ್ರೀಯ ನ್ಯಾಯ ಕೋರ್ಟ್‌ಗೆ (ಐಸಿಜೆ) ದಕ್ಷಿಣ ಆಫ್ರಿಕಾ ಮನವಿ ಸಲ್ಲಿಸಿದ್ದು ಅದರ ದಿಟ್ಟ ಕ್ರಮವು ಇಡೀ ದಕ್ಷಿಣ ಗೋಳಾರ್ಧದ (ಗ್ಲೋಬಲ್ ಸೌತ್) ಗೌರವ ಮತ್ತು ಶ್ಲಾಘನೆಗೆ ಒಳಗಾಗಿದೆ. ಈ ಮನವಿಗೆ ಪ್ರತಿಕ್ರಿಯಿಸಿರುವ ಐಸಿಜೆ, ನರಮೇಧಕ್ಕೆ ಸಮನಾಗುವ ಯಾವುದೇ ಕ್ರಮವನ್ನು ಕೈಗೊಳ್ಳದಂತೆ ಇಸ್ರೇಲ್‌ಗೆ ನಿರ್ದೇಶನ ನೀಡಿರುವುದು ಗಮನಾರ್ಹವಾಗಿದೆ. ಬ್ರೆಜಿಲ್ ಅಧ್ಯಕ್ಷ ಲುಲಾ ದ ಸಿಲ್ವ, ಇಸ್ರೇಲ್‌ನ ನರಮೇಧ ಯುದ್ಧವನ್ನು ಸ್ಪಷ್ಟವಾಗಿ ಖಂಡಿಸಿದ್ದು ಅದನ್ನು ಹೊಲೋಕಾಸ್ಟ್‌ಗೆ ಹೋಲಿಸಿದ್ದಾರೆ. ಇದರಿಂದಾಗಿ ಇಸ್ರೇಲ್ ಮತ್ತು ಬ್ರೆಜಿಲ್ ನಡುವೆ ರಾಜತಾಂತ್ರಿಕ ಬಿರುಕು ಉಂಟಾಗಿದೆ. ಉಭಯ ದೇಶಗಳು ಪರಸ್ಪರರ ರಾಜತಾಂತ್ರಿಕರನ್ನು ವಾಪಸ್ ಕರೆಸಿಕೊಂಡಿವೆ.

ಭಾರತ ಶಾಮೀಲು

ನಾಗರಿಕರ ಸಾವು–ನೋವಿನ ಬಗ್ಗೆ ಇಸ್ರೇಲ್ ಎಚ್ಚರದಿಂದ ಇರುವಂತೆ ಸಚಿವ ಜೈಶಂಕರ್ ಮಾಡಿರುವ ಸಲಹೆ ಕೇವಲ ಬೂಟಾಟಿಕೆಯಿಂದ ಕೂಡಿದ್ದಾಗಿದೆ. ಭಾರತದಲ್ಲಿ ತಯಾರಿಸಿದ 20 ಹರ್ಮಿಸ್ ಡ್ರೋನ್‌ಗಳನ್ನು ಇಸ್ರೇಲ್‌ಗೆ ಭಾರತ ಕಳಿಸಿದ ವೇಳೆ ಈ ಸಲಹೆ ಮಾಡಲಾಗಿದೆ!

ಹೈದರಾಬಾದ್‌ನಲ್ಲಿ ಡ್ರೋನ್ ಉತ್ಪಾದನಾ ಫ್ಯಾಕ್ಟರಿ ನಿರ್ಮಾಣಕ್ಕೆ ಅದಾನಿ ಸಮೂಹ ಮತ್ತು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ ನಡುವೆ ಒಪ್ಪಂದ ಆಗಿದೆ. ಸಶಸ್ತ್ರ ಹರ್ಮಿಸ್ ಡ್ರೋನ್‌ಗಳನ್ನು ಗಾಜಾದಲ್ಲಿ ಲೇಸರ್ ನಿರ್ದೇಶಿತ ಬಾಂಬ್‌ಗಳನ್ನು ಒದಗಿಸಲು ಇಸ್ರೇಲಿ ಸೇನೆ ಬಳಸಿಕೊಳ್ಳುತ್ತಿದೆ. ಹಾಗಾಗಿ, ಪ್ಯಾಲೆಸ್ತೀನಿ ನಾಗರಿಕರ ಹತ್ಯಾಕಾಂಡಗಳಲ್ಲಿ ಅಮೆರಿಕದಂತೆ ಭಾರತವೂ ಶಾಮೀಲಾದಂತೆ ಆಗಿದೆ.

ಭಾರತ ಮತ್ತು ಇಸ್ರೇಲ್ ನಡುವೆ ಬೆಳೆಯುತ್ತಿರುವ ಮಿಲಿಟರಿ ಸಹಕಾರದಿಂದಾಗಿ ಭಾರತಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವ ಎರಡನೇ ದೊಡ್ಡ ದೇಶವಾಗಿ ಇಸ್ರೇಲ್ ಹೊರಹೊಮ್ಮಿದೆ. ಅಲ್ಲದೆ ಭಾರತದ ಖಾಸಗಿ ರಕ್ಷಣಾ ವಲಯವು ಇಸ್ರೇಲ್‌ನ ಶಸ್ತ್ರಾಸ್ತ್ರ ಕಂಪನಿಗಳ ಜೊತೆಯಲ್ಲಿ ಸಹ–ಉತ್ಪಾದನೆಗಾಗಿ ಒಪ್ಪಂದ ಮಾಡಿಕೊಂಡಿದೆ. ಅದಾನಿ–ಎಲ್ಬಿಟ್ ಅಡ್ವಾನ್ಸ್ಡ್ ಸಿಸ್ಟಮ್ಸ್ ಅಂಥ ಒಂದು ಕಂಪನಿಯಾಗಿದೆ. ಕಲ್ಯಾಣಿ ರಫೇಲ್ ಅಡ್ವಾನ್ಸ್ಡ್ ಸಿಸ್ಟಮ್ ಮತ್ತು ಇತರ ಕೆಲವು ಅಂಥ ಸಂಸ್ಥೆಗಳಾಗಿವೆ.

ಮೋದಿ ಸರಕಾರ 2014ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಇಸ್ರೇಲ್‌ನ ಎಲ್ಲ ಶಸ್ತ್ರಾಸ್ತ್ರ ರಫ್ತಿನಲ್ಲಿ ಶೇಕಡ 42ರಷ್ಟು ಭಾರತಕ್ಕೆ ಆಗಮಿಸಿದೆ. ಭಾರತದಿಂದ ಹಲವು ದಶಲಕ್ಷ ಡಾಲರ್ ಮೊತ್ತದ ಶಸ್ತ್ರಾಸ್ತ್ರಗಳು ಇಸ್ರೇಲ್‌ಗೆ ರಫ್ತಾಗಿವೆ.

ಪ್ಯಾಲೆಸ್ತೀನಿ ಮಹಿಳೆಯರು ಮತ್ತು ಮಕ್ಕಳ ನರಮೇಧದ ಬಗ್ಗೆ ಮೋದಿ ಸರಕಾರಕ್ಕೆ ಕಿಂಚಿತ್ತಾದರೂ ಕಾಳಜಿಯಿದ್ದರೆ ಅದು ಇಸ್ರೇಲ್‌ಗೆ ಶಸ್ತ್ರಾಸ್ತ್ರ ರಫ್ತನ್ನು ತಕ್ಷಣವೇ ನಿಲ್ಲಿಸಬೇಕು. ಅದರಲ್ಲಿ ಸಶಸ್ತ್ರ ಡ್ರೋನ್‌ಗಳೂ ಸೇರಿವೆ. ಇಸ್ರೇಲ್‌ನ ಯುದ್ಧ ವ್ಯವಸ್ಥೆಗೆ ಹಣಕಾಸು ಒದಗಿಸುತ್ತಿರುವವರಲ್ಲಿ ಭಾರತವೂ ಒಂದಾಗಿದೆ. ಇಸ್ರೇಲ್‌ನೊಂದಿಗಿನ ಮಿಲಿಟರಿ ಸಹಭಾಗಿತ್ವವನ್ನು ಕೂಡಲೇ ಸ್ಥಗಿತಗೊಳಿಸಬೇಕು.


ಈ ಸಂಬಂಧ, ಭಾರತ ಜಲ ಸಾರಿಗೆ ಒಕ್ಕೂಟ ಕೈಗೊಂಡ ನಿರ್ಧಾರವನ್ನು ಶ್ಲಾಘಿಸಬೇಕಾಗುತ್ತದೆ. ಭಾರತದ 11 ಪ್ರಮುಖ ಬಂದರುಗಳಲ್ಲಿ ಕೆಲಸ ಮಾಡುವ 3,500 ನೌಕರರನ್ನು ಅದು ಪ್ರತಿನಿಧಿಸುತ್ತದೆ. ಪ್ಯಾಲೆಸ್ತೀನಿ ಜನರ ವಿರುದ್ಧ ಬಳಸಲಾಗುವ ಶಸ್ತ್ರಾಸ್ತ್ರ ಕಾರ್ಗೋವನ್ನು ತಾವು ಲೊಡ್ ಮಾಡುವುದೂ ಇಲ್ಲ ಅನ್‌ಲೋಡ್ ಮಾಡುವುದೂ ಇಲ್ಲ ಎಂದು ಈ ಕಾರ್ಮಿಕರು ಘೋಷಿಸಿದ್ದಾರೆ. ಭಾರತ ಸರಕಾರದಂತಲ್ಲದೆ ಈ ನಿಲವು ಭಾರತೀಯ ಜನತೆಯ ಸಾಮ್ರಾಜ್ಯಶಾಹಿ–ವಿರೋಧಿ, ಶಾಂತಿ–ಪ್ರಿಯ ಭಾವನೆಗಳಿಗೆ ಅನುಗುಣವಾಗಿದೆ.

ಅನು: ವಿಶ್ವ

ಬದುಕು: ಯುವಜನರ ಮುಂದಿನ ದಾರಿ ಯಾವುದು?

ಫೆಬ್ರವರಿ 25 ರಿಂದ 27, 2024 ರವರೆಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ)ನ 12 ನೇ ರಾಜ್ಯ ಸಮ್ಮೇಳನವು ಮಂಗಳೂರು ನಗರದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಯುವಜನರ ಬದುಕಿನ ತಲ್ಲಣ–ತವಕಗಳು, ಯುವಜನರ ಮುಂದಿನ ಸವಾಲುಗಳ ಕುರಿತು ಒಂದು ಲೇಖನ.

ಆರ್. ರಾಮಕೃಷ್ಣ



ಇತ್ತೀಚಿನ ವರ್ಷಗಳಲ್ಲಿ ಮುಖ್ಯರಸ್ತೆಗಳಲ್ಲಿ, ಹೆದ್ದಾರಿಗಳಲ್ಲಿ 'ವ್ಹೀಲಿಂಗ್' (ಒಂದು ಚಕ್ರದ ಮೇಲೆ ಬೈಕ್ ಸವಾರಿ ಮಾಡುವುದು) ಮಾಡುವ 'ಹುಚ್ಚು' ಹುಡುಗರು ಪೋಲಿಸರಿಗೂ, ದಾರಿಯಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೂ ತಲೆನೋವಾಗಿರುವುದು ಎಲ್ಲರಿಗೂ ಗೊತ್ತು. ಈ ದುಸ್ಸಾಹದಲ್ಲಿ ಎಷ್ಟೋ ಜನ ಯುವಕರು ಪ್ರಾಣ ಕಳೆದುಕೊಳ್ಳುವುದು, ಇತರರ ಪ್ರಾಣ ತೆಗೆಯುವುದು ಎರಡೂ ಇದೆ. ಇಂತಹ ಯುವಕರನ್ನು ಹಿಡಿದು ಪೋಲಿಸರು ದಂಡ ಹಾಕುತ್ತಾರೆ. ಅಕ್ಕಪಕ್ಕದವರು ಶಾಪ ಹಾಕುತ್ತಾರೆ. ಅಷ್ಟೇ. ಈ ಪ್ರವೃತ್ತಿಯನ್ನು ಕೊಂಚ ಭಿನ್ನವಾಗಿ ನೋಡಬೇಕಿದೆ.

ನಮ್ಮ ಯುವಜನರಲ್ಲಿ ವಿಶೇಷ ಚೈತನ್ಯವಿದೆ. ಉತ್ಸಾಹವಿದೆ. ಸಾಹಸ ಪ್ರವೃತ್ತಿ ಇದೆ. ಆದರೆ ಈ ಚೈತನ್ಯ–ಉತ್ಸಾಹ–ಸಾಹಸೀ ಪ್ರವೃತ್ತಿಗಳಿಗೆ ಒಂದು ಆರೋಗ್ಯಕರ ಮಾರ್ಗವನ್ನು ತೋರಿ, ಕ್ರೀಡಾ ಪ್ರಗತಿಗಾಗಿ, ಸಮಾಜದ ಒಳಿತಿಗಾಗಿ ಈ ಯುವ ಚೈತನ್ಯವನ್ನು ಬಳಸಿಕೊಳ್ಳುವುದರಲ್ಲಿ ನಮ್ಮ ಸಮಾಜ, ವ್ಯವಸ್ಥೆಯು ಗಂಭೀರವಾಗಿ ಎಡವಿದೆ ಎಂಬುದನ್ನು ಈ ಪ್ರವೃತ್ತಿ ತೋರಿಸುತ್ತಿದೆ. ಇದು ಒಂದು ಸಂಕೇತವಷ್ಟೆ.

ನಮ್ಮ ಶಾಲಾ ಕಾಲೇಜುಗಳಲ್ಲಿ ಸರಿಯಾದ ಕ್ರೀಡಾ ಸೌಕರ್ಯಗಳಿಲ್ಲ. ಕ್ರೀಡೆ ಎಂದರೆ ಬಹುತೇಕ ಅದು ಕ್ರಿಕೆಟ್ ಮಾತ್ರ ಎಂಬಂತಾಗಿದೆ. ನಗರ ಪಟ್ಟಣಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಮೈದಾನಗಳಿಲ್ಲ. ಕ್ರೀಡೆಗಳಿಗೆ ಬೆಂಬಲ, ಪ್ರೋತ್ಸಾಹಗಳಿಲ್ಲ.

ಭಾರತ ದೇಶವು ಇಡೀ ಜಗತ್ತಿನಲ್ಲೇ ಅತಿ ಹೆಚ್ಚು ಯುವಜನರನ್ನು ಹೊಂದಿರುವ ಒಂದು ದೇಶವಾಗಿದೆ. ಆದರೆ ಈ ಮಾನವ ಸಂಪನ್ಮೂಲವನ್ನು ಸಮಾಜದ ಪ್ರಗತಿಗೆ ಆಧಾರವಾಗಿಸಿಕೊಳ್ಳುವುದರಲ್ಲಿ ಆಗಿರುವ ಗಂಭೀರ ದೋಷಗಳು ಯುವಜನರ ಬದುಕನ್ನು ಅಸಹನೀಯವಾಗಿಸಿವೆ. ನಮ್ಮ ಸಮಾಜಕ್ಕೂ ಗಂಭೀರ ಹಾನಿ ಮಾಡಿವೆ.

ಬದಲಾದ ಪರಿಸ್ಥಿತಿ

ದೇಶದಲ್ಲಿ 1990 ರ ದಶಕದ ಆರಂಭದಲ್ಲಿ ಜಾಗತೀಕರಣ–ಉದಾರೀಕರಣ–ಖಾಸಗೀಕರಣದ ನೀತಿಗಳು ಆರಂಭವಾದವು. ಆ ಹೊತ್ತಿಗಾಗಲೇ ಯುವಜನರನ್ನು ಕಾಡುತ್ತಿದ್ದ ನಿರುದ್ಯೋಗದ ಸಮಸ್ಯೆ, ಬದುಕಿನ ಅಭದ್ರ ಪರಿಸ್ಥಿತಿ ಹೊಸ ರೂಪವನ್ನು ಪಡೆದುಕೊಂಡಿತು. ಉದ್ಯಮ–ಸೇವಾವಲಯದ ಖಾಸಗೀಕರಣ, ಖಾಯಂ ಉದ್ಯೋಗಗಳ ಕಡಿತ, ದಿನಗೂಲಿ ಆಧಾರದ ನೇಮಕಾತಿಗಳು, ಗುತ್ತಿಗೆ, ಹೊರಗುತ್ತಿಗೆ, ಗೌರವಧನದ ಹೆಸರಿನ ನಿಕೃಷ್ಟ ವೇತನದ ಹುದ್ದೆಗಳು ಮುಂತಾದ ಪ್ರವೃತ್ತಿಗಳು ಹೆಚ್ಚಿದವು. ಜಾಗತೀಕರಣ ನೀತಿಗಳ ಫಲವಾಗಿ ಮತ್ತು ವಿಜ್ಞಾನ–ತಂತ್ರಜ್ಞಾನಗಳ ವಿಸ್ತರಣೆಯಿಂದ ಖಾಸಗಿ ವಲಯದಲ್ಲಿ ಐ.ಟಿ., ಬಿ.ಪಿ.ಒ. ಮುಂತಾದ ಕೆಲವು ವಲಯಗಳಲ್ಲಿ ಹೊಸ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಿದೆ ಎಂಬುದು ನಿಜವಾದರೂ ಒಟ್ಟಾರೆ ಉದ್ಯೋಗ ಕ್ಷೇತ್ರದಲ್ಲಿ ಅನಾರೋಗ್ಯಕರ ಪೈಪೋಟಿ, ಅಭದ್ರತೆ ಹೆಚ್ಚಿತು. ವೇತನದಲ್ಲಿನ ಅಸಮಾನತೆಯ ಪ್ರವೃತ್ತಿಯೂ ತೀವ್ರಗೊಂಡಿತು.

ಸಾಂಸ್ಕೃತಿಕ–ಸಾಮಾಜಿಕ ವಾತಾವರಣ

ಕ್ರಿಕೆಟ್ ಭಾರತದ ಯುವಜನರ ನೆಚ್ಚಿನ ಕ್ರೀಡೆ. ಎರಡು–ಮೂರು ದಶಕಗಳ ಹಿಂದೆ ಕ್ರಿಕೆಟ್‌ನಲ್ಲಿ ಪ್ರಧಾನವಾಗಿ ದೇಶಕ್ಕಾಗಿ ಅಥವಾ ರಾಜ್ಯಕ್ಕಾಗಿ ಆಡುವ ತಂಡಗಳು ಇದ್ದವು. ಆಟಗಾರರು ದೇಶಕ್ಕಾಗಿ ಅಥವಾ ರಾಜ್ಯಕ್ಕಾಗಿ ಆಡುವ ಪರಿಸ್ಥಿತಿ ಇತ್ತು. ಇಂದು ಹೆಚ್ಚಿನ ಸಂದರ್ಭಗಳಲ್ಲಿ ದೇಶ–ರಾಜ್ಯ ಎಂಬುದು ಹಿನ್ನೆಲೆಗೆ ಸರಿದಿದೆ. ಇಂದು ಹಣವಂತರು–ಬಂಡವಾಳಗಾರ ಕಂಪನಿಗಳು ಹುಟ್ಟುಹಾಕಿರುವ, ದೇಶ–ರಾಜ್ಯಗಳ ನೆಲೆಯಲ್ಲಿಲ್ಲದ ಕ್ರಿಕೆಟ್ ತಂಡಗಳು ಪ್ರಾಧಾನ್ಯತೆ ಪಡೆದುಕೊಂಡಿವೆ. ಇಲ್ಲಿ ಆಟಗಾರರನ್ನು ಹರಾಜಿನಲ್ಲಿ ಕೊಳ್ಳಲಾಗುತ್ತದೆ. ಆಟಗಾರರು ಸಿಕ್ಸರ್‌ಗಳು, ಫೋರ್‌ಗಳನ್ನು ಹೊಡೆದಾಗ ಸಂತೋಷ ವ್ಯಕ್ತಪಡಿಸಲು 'ಚಿಯರ್ ಗರ್ಲ್ಸ್'ಗಳ ಕುಣಿತವಿದೆ. ಈ ಹೊಸ 'ವ್ಯವಸ್ಥೆ'ಯು ಹೊಸ ಕಾಲದ ಹಾಗೂ ಬದಲಾದ 'ಕ್ರೀಡಾ ಮನೋಭಾವ'ವನ್ನು ಸೂಚಿಸುವ ಒಂದು ಸಂಕೇತವಾಗಿದೆ.

ನಿರುದ್ಯೋಗ–ಅರೆ ಉದ್ಯೋಗ–ಅಭದ್ರ ಉದ್ಯೋಗ

ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ 60,000 ಪೋಲೀಸ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದಾಗ 50 ಲಕ್ಷ ಜನ ನಿರುದ್ಯೋಗಿಗಳು ಅರ್ಜಿ ಹಾಕಿದ್ದಾರೆಂದು ವರದಿಯಾಗಿದೆ. ನಿರುದ್ಯೋಗ–ಅರೆ ಉದ್ಯೋಗ ನಮ್ಮ ದೇಶದ ಯುವಜನರನ್ನು ಕಾಡುತ್ತಿರುವ ಒಂದು ಬಹುದೊಡ್ಡ ಸಮಸ್ಯೆಯಾಗಿದೆ. ನಿರುದ್ಯೋಗ ಎಂದ ಕೂಡಲೇ ಕೆಲವರು, ಸರಿಯಾದ ವಿದ್ಯಾರ್ಹತೆ, ಕೌಶಲ್ಯ, ಕೆಲಸ ಮಾಡುವ ಮನಸ್ಸು ಇದ್ದವರಿಗೆ ನಿರುದ್ಯೋಗವೇ ಇಲ್ಲ, ವಿದ್ಯಾರ್ಹತೆ, ಕೌಶಲ್ಯ ಹಾಗೂ ಶ್ರಮಪಟ್ಟು ಕೆಲಸ ಮಾಡುವ ಮನಸ್ಸಿಲ್ಲದ ಸೋಮಾರಿಗಳಿಗಷ್ಟೆ ನಿರುದ್ಯೋಗ ಸಮಸ್ಯೆ ಎಂದು ಆಕ್ಷೇಪಿಸುವುದನ್ನು ನೋಡುತ್ತೇವೆ. ವಾಸ್ತವಿಕವಾಗಿ ಉದ್ಯಮ–ವ್ಯಾಪಾರ–ಮಾಧ್ಯಮ ಮುಂತಾದ ನಾನಾ ಕ್ಷೇತ್ರಗಳಿಗೆ ನುರಿತ, ಕೌಶಲ್ಯವಂತ ಯುವಜನರೇ ಸಿಗುತ್ತಿಲ್ಲ. ಆದರೆ ಉದ್ಯೋಗದ ಅವಕಾಶ ಧಾರಾಳವಾಗಿದೆ ಎಂದು ಅವರು ಉದಾಹರಣೆಗಳ ನಿರ್ದಿಷ್ಟ ಉದಾಹರಣೆಗಳ ಸಹಿತ ವಿವರಿಸುತ್ತಾರೆ. ಈ ಆಕ್ಷೇಪದಲ್ಲಿ ಸತ್ಯವೂ ಇದೆ. ಆದರೆ ಅದು ಭಾಗಶಃ ಸತ್ಯ, ಅಂಶಿಕ ಸತ್ಯ.

ನಿರುದ್ಯೋಗ ಅಂದಾಗ ವಿಚಾರವನ್ನು ಸರಳೀಕರಿಸದೇ ಅದರ ಆಳ–ಅಗಲಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಿದೆ. ವಿದ್ಯಾರ್ಹತೆ, ಕೌಶಲ್ಯ, ಕೆಲಸ ಮಾಡುವ ಮನಸ್ಸು ಇದ್ದವರಿಗೆ ಕೆಲವು ಉದ್ಯಮ, ಮಾಧ್ಯಮ ಮುಂತಾದ ಕಡೆಗಳಲ್ಲಿ ಒಂದಷ್ಟು ಅವಕಾಶಗಳಿವೆ, ಅಲ್ಲಿ ಅರ್ಹ ಅಭ್ಯರ್ಥಿಗಳು ಸಿಗುತ್ತಿಲ್ಲ ಎನ್ನುವುದು ನಿಜವಿದೆ. ಆದರೆ ಇದು ಎಲ್ಲ ವಿಭಾಗಗಳಿಗೂ ಅನ್ವಯವಾಗುವ ಮಾತಲ್ಲ. ವಿದ್ಯಾರ್ಹತೆ–ಕೌಶಲ್ಯ ಎರಡೂ ಇದ್ದು, ಅರ್ಹತೆಗೆ ತಕ್ಕ ಉದ್ಯೋಗ ದೊರಕದ ಪರಿಸ್ಥಿತಿಯೂ ನಾನಾ ವಲಯಗಳಲ್ಲಿದೆ. ಅದರ ಜೊತೆಗೆ ನಮ್ಮ ಯುವಜನರು ಶೈಕ್ಷಣಿಕ ಅರ್ಹತೆ ಪದವಿಗಳನ್ನು ಗಳಿಸಿಕೊಂಡಿದ್ದರೂ ನಿಜವಾದ ಕೌಶಲ್ಯ, ಸಾಮರ್ಥ್ಯವನ್ನು ಯಾಕೆ ಪಡೆದುಕೊಂಡಿಲ್ಲ ಎಂಬ ಪ್ರಶ್ನೆಯನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಅದು ನಮ್ಮ ಶಿಕ್ಷಣ ವ್ಯವಸ್ಥೆಯ ಗುಣಮಟ್ಟಕ್ಕೆ ಸಂಬಂಧಿಸಿದೆ.

ಗಿಳಿಪಾಠದ ಪರೀಕ್ಷಾ ಕೇಂದ್ರಿತ ಶಿಕ್ಷಣ

ನಮ್ಮ ಶಿಕ್ಷಣ ವ್ಯವಸ್ಥೆ ಎಂಬುದು ಜ್ಞಾನ ಕೇಂದ್ರಿತ, ಪ್ರಯೋಗ ಕೇಂದ್ರಿತ, ಅನುಭವ ಕೇಂದ್ರಿತ, ಕೌಶಲ್ಯ ಕೇಂದ್ರಿತ ಆಗುವ ಬದಲಿಗೆ ಪರೀಕ್ಷಾ ಕೇಂದ್ರಿತ–ಅಂಕಪಟ್ಟಿ ಕೇಂದ್ರಿತ ಆಗಿದೆ. ಬಾಯಿಪಾಠ, ಗಿಳಿಪಾಠ, ಉರುಹಚ್ಚುವ ಮೂಲಕ ಹೇಗಾದರೂ ಅತಿ ಹೆಚ್ಚು ಅಂಕಗಳಿಸುವುದು ವಿದ್ಯಾರ್ಥಿಗಳ ಮೇಲಿನ ತೀವ್ರ ಒತ್ತಡವಾಗಿದೆ. ಹೀಗಿರುವಾಗ ಶಾಲಾ ಕಾಲೇಜುಗಳಲ್ಲಿ ನಿಜವಾದ ಕಲಿಕೆ ಎಂಬುದು ಹಿನ್ನೆಲೆಗೆ ಸರಿದಿದೆ. ನಮ್ಮ ಸರಕಾರಗಳು ಶಿಕ್ಷಣಕ್ಕೆ ಅಗತ್ಯ ಬಜೆಟ್ ನೀಡದೇ ಇರುವುದು, ಶಾಲಾ–ಕಾಲೇಜುಗಳಲ್ಲಿ ಪಾಠ ಮಾಡುವ ಶಿಕ್ಷಕರ ಕೊರತೆ, ಗ್ರಂಥಾಲಯ, ಪ್ರಯೋಗ ಶಾಲೆಗಳ ಕೊರತೆ, ಪ್ರಾಯೋಗಿಕ ಅಂಶಗಳಿಗೆ ಗಮನದ ಕೊರತೆ ಮುಂತಾದ ಅಂಶಗಳೆಲ್ಲವೂ ಸೇರಿ ಸಾಕಷ್ಟು ಯುವಜನರು ಪದವಿ ದಾಖಲೆಗಳು, ಮಾರ್ಕ್ಸ್‌ಕಾರ್ಡ್‌ಗಳನ್ನು ಹೊಂದಿದ್ದರೂ ಸಹ ಕೆಲವು ನಿರ್ದಿಷ್ಟ ಉದ್ಯೋಗಗಳಿಗೆ ಬೇಕಾದ ನಿಜವಾದ ಕೌಶಲ್ಯ, ಸಾಮರ್ಥ್ಯ ಇಲ್ಲದಂತಹ ಪರಿಸ್ಥಿತಿಯಲ್ಲಿದ್ದಾರೆ. ಈ ಪರಿಸ್ಥಿತಿಗೆ ಆಳುವ ಸರಕಾರಗಳೇ ನೇರವಾಗಿ ಹೊಣೆಯಾಗಿವೆ.

ಖಾಲಿ ಹುದ್ದೆಗಳು–ಖಾಲಿ ಬದುಕು

ನಮ್ಮ ದೇಶದ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿ ಶಿಕ್ಷಕರ ಅನುಪಾತ ತೀರಾ ದುಸ್ಥಿತಿಯಲ್ಲಿದೆ. 2021–23 ರ ಅವಧಿಯಲ್ಲಿ ಒಂದು ಶಾಲೆಗೆ ಒಬ್ಬರೇ ಶಿಕ್ಷಕರಿರುವ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ ದೇಶದಲ್ಲಿ 1.2 ಲಕ್ಷದಷ್ಟಿದೆ ಎನ್ನುತ್ತದೆ ಒಂದು ವರದಿ.(ದಿ ಟೈಮ್ಸ್ ಆಫ್ ಇಂಡಿಯಾ–ಫೆಬ್ರವರಿ 21, 2023). ಈ ವರದಿಯ ಪ್ರಕಾರ ಕರ್ನಾಟಕದಲ್ಲಿ 7,848 ಏಕೋಪಾಧ್ಯಾಯ ಶಾಲೆಗಳಿವೆ. ದೇಶದ ರಾಜ್ಯದ ಎಲ್ಲ ಶಾಲೆಗಳಲ್ಲಿ ಕನಿಷ್ಠ ವಿಷಯಕ್ಕೊಬ್ಬರು ಶಿಕ್ಷಕರನ್ನು ನೀಡಿದರೆ, ಖಾಲಿ ಇರುವ ಎಲ್ಲ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಿದರೆ ಲಕ್ಷಾಂತರ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಶಿಕ್ಷಕ ತರಬೇತಿ ಮುಗಿಸಿ ನೇಮಕಾತಿಗಾಗಿ ಕಾಯುತ್ತಿರುವ ಲಕ್ಷಾಂತರ ಅರ್ಹ ನಿರುದ್ಯೋಗಿ ಯುವಜನರಿಗೆ ಉದ್ಯೋಗ ದೊರಕಿದಂತಾಗುತ್ತದೆ. ಜೊತೆಗೆ ಶಿಕ್ಷಣ ವ್ಯವಸ್ಥೆಯು ಸದೃಢವಾಗುತ್ತದೆ. ಇದು ಒಂದು ಕ್ಷೇತ್ರದ ಉದಾಹರಣೆಯಷ್ಟೆ.

ಭಾರತ ಒಕ್ಕೂಟ ಸರಕಾರ, ರಾಜ್ಯ ಸರಕಾರಗಳ ನೇಮಕಾತಿ ನಿರ್ಬಂಧ ನೀತಿಯಿಂದಾಗಿ ನಾನಾ ಇಲಾಖೆಗಳಲ್ಲಿ ದಶಲಕ್ಷಾಂತರ ಹುದ್ದೆಗಳನ್ನು ಭರ್ತಿ ಮಾಡದೇ ಖಾಲಿ ಉಳಿಸಲಾಗಿದ್ದು ಈ ಹುದ್ದೆಗಳನ್ನು ಭರ್ತಿ ಮಾಡಿದಲ್ಲಿ ಬಹುದೊಡ್ಡ ಪ್ರಮಾಣದ ಉದ್ಯೋಗಾವಕಾಶವು ಯುವಜನರಿಗೆ ದೊರೆಯಲಿದೆ.

ಉದ್ಯೋಗ ಸೃಷ್ಟಿಯ ಅಗಾಧ ಸಾಧ್ಯತೆ ಇರುವ ಮತ್ತೊಂದು ವಲಯ ಕೃಷಿ ಕ್ಷೇತ್ರ. ಆದರೆ ದೇಶದಲ್ಲಿ ಇಂದು ಕೃಷಿ ಎಂಬುದು ಲಾಭದಾಯಕವಾಗಿ ಉಳಿದಿಲ್ಲ. ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಂಬಲ ಬೆಲೆ, ಅಗತ್ಯ ಬೆಂಬಲ ಮುಂತಾದ ಅಗತ್ಯ ಕ್ರಮಗಳ ಮೂಲಕ ಕೃಷಿಯನ್ನು ಲಾಭದಾಯಕವಾಗಿ ಮಾಡುವುದು ಸಾಧ್ಯವಾದರೆ ಗ್ರಾಮೀಣ ಪ್ರದೇಶಗಳಲ್ಲಿ ಬಹುದೊಡ್ಡ ಸಂಖ್ಯೆಯ ಉದ್ಯೋಗ ಕೃಷಿ ಕ್ಷೇತ್ರದಲ್ಲಿ ಸೃಷ್ಟಿಯಾಗಲಿದೆ. ಆದರೆ ಜಾಗತೀಕರಣದ ನೀತಿಗಳನ್ನು ಅಪ್ಪಿಕೊಂಡ ಸರಕಾರಗಳಿಗೆ ಬೇಕಿಲ್ಲದ ನೀತಿಯಾಗಿದೆ.

ಯುವಜನರ ನಿರುದ್ಯೋಗವು ಬಾಲ ಕಾರ್ಮಿಕರ ದುರ್ಭರ ಬದುಕೂ

ಇದೊಂದು ವಿಚಿತ್ರ ವೈರುಧ್ಯದ ಸ್ಥಿತಿ.


ಉದ್ಯೋಗದ ನಿರೀಕ್ಷೆಯಲ್ಲಿ ಸರತಿ ಸಾಲಿನಲ್ಲಿ ಯುವಜನರ ಪಡೆ

ಶಾಲೆಗಳಲ್ಲಿ ಸಂತಸದಿಂದ ಆಡುತ್ತಾ ವಿದ್ಯೆ ಕಲಿಯಬೇಕಾದ ವಯಸ್ಸಿನ ಬಾಲಕ-ಬಾಲಕಿಯರು ಹೊಲ ಗದ್ದೆ, ತೋಟ, ಗ್ಯಾರೇಜು, ಹೋಟೇಲು, ಗಣಿ, ಕೈಗಾರಿಕೆಗಳಲ್ಲಿ ದುಡಿದು ತಮ್ಮ ಸುಂದರ ಬಾಲ್ಯವನ್ನು ಹಾಗೂ ಶಿಕ್ಷಣವನ್ನು ಕಳೆದುಕೊಳ್ಳುವುದು, ದುಡಿಯುವ ಸಾಮರ್ಥ್ಯ-ಉತ್ಸಾಹ ಎರಡೂ ಇರುವ ಯುವಜನರು ನಿರುದ್ಯೋಗದಿಂದ ನರಳುವುದು ಒಂದು ವಿಷಾದಯಯ ದುರಂತದ ಸ್ಥಿತಿಯಾಗಿದೆ.

ಇತ್ತೀಚಿನ ಯುನಿಸೆಫ್ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ 5 ರಿಂದ 14ನೇ ವಯಸ್ಸಿನ ಸು. 1,26,66,377(ಒಂದು ಕೋಟಿ ಇಪ್ಪತ್ತಾರು ಲಕ್ಷ) ಜನ ಬಾಲ ಕಾರ್ಮಿಕರಿದ್ದಾರೆ. ಉತ್ತರ ಪ್ರದೇಶ ರಾಜ್ಯ ಒಂದರಲ್ಲೇ ಸುಮಾರು 20 ಲಕ್ಷ ಬಾಲ ಕಾರ್ಮಿಕರಿದ್ದಾರೆ. ದೇಶದ ರಾಜಧಾನಿ ದೆಹಲಿಯಲ್ಲಿ ಸು. 10 ಲಕ್ಷ ಬಾಲಕಾರ್ಮಿಕರಿದ್ದಾರೆಂದು ಅಂಕಿ-ಸಂಖ್ಯೆಗಳು ಹೇಳುತ್ತವೆ.

ಬಾಲ ಕಾರ್ಮಿಕರನ್ನು ಅತಿ ಕಡಿಮೆ ಕೂಲಿಗೆ ಅತಿ ಹೆಚ್ಚು ಅವಧಿಗೆ ದುಡಿಸಲಾಗುತ್ತದೆ. ನಮ್ಮ ಸಮಾಜದಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಾಗಬೇಕು. ಅದು ಸಾಧ್ಯವಾದರೆ ಸಹಜವಾಗಿ ಕೋಟಿಗಟ್ಟಲೇ ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳು ದೊರೆಯುತ್ತವೆ.

ಯುವಜನರ ಮನಸ್ಸನ್ನು ಪ್ರಭಾವಿಸುತ್ತಿರುವ ವಿಚಾರಗಳು

ನಮ್ಮ ಸಿನಿಮಾ ಮತ್ತು ಟಿ.ವಿ., ಸಾಮಾಜಿಕ ಮಾಧ್ಯಮ ಸೇರಿದಂತೆ ಇತರೆ ಸಾಮೂಹಿಕ ಮಾಧ್ಯಮಗಳು, ಜಾಹಿರಾತುಗಳು ಒಟ್ಟು ಸಾಮಾಜಿಕ ಪರಿಸರವು ನಮ್ಮ ವಿದ್ಯಾರ್ಥಿ-ಯುವಜನರ ಮನಸ್ಸುಗಳಲ್ಲಿ ಹಲವಾರು ಬಗೆಯ ತಪ್ಪು ಕಲ್ಪನೆಗಳನ್ನು, ಭ್ರಮೆಗಳನ್ನು ಹುಟ್ಟು ಹಾಕುತ್ತಿವೆ ಎಂಬುದು ಒಂದು ಕಹಿ ವಾಸ್ತವ.


'ಹಿಂಸೆ'ಯ ವೈಭವೀಕರಣ
'ದೈಹಿಕ ಬಲಾಢ್ಯತೆ'ಯ ಕುರಿತ ಭ್ರಮೆಗಳು

ರೌಡಿಲೋಕ, ಭೂಗತ ಲೋಕದ ಕತೆಗಳು ನಮ್ಮ ಬಹಳಷ್ಟು 'ಜನಪ್ರಿಯ' ಸಿನಿಮಾಗಳ ಹೂರಣವಾಗಿವೆ. ಶುರುವಿನಿಂದ ಕೊನೆಯವರೆಗೆ ಸಾಲು ಸಾಲು ಹೆಣಗಳನ್ನು ಉರುಳಿಸುವ, ರಕ್ತದ ಕೋಡಿ ಹರಿಸುವ ವಿಕೃತ ಕತೆಗಳನ್ನುಳ್ಳ ಸಿನಿಮಾಗಳೇ ಇಂದು ಹೆಚ್ಚಿನಂಶ 'ಸೂಪರ್ ಹಿಟ್' ಸಿನಿಮಾಗಳಾಗಿವೆ. ಮಚ್ಚು, ಲಾಂಗು, ಗನ್ನುಗಳು ಬಗೆ ಬಗೆಯ ಆಯುಧಗಳನ್ನು ಹಿಡಿದುಕೊಂಡು ಮೂರು ಗಂಟೆಗಳ ಅವಧಿಯಲ್ಲಿ ನೂರೆಂಟು ಕಗ್ಗೊಲೆಗಳನ್ನು ಮಾಡುವ ವ್ಯಕ್ತಿ ಇಂದು ನಮ್ಮ ಸಿನಿಮಾಗಳ ನಾಯಕನಾಗಿದ್ದಾನೆ. ಸಿನಿಮಾಗಳಲ್ಲಿ ಮನೆ, ಮಹಲು, ಕಟ್ಟಡ, ವಾಹನ ಇತ್ಯಾದಿಗಳನ್ನು ಮನಸೋ ಇಚ್ಛೆ ಧ್ವಂಸ ಮಾಡುವುದು, ನಾಶ ಮಾಡುವುದು ಒಂದು 'ಆಕರ್ಷಣೆ'ಯಾಗಿದೆ. ಇಂತಹ ರಕ್ತಪಾತ, ಹಿಂಸೆಗಳಿಂದ ಕೂಡಿದ ಸಿನಿಮಾಗಳ ಮೂಲಕವೇ ವರ್ಚಸ್ಸು ಬೆಳೆಸಿಕೊಂಡು ಬೆಳೆದ ಸಿನಿಮಾ ನಾಯಕರು ಇಂದು ದೊಡ್ಡ ಸಂಖ್ಯೆಯ ಯುವಜನರ ಆದರ್ಶವಾಗಿದ್ದಾರೆ.

ಹೆಣ್ಣಿನ ಪಾತ್ರಗಳು, ಸಿನಿಮಾದ ನಾಯಕಿ ಎಂದರೆ ಆಕೆ, ದೈಹಿಕ ಸೌಂದರ್ಯದ ಸಂಕೇತ ಅಷ್ಟೆ. ಚಂದದ ಬೊಂಬೆ ಮಾತ್ರ. ಯುವಕರ 'ಸಾಮರ್ಥ್ಯ' ಅಂದರೆ ಅದು ಮೃಗಗಳಂತೆ ಹೊಡೆದಾಡುವ ಸಾಮರ್ಥ್ಯ, ಅರ್ಥಾತ್ 'ದೈಹಿಕ ಸಾಮರ್ಥ್ಯ'. ಅದು ಬಿಟ್ಟು ಬೇರೇನೂ ಇಲ್ಲ ಎಂದು ಈ ಹೆಚ್ಚಿನ ಸಿನಿಮಾಗಳ ಮೂಲಕ ಬಿಂಬಿಸಲಾಗಿದೆ.






ಯುವಜನರನ್ನು ದಾರಿ ತಪ್ಪಿಸುತ್ತಿರುವ ಕೆಲವು ವಿಚಾರ-ಪ್ರವೃತ್ತಿಗಳು

'ಸಿಕ್ಸ್ ಪ್ಯಾಕ್'-'ಏಯ್ಟ್ ಪ್ಯಾಕ್' ವ್ಯಾಮೋಹ

ಯುವಜನರು ದೈಹಿಕವಾಗಿ ಆರೋಗ್ಯವಾಗಿರಬೇಕು, ಅದಕ್ಕೆ ಪೂರಕವಾಗಿ ದೈಹಿಕ ವ್ಯಾಯಾಮ, ನಡಿಗೆ ಇತ್ಯಾದಿಗಳನ್ನು ಮಾಡಬೇಕು. ಇದು ಒಳ್ಳೆಯದು. ಅಗತ್ಯವಾದದ್ದು. ಆದರೆ ಆರೋಗ್ಯ, ದೇಹದಾರ್ಢ್ಯತೆ ಎಂದರೆ ಅದು 'ಸಿಕ್ಸ್ ಪ್ಯಾಕ್', 'ಏಯ್ಟ್ ಪ್ಯಾಕ್'ಗಳ ದೇಹ. ಮಾಂಸ ಪರ್ವತದಂತಹ ದೇಹವುಳ್ಳವನೇ ಆರೋಗ್ಯವಂತ, ಶೂರ, ವೀರ ಎಂಬ ಭಾವನೆಗಳನ್ನು ಬಿತ್ತಲಾಗುತ್ತಿದೆ. ಯುವಜನರನ್ನು ಇಲ್ಲಿ ದಾರಿ ತಪ್ಪಿಸಲಾಗಿದೆ. ದುಬಾರಿ ಉಪಕರಣಗಳುಳ್ಳ, ದುಬಾರಿ ಶುಲ್ಕವನ್ನು ವಸೂಲಿ ಮಾಡುವ 'ಜಿಮ್'ಗಳ ಕುರಿತು ಯುವಜನರಲ್ಲಿ ವ್ಯಾಮೋಹವನ್ನು ಬೆಳೆಸಲಾಗಿದೆ. ಸೊಪ್ಪು-ತರಕಾರಿಗಳು-ಮೊಟ್ಟೆ-ಮಾಂಸ-ಬೇಳೆ ಕಾಳು-ಹಣ್ಣು ಹಂಪಲು ಮುಂತಾದ ಸಹಜವಾದ ಪೌಷ್ಠಿಕ ಆಹಾರಗಳಿಗೆ ಬದಲಾಗಿ, ಹಾನಿಕಾರಕವಾದ ಸ್ಟಿರಾಯ್ಡ್‌ಯುಕ್ತ ಕೃತಕ ಪ್ರೋಟೀನು ಇತ್ಯಾದಿಗಳಿಂದ ಕೂಡಿದ ಆಹಾರಗಳಿಂದ ಹಾಗೂ ಜಿಮ್‌ಗಳಲ್ಲಿನ ಅತಿರೇಕದ ಕಸರತ್ತುಗಳಿಂದ ಯುವಜನರ ಆರೋಗ್ಯದ ಮೇಲೆ ಆಗುತ್ತಿರುವ ನಿಜವಾದ ಪರಿಣಾಮಗಳ ಬಗೆಗೆ ವೈಜ್ಞಾನಿಕವಾದ ಅಧ್ಯಯನ-ಸಂಶೋಧನೆಗಳು ನಡೆಯಬೇಕಿದೆ.

ಕುಡಿತ - ಮೋಜುಗಳಿಗೆ ಪ್ರಚೋದನೆ

ಕೆಲವು ದಶಕಗಳ ಹಿಂದಿನ ಸಿನಿಮಾಗಳಲ್ಲಿ ಚಿತ್ರದ ನಾಯಕ ಕುಡಿಯುವುದು ಮುಂತಾದ ಚಟುವಟಿಕೆಗಳಲ್ಲಿ ಭಾಗಿಯಾಗುವ ದೃಶ್ಯಗಳು ಇರುತ್ತಿರಲಿಲ್ಲ. ಬದಲಿಗೆ ಕುಡಿತ ಒಂದು ತಪ್ಪು ಹವ್ಯಾಸ ಎಂಬಂತೆ ಬಿಂಬಿಸಲಾಗುತ್ತಿತ್ತು. ಇಂದು ಸಾಮಾಜಿಕ ಮೌಲ್ಯಗಳು ಸಾಕಷ್ಟು ಬದಲಾಗಿವೆ. ಯುವಜನರು ಕುಡಿಯುವುದು ಅತ್ಯಂತ ಸಹಜ ವಿದ್ಯಮಾನ ಎಂಬಂತೆ ಈಗ ಸಿನಿಮಾಗಳಲ್ಲಿ ಬಿಂಬಿಸಲಾಗುತ್ತಿದೆ. ಕುಡಿತ ಮತ್ತು ಮೋಜು-ಮಸ್ತಿಗಳೇ ಜೀವನದ ಪರಮ ಧ್ಯೇಯ, ಅದರಿಂದಲೇ ಜೀವನದ ಸಾರ್ಥಕತೆ. ಕುಡಿಯದಿರುವವನು ಯುವಕನೇ ಅಲ್ಲ ಎಂಬಂತಹ ಮನೋಭಾವವನ್ನು ಸಿನಿಮಾಗಳ ಮೂಲಕ ಬೆಳೆಸಲಾಗುತ್ತಿದೆ. ಹೆಣ್ಣನ್ನು ಸರಕೆಂದು ಭಾವಿಸುವ ಮತ್ತು ಕೀಳು ಲೈಂಗಿಕ ಅಭಿರುಚಿಯ ಮೂಲಕವೂ ಯುವಜನರನ್ನು ನೈತಿಕವಾಗಿ ಭ್ರಷ್ಟರನ್ನಾಗಿಸಲಾಗುತ್ತಿದೆ.

ವ್ಯಕ್ತಿ ಕೇಂದ್ರಿತ ಸ್ವಾರ್ಥದ ಚಿಂತನೆಗಳು

..ಇಂದಿನ ಜಗತ್ತು ತೀವ್ರ ಪೈಪೋಟಿಯಿಂದ ಕೂಡಿದೆ. ಇಲ್ಲಿ ಕತ್ತುಕೊಯ್ಯುವ ಸ್ಪರ್ಧೆ ಇದೆ. ಇಂತಹ ಸಮಾಜದಲ್ಲಿ ಯುವಜನರು ತಮ್ಮ ಸ್ವಂತ ಬದುಕನ್ನು ರೂಪಿಸಿಕೊಳ್ಳುವ ಬಗೆಗೆ ಮಾತ್ರ ಗಮನಕೊಡಬೇಕು... ಸುತ್ತಮುತ್ತಲ ಜನರು, ಸಮಾಜದ ಬಗೆಗೆ ತಲೆ ಕೆಡಿಸಿಕೊಳ್ಳಬಾರದು... ಇದು ಹೆಚ್ಚಿನ ಯುವಜನರಿಗೆ ಸಿಗುತ್ತಿರುವ 'ಉಪದೇಶ'ವಾಗಿದೆ ಮತ್ತು ಹೆಚ್ಚಿನ ಯುವಜನರನ್ನು ಸೆಳೆಯುತ್ತಿರುವ 'ಸಿದ್ಧಾಂತ'ವೂ ಆಗಿದೆ. ಸಮಾಜದ ನೋವುಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸಬೇಕೆಂಬ ಮನೋಭಾವ, ಸಾಮಾಜಿಕ ಕಳಕಳಿ ಎಂಬುದು ಯುವಜನರ ನಡುವೆ ಆಕರ್ಷಣೆ ಕಳೆದುಕೊಂಡು ಕಳೆಗುಂದುತ್ತಿರುವ ಮೌಲ್ಯವಾಗಿದೆ. ಆದರೆ ಇದಕ್ಕೆ ತದ್ವಿರುದ್ಧವಾದ ಒಂದು ಆತಂಕಕಾರಿ ವಿದ್ಯಮಾನ ಎಂದರೆ ದ್ವೇಷ-ಹಗೆತನಗಳೇ ಆಧಾರವಾದ ಕೋಮುವಾದಿ ಪ್ರಚಾರಗಳಿಗೆ ಯುವಜನರು ಹೆಚ್ಚು ಹೆಚ್ಚು ತಮ್ಮ ಮನಸ್ಸುಗಳನ್ನು ಒಪ್ಪಿಸುತ್ತಿರುವುದು, ಮತಾಂಧ ಸಂಘಟನೆಗಳ ಕಾಲಾಳುಗಳಾಗಿ ಕೆಲಸ ಮಾಡಲು ತೊಡಗಿರುವುದು.

ಮತವೆಂಬ ಮೋಹದಜ್ಞಾನಕ್ಕೆ ಸಿಲುಕುತ್ತಿರುವ ಯುವಜನ

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕ ಹಿತಕೆ,
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ,
ಓ ಬನ್ನಿ ಸೋದರರ ವಿಶ್ವಪಥಕೆ

ಎಂದು ಮಹಾಕವಿ ಕುವೆಂಪು ಅವರು ಕರೆ ನೀಡಿದರು.

ಬದುಕಿನ ಬಗೆಗೆ ಹೊಂಗನಸುಗಳನ್ನು ಕಾಣುವ ಏರುಯೌವನದ ಕಾಲದಲ್ಲಿ ದೇಶದ ಶೋಷಿತ ಜನರ ವಿಮೋಚನೆಗಾಗಿ ಹುತಾತ್ಮ ಭಗತ್ ಸಿಂಗ್, ಸುಖದೇವ್, ರಾಜಗುರು ಮುಂತಾದ ಯುವಕರು ನಗುನಗುತ್ತಾ ನೇಣುಗಂಬವನ್ನೇರಿದರು. ಈ ಧೀಮಂತ ಸ್ವಾತಂತ್ರ್ಯ ಹೋರಾಟಗಾರರ ಜೀವನದ ಆದರ್ಶಗಳು ಗುರಿಗಳನ್ನು ಗೌರವಿಸುವ ಯಾವ ಯುವಜನರೂ ಕೋಮುವಾದಿ ಸಂಘಟನೆಗಳ ಕಾಲಾಳುಗಳಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ಆದರೆ ವೈಚಾರಿಕ ಸ್ಪಷ್ಟತೆ ಇಲ್ಲದ ಯುವಜನರು ಸಂಕುಚಿತ ರಾಜಕೀಯ ಕಾರಣಗಳಿಗಾಗಿ ಮತಾಂಧ ಶಕ್ತಿಗಳು ಹುಟ್ಟುಹಾಕುವ ಕೋಮುಗಲಭೆಗಳಲ್ಲಿ ಪ್ರಾಣ ಕಳೆದುಕೊಂಡು ಬೀದಿ ಹೆಣವಾಗುವ ದುರಂತಗಳು ಸಂಭವಿಸುತ್ತಿರುವುದು ವರ್ತಮಾನ ಕಾಲದ ವಿಷಾದನೀಯ ವಾಸ್ತವವಾಗಿದೆ. ಅನ್ಯಮತ ದ್ವೇಷ-ಹಗೆತನಗಳೇ ಬಂಡವಾಳವಾದ ಹಿಂದುತ್ವವಾದಿ ಶಕ್ತಿಗಳು ದಿನೇ ದಿನೇ ಆಕ್ರಮಣಕಾರಿಯಾಗಿ ಮತಾಂಧ ವಿಚಾರಗಳನ್ನೆತ್ತುತ್ತಾ ಯುವಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಮುಸ್ಲಿಂ ಮೂಲಭೂತವಾದ, ಕೋಮುವಾದವೂ ವರ್ತಿಸುತ್ತಿದೆ. ಹಿಂದುತ್ವ ಕೋಮುವಾದ-ಮುಸ್ಲಿಂ ಕೋಮುವಾದಗಳು ಪರಸ್ಪರ ಒಂದರ ಬಾಲವನ್ನು ಒಂದು ನುಂಗಿ ಬೆಳೆಯುವ ವಿಷಸರ್ಪಗಳಂತೆ ಬೆಳೆಯುತ್ತಾ ಯುವಜನರನ್ನು ತಮ್ಮ ದ್ವೇಷ ಚಳುವಳಿಯ ತೆಕ್ಕೆಗೆ ಸೆಳೆದುಕೊಳ್ಳುತ್ತಿರುವುದು ಆತಂಕಕಾರಿ ವಿದ್ಯಮಾನವಾಗಿದೆ.

ಜಾತಿವಾದ, ಪ್ರಜಾಪ್ರಭುತ್ವ ವಿರೋಧಿ ನಿಷೇಧ-ನಿರ್ಬಂಧಗಳು

ಭಾರತವು ಜಗತ್ತಿನ ಅತಿದೊಡ್ಡ ಪ್ರಜ್ಞಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ದೇಶವೆಂದು ಹೇಳಲಾಗುತ್ತದೆ. ಆದರೆ ಇಲ್ಲಿನ ಹಳ್ಳಿಗಳಲ್ಲಿ ಕ್ಷೌರದಂಗಡಿಗಳಲ್ಲಿ ದಲಿತರಿಗೆ ಕ್ಷೌರ ಮಾಡುವುದಿಲ್ಲ. ದಲಿತರು ಬಂದರೆ ಹೋಟೆಲನ್ನೇ ಮುಚ್ಚಲಾಗುತ್ತದೆ. ಇನ್ನು ದೇವಸ್ಥಾನಗಳಿಗೆ ಪ್ರವೇಶದ ಮಾತು ದೂರವೇ ಉಳಿಯಿತು. ಈ ಜಾತಿತಾರತಮ್ಯ-ಅನ್ಯಾಯಗಳನ್ನು ವಿರೋಧಿಸುವ ಯುವಜನರು ಇಂದು ದೌರ್ಜನ್ಯಗಳಿಗೆ ತುತ್ತಾಗುತ್ತಿದ್ದಾರೆ. ಕಗ್ಗೊಲೆಯಾಗುತ್ತಿದ್ದಾರೆ. ಇಂತಹ ಜಾತಿಗ್ರಸ್ತ ಸಮಾಜದಲ್ಲಿ ಯುವಜನರ ಪ್ರೀತಿ-ಪ್ರೇಮದ ಭಾವನೆಗಳಿಗೂ ಗೌರವವಿಲ್ಲ. ದ್ವೇಷ ಭಾವನೆಗಳಿಗೆ ಸಿಗುತ್ತಿರುವ ಮನ್ನಣೆ ಪ್ರೀತಿಗೆ ಇಲ್ಲ. ವಯಸ್ಕ-ಅರ್ಹ ಯುವಕ-ಯುವತಿಯರು ಪ್ರೀತಿಸಿ ಮದುವೆ ಆಗುತ್ತೇವೆ ಎಂದರೆ ಇಲ್ಲಿ ನೂರೆಂಟು ಅಡ್ಡಿಗಳು. 'ಮರ್ಯಾದೆ'ಯ ಹೆಸರಿನಲ್ಲಿ, ಅಂತರಜಾತೀಯ ವಿವಾಹವಾಗುವ ಗಂಡು ಮತ್ತು ಹೆಣ್ಣುಗಳನ್ನು ಸ್ವತಃ ಹತ್ತಿರದ ಸಂಬಂಧಿಗಳೇ ಕೊಚ್ಚಿ ಕೊಂದು ಹಾಕುವಂತಹ ಘೋರ ದುರಂತಗಳು ಘಟಿಸುತ್ತಿವೆ. ಇಪ್ಪತ್ತನೇ ಶತಮಾನ ಕಳೆದು ಇಪ್ಪತ್ತೊಂದನೇ ಶತಮಾನದಲ್ಲಿ ಈ 'ಮರ್ಯಾದೆಗೇಡು ಹತ್ಯೆ'ಗಳಂತಹ ಘಟನಾವಳಿಗಳು ಹೆಚ್ಚುತ್ತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿಯಾಗಿದೆ. ಈ ಪ್ರಸಂಗಗಳಲ್ಲಿ ತಳ ಸಮುದಾಯಗಳ ಅಂದರೆ ದಲಿತ ಮತ್ತು ಹಿಂದುಳಿದ ಹಾಗೂ ಬುಡಕಟ್ಟು ಸಮುದಾಯಗಳ ಯುವಜನರೇ ಜಾತಿವಾದಿ ಶಕ್ತಿಗಳ ದಾಳಿಯಲ್ಲಿ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಹಿಂದುತ್ವವಾದಿ ಶಕ್ತಿಗಳು ಎಂದಿಗೂ ಇಂತಹ ಪ್ರಕರಣಗಳಲ್ಲಿ ನೊಂದವರ ಪರ ನಿಂತದ್ದನ್ನು ಯಾರೂ ಕಾಣರು. ಹೀಗಾಗಿ 'ಹಿಂದುತ್ವ' ಎಂದರೆ ನಿಜವಾಗಿ ಏನು ಎಂದು ಎಲ್ಲರೂ ಅರಿಯುವುದು ಬಹಳ ಮುಖ್ಯ.

ಪುಟ 10 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ ಫೆಬ್ರವರಿ 26-ಮಾರ್ಚ್ 3, 2024 9 February 26-March 3, 2024 JANASHAKTHI KANNADA VARA PATRIKE

ಬದುಕು: ಯುವಜನರ ಮುಂದಿನ ದಾರಿ ಯಾವುದು....... ಪುಟ 9 ರಿಂದ

ಹೆಣ್ಣಿನ ಲೋಕದ ತಲ್ಲಣಗಳು

ದೇಶದ ಒಟ್ಟು ಯುವಜನರ ಸರಿಸಮಾರು ಅರ್ಧಭಾಗವಾಗಿರುವ ಯುವತಿಯರ ಸಮಸ್ಯೆಗಳು ಅಗಣಿತ. ಹೆಣ್ಣಿನ ಸಮಸ್ಯೆಗಳು ಭ್ರೂಣದ ಹಂತದಿಂದಲೇ ಆರಂಭವಾಗುತ್ತವೆ. ಹೆಣ್ಣು ಭ್ರೂಣ ಹತ್ಯೆ, ಲೈಂಗಿಕ ಕಿರುಕುಳಗಳು, ದೌರ್ಜನ್ಯಗಳು, ಅತ್ಯಾಚಾರ ಮತ್ತು ಕೊಲೆಗಳು, ಬದುಕಿನುದ್ದಕ್ಕೂ ಶಿಕ್ಷಣ, ಉದ್ಯೋಗದ ಅವಕಾಶಗಳು ಸೇರಿದಂತೆ ಎಲ್ಲದರಲ್ಲೂ ಲಿಂಗ ತಾರತಮ್ಯ, ಆಸ್ತಿಯಲ್ಲಿ ಪಾಲು ನಿರಾಕರಣೆ ಅಥವಾ ಸಮಾನ ಪಾಲು ನಿರಾಕರಣೆ ಇವೆಲ್ಲಾ ಅತಿ ಸಾಮಾನ್ಯ ಸಂಗತಿಗಳಾಗಿವೆ.

ಮದುವೆ ವಯಸ್ಸಿನ ಗಂಡುಗಳಿಗೆ ಮದುವೆಯಾಗಲು ಹೆಣ್ಣು ಸಿಗದಂತಹ ಪರಿಸ್ಥಿತಿ, ಮದುವೆ ವಯಸ್ಸಿನ ಹೆಣ್ಣುಗಳಿಗೆ ಸರಿಯಾದ ಉದ್ಯೋಗ ಅಥವಾ ಆದಾಯವಿರುವ ಅರ್ಹ ಗಂಡುಗಳು ಸಿಗದ ಪರಿಸ್ಥಿತಿಗಳು ನಮ್ಮ ಸಮಾಜವು ಎದುರಿಸುತ್ತಿರುವ ಸಂಕೀರ್ಣ ಬಿಕ್ಕಟ್ಟಿನ ಸೂಚನೆಗಳಾಗಿವೆ.

ಭವಿಷ್ಯದ ದಿಕ್ಕು ದೆಸೆ

'ನೆಲವನ್ನು ಗುದ್ದಿ ನೀರು ತೆಗೆಯುವ ವಯಸ್ಸು', 'ಕಲ್ಲನ್ನು ತಿಂದು ಕರಗಿಸಿಕೊಳ್ಳುವ ವಯಸ್ಸು' ಎಂದೆಲ್ಲಾ ಯುವಜನರ ಸಾಮರ್ಥ್ಯದ ಬಗೆಗೆ ಹೇಳುವ ರೂಪಕದ ಮಾತುಗಳಿವೆ. ಕಠಿಣವಿದ್ದರೂ ಉದಾತ್ತವಾದ ಸ್ಪಷ್ಟ ಗುರಿಗಳನ್ನು ಯುವಜನತೆ ಗುರುತಿಸಿಕೊಳ್ಳಬೇಕು. 'ಜಗತ್ತಿನ ಯಾವ ಮೂಲೆಯಲ್ಲೇ ಆಗಲಿ, ನಡೆಯುವ ಅನ್ಯಾಯದ ವಿರುದ್ಧ ದನಿ ಎತ್ತಿದರೆ ಆಗ ನೀನು ನನ್ನ ಸಂಗಾತಿ' ಎಂಬ ಅರ್ನೆಸ್ಟೋ ಚೆಗೆವಾರನ ಮಾತನ್ನು ಯುವಜನತೆ ಸದಾ ನೆನಪಿನಲ್ಲಿ ಇರಿಸಿಕೊಳ್ಳಬೇಕು.

ನಮ್ಮ ಸುತ್ತಮುತ್ತಲ ಸಮಾಜ ಅನ್ಯಾಯ, ಅಸಮಾನತೆ, ಭ್ರಷ್ಟತೆಗಳಿಂದ ಕೂಡಿದೆ. ಜಾತಿವಾದ, ಕೋಮುವಾದ ಮುಂತಾದ ಸಮಸ್ಯೆಗಳು ಬೆಳೆಯುತ್ತಾ ಸಮಾಜವನ್ನು ಅಂಧಕಾರದ ಕಡೆಗೆ ಕೊಂಡೊಯ್ಯುತ್ತಿವೆ. ಆದರೆ 'ಕೊನೆಗಾಣದ ಬಾಳಿನ ಸಂಕಟಗಳ ಪರಿಹಾರಕ್ಕೆ ಹೋರಾಟವೇ ದಾರಿ' ಎಂಬ ಮಾತನ್ನು ಯುವಜನತೆ ಮರೆಯಬಾರದು. ಅದು ವೈಯುಕ್ತಿಕ ಬದುಕಿನ ಸಮಸ್ಯೆಗಳೇ ಇರಲಿ, ಯುವಸಮೂಹದ ಸಾಮಾನ್ಯ ಸಮಸ್ಯೆಗಳೇ ಇರಲಿ ಈ ಮಾತು ನಿಜ. ಹೀಗಾಗಿ ಯುವಜನರನ್ನು ಬಾಧಿಸುತ್ತಿರುವ ಸಮಸ್ಯೆಗಳ ವಿರುದ್ಧ ಪ್ರಬಲವಾದ ಯುವಜನಾಂದೋಲವನ್ನು ಹೊಮ್ಮಿಸುವುದು, ಪ್ರಸಕ್ತ ಯುವಜನ ಸಮ್ಮೇಳನವು ರೂಪಿಸುವ ಭವಿಷ್ಯದ ಕಾರ್ಯಯೋಜನೆಗಳನ್ನು ಸಮರ್ಥವಾಗಿ ಜಾರಿಗೊಳಿಸುವುದು, ರಾಜ್ಯದಾದ್ಯಂತ ಯುವಜನರ ಬಲಿಷ್ಟ ಚಳುವಳಿಯನ್ನು ರೂಪಿಸಿ ಸಂಘಟನೆಯನ್ನು ಗಟ್ಟಿಗೊಳಿಸುವುದು, ಇಂದಿನ ಯುವಜನರ ಮುಂದಿನ ಒಂದು ಪ್ರಧಾನ ಕಾರ್ಯಸೂಚಿಯಾಗಬೇಕಿದೆ.

ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ...... ಪುಟ 4 ರಿಂದ

ಅಥವಾ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸಮಾಜಕ್ಕೆ ತುಂಬಲಾರದ ನಷ್ಟ. ದೇಶದ ಜನಸಂಖ್ಯೆಯ ಶೇಕಡಾ 66 ರಷ್ಟು ಜನರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಎಂದು ಅಂದಾಜಿಸಲಾಗಿದೆ.

ಬೇಡಿಕೆ ಹೆಚ್ಚಳವಾಗದೆ ಹೂಡಿಕೆ ಬರುವುದಿಲ್ಲ

ಹೂಡಿಕೆದಾರರನ್ನು ಹೆಚ್ಚು ಹೂಡಿಕೆ ಮಾಡಲು ಉತ್ತೇಜಿಸುವುದು ಮೋದಿ ಸರ್ಕಾರದ ನೀತಿಗಳ ಮುಖ್ಯ ತತ್ವವಾಗಿದೆ. ಉದ್ಯೋಗಾವಕಾಶ ಸೃಷ್ಟಿಸುವ ಹೆಸರಿನಲ್ಲಿ ದೊಡ್ಡ ಹೂಡಿಕೆದಾರರಿಗೆ ಸರ್ಕಾರ ಹಲವು ಅನುದಾನಗಳನ್ನು ನೀಡುತ್ತಿದ್ದರೂ, ಉದ್ಯೋಗಗಳನ್ನು ಸೃಷ್ಟಿಸುವ ಜವಾಬ್ದಾರಿಯನ್ನು ಈ ಸರ್ಕಾರ ಈಡೇರಿಸುತ್ತಿಲ್ಲ. ವಿದೇಶಿ ಹೂಡಿಕೆದಾರರಿಗೂ ಸಾಕಷ್ಟು ರಿಯಾಯಿತಿ ಕೊಡುತ್ತಿದೆ. ಹೂಡಿಕೆ ಹೆಚ್ಚಾದಷ್ಟೂ ಆರ್ಥಿಕ ಬೆಳವಣಿಗೆ ದರ ಹೆಚ್ಚುತ್ತದೆ ಎಂಬುದು ಇದರ ಹಿಂದಿರುವ ವಿಚಾರ. ಆದಾಗ್ಯೂ, ಈ ವಿಧಾನಗಳು ನಿಷ್ಪ್ರಯೋಜಕವಾಗಿವೆ. ಮೊದಲ ಕಾರಣ: ಮಾರುಕಟ್ಟೆಯಲ್ಲಿ ಕೆಲವು ಏಕಸ್ವಾಮ್ಯದಾರರು ಪ್ರಾಬಲ್ಯ ಹೊಂದಿರುವಾಗ, ಮಾರುಕಟ್ಟೆಯಲ್ಲಿ ಕೊಳ್ಳುವ ಶಕ್ತಿ ಅಥವಾ ಬೇಡಿಕೆ ಎಷ್ಟು ಹೆಚ್ಚಾಗಬಹುದು ಎಂಬ ನಿರೀಕ್ಷೆಯ ಆಧಾರದ ಮೇಲೆ ಹೂಡಿಕೆಯ ಮೊತ್ತವನ್ನು ನಿರ್ಧರಿಸಲಾಗುತ್ತದೆ. ಅಂದರೆ ಮಾರುಕಟ್ಟೆಯಲ್ಲಿ ಕೊಳ್ಳುವ ಶಕ್ತಿ ಹೆಚ್ಚಿಸಲು ಕ್ರಮಕೈಗೊಂಡರೆ ಮಾತ್ರ ಹೆಚ್ಚುವರಿ ಹೂಡಿಕೆ ಬರುತ್ತದೆ. ಬೇಡಿಕೆಯನ್ನು ಹೆಚ್ಚಿಸಲು ಯಾವುದೇ ಕ್ರಮಗಳಿಲ್ಲದಿದ್ದರೆ, ಹೂಡಿಕೆದಾರರು ಹೆಚ್ಚಿನ ಹೂಡಿಕೆ ಮಾಡುವುದಿಲ್ಲ. ಸರ್ಕಾರ ಹೂಡಿಕೆದಾರರಿಗೆ ಹೆಚ್ಚುವರಿ ಪ್ರೋತ್ಸಾಹ ನೀಡುವುದರಿಂದ ಕಲ್ಯಾಣ ಯೋಜನೆಗಳ ಮೇಲಿನ ವೆಚ್ಚ ಕಡಿಮೆಯಾಗುತ್ತದೆ. ಪರಿಣಾಮವಾಗಿ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಗುತ್ತದೆ. ಇದು ಉದ್ಯೋಗ ಕಡಿತಕ್ಕೆ ಮತ್ತಷ್ಟು ಕಾರಣವಾಗುತ್ತದೆ.

ಖಾಲಿ ಹುದ್ದೆಗಳನ್ನು ತುಂಬುತ್ತಿಲ್ಲ

ಲಾಭದಲ್ಲಿರುವ ಸಾರ್ವಜನಿಕ ವಲಯದ ಕಂಪನಿಗಳನ್ನೂ ಮಾರಾಟ ಮಾಡಲಾಗುತ್ತಿದೆ. ಇದರಿಂದಾಗಿ ಹೊಸ ಉದ್ಯೋಗಗಳು ಮಾತ್ರವಲ್ಲ, ಇರುವ ಉದ್ಯೋಗಗಳೂ ನಷ್ಟವಾಗುತ್ತಿವೆ. ಜಗತ್ತಿನ ಅತಿ ದೊಡ್ಡ ಸಾರಿಗೆ ವ್ಯವಸ್ಥೆಯಾಗಿರುವ ರೈಲ್ವೇಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಖಾಲಿ ಬಿದ್ದಿರುವುದು ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂಬುದು ಸ್ಪಷ್ಟವಾಗಿದೆ. ಸಾರ್ವಜನಿಕ ವಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಯತ್ನ ನಡೆಯುತ್ತಿಲ್ಲ. ಆರ್ಥಿಕ ಸಂಪನ್ಮೂಲಗಳ ಕೊರತೆಯೇ ಕಾರಣ ಎಂದು ಅದು ಹೇಳಿದೆ. ಆದರೆ ಆರ್ಥಿಕ ಸಂಪನ್ಮೂಲಗಳ ಕೊರತೆಗೆ ಕಾರಣವೇನು? ಹೂಡಿಕೆದಾರರಿಗೆ ಹೆಚ್ಚುವರಿ ರಿಯಾಯಿತಿಗಳು ಕಾರಣವೇ? ಒಂದೆಡೆ ನಿರುದ್ಯೋಗ ಹೆಚ್ಚುತ್ತಿರುವುದು ಅಂಕಿಅಂಶಗಳಿಂದ ಬಹಿರಂಗವಾದರೆ, ಇನ್ನೊಂದೆಡೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಖರ್ಚು ಮಾಡಬೇಕಾದ ಹಣವನ್ನು ಸರ್ಕಾರ ಕಡಿತಗೊಳಿಸುತ್ತಿದೆ. ಜನತೆ ಎಚ್ಚೆತ್ತುಕೊಂಡು, ಮೋದಿ ಸರ್ಕಾರದ ಸ್ವದೇಶಿ ಮತ್ತು ವಿದೇಶಿ ಬಂಡವಾಳಗಾರರ ಪರವಾದ ನವ ಉದಾರವಾದಿ ನೀತಿಗಳ ವಿರುದ್ಧ ಧ್ವನಿ ಎತ್ತದಿದ್ದರೆ, ಈ ನೀತಿಗಳನ್ನು ಹಿಮ್ಮೆಟ್ಟಿಸದಿದ್ದರೆ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಗಲಾರದು.

ಪ್ರಕಟಣೆ

ಕಳೆದ 10 ವರ್ಷಗಳಲ್ಲಿ ನರೇಂದ್ರ ಮೋದಿ ಸರ್ಕಾರದ ದುರಾಡಳಿತದ ಕುರಿತು ಸಿ.ಸಿದ್ದಯ್ಯ ನವರು ರಚಿಸಿರುವ "ಮೋದಿ 10 ವರ್ಷಗಳಲ್ಲಿ ಸಾಧಿಸಿದ್ದೇನು" ಹೊಸ ಪುಸ್ತಕ ಶೀಘ್ರದಲ್ಲಿ ನಿಮ್ಮ ಕೈಗೆ.

ರಾಮನೀಗ ಶಬರಿಗೂ ಗುಮ್ಮ

ತಾತ ಪೇಚಾಡುತ್ತಾನೆ
ತನ್ನೆದೆಯ ತೋಟದರಾಮ ಕಳುವಾಗಿದ್ದಾನೆಂದು.

ಅವ್ವ ನೇಯ್ದ ಕೌದಿಯ ಕಾವುಂಡು
ಅಜ್ಜಿ ಕೊಟ್ಟ ಸಿಹಿರುಚಿಯ ಹಣ್ಣುಂಡು
ಘಮಿಸುವ ತೋಟಕೆ ಚಂದ್ರನಾಗಿದ್ದ
ಬೆಳದಿಂಗಳ ಹರಡಿ ಆಡಿದ್ದ
ಜಿಂಕೆ, ಮೊಲ, ನವಿಲು, ಜೇನು ಹಕ್ಕಿಪಕ್ಕಿ, ರಹೀಮ, ಏಸು,
ಏಸೊಂದು ಜನರೊಡಗೂಡಿ

ತಾತ ಸದಾ ಅವನ ಆಳಾಪದಲೆ
ಕಣ್ಣಿನ ಚಸ್ಮಾ ತೀಡಿ ತೀಡಿ
ನಜರಿನಲೇ ಕಾಪಿಟ್ಟಿದ್ದ ರಾಮ ಕಳುವಾಗಿಬಿಟ್ಟ
ಕದ್ದವರು ಬೇರಲ್ಲ ಈ ತೋಟದ ಸವಿ ಉಂಡವರೆ
ಕದ್ದವರು ಸುಮ್ಮನೇ ಬಿಟ್ಟರೆ?
ಓಟಿನ ಬೇಟೆಯಾಟಕೆ ಕರೆದೊಯ್ದರು,
ಅವ್ವನ ಕೌದಿಯ ಕಳಚಿ
ಕೇಸರಿಯ ತುಂಡುಡುಸಿ,
ಬಾಣ ಬತ್ತಳಿಕೆ ಹೆಗಲೇರಿಸಿ ಓಡಿಸಿದರು ಬೇಟೆ ವಾಕ್ಯದ
ಪರಿಪಾಲಕನಂತೆ.

ಬೇಟೆಯಾಟ ಸುರುವಾದದ್ದೇ ತಡ
ನಡುಗುವ ಡಿಸೆಂಬರಗಿಟ್ಟ ಬೆಂಕಿ ಕಾವೇರಲಿಲ್ಲ,
ಅವ್ವ ನೇಯ್ದ ಕೌದಿಯ ತುಂಬಾ ಭೂತ ಕತ್ತರಿ ಅಡಿ
ತೋಟದಂಗಳ ಸೊಬಗೀಗ ಚಿಂದಿಗಾಡು.
ಬೆಚ್ಚನೆಯ ಉಸಿರಲಿ ಹಾವು ಹೆಡೆ ಕೂಡಿ
ಪ್ರೀತಿಯ ಅಪ್ಪುಗೆಯಲಿ ದ್ವೇಷ ಹೆಪ್ಪಾಗಿ
ಸುಡುತ್ತಿದೆ ಜ್ವಾಲೆ.

ತೋಟಕೆ ಜೀವಾಮೃತ ವಾಗಿದ್ದ ರಾಮ ಓಟು ಯಜ್ಞದ ಬಂಧಿ
ಪುರೋಹಿತರ ಮಾತು ಕಲಿವ ಗುಡಿಯೊಳಗಿನ ಗಿಣಿ.
ತೋಟದ ತುಂಬೆಲ್ಲ
ನಗುವ ಹೂಮಾರಿಯ ದಳಗಳು ಪಳಪಳ ಉದುರಿ
ಕೂಗುಮಾರಿಯ ಮುಳ್ಳ ಗಹಗಹಿಕೆ.
ಕದ್ದವ ಆಟದ ಆರಂಭಕೆ
ದಯೆ ಎಂಬ ದೇವನನು ಯಜ್ಞಕರ್ಪಿಸಿ
ಧರ್ಮದ್ವೇಷದ ಕುದುರೆ ಏರಿಸಿ
ಜನಮೇದ ಯಜ್ಞಕ್ಕೆ ಆಜ್ಞೆ ಕೊಟ್ಟ.
ರಾಮನೀಗ ಚೆಸ್ ಆಟದ ಗೊಂಬೆ.
ಬಯಲ ತಲೆಗೇರಿದ ರಮ್ಮು, ಶಬರಿಗೂ ಗುಮ್ಮ.
ಕುದುರೆ ತಡೆವವರ ಎದೆ ಸೀಳಿ
ತೋಟದಂಗಳದಲ್ಲಿ ರಕ್ತದ ರಂಗೋಲಿ.

ಕಟ್ಟುವ ಕಾರುಣ್ಯಕ್ಕೆ ಕೆಡವುವ ಕರ್ಮದ ನಂಜೇರಿ
ನಂಜುಂಡನೂ ನಡುಗಿದ.
ತಾತನ ನಜರು ಹುಡುಕುತ್ತಲೇ ಇದೆ,
ಧೂಳೆದ್ದ ಬೀದಿ ಬೀದಿಗಳ ಸೀಳಿ
ಕಡಿದೆಸೆದ ಅನಾಥ ಶವಗಳ ತಿಪ್ಪೆಯಲ್ಲಿ
ಎಲ್ಲಿ ನನ್ನ ರಾಮ
ಎದೆಯಂಗಳ ತೊರೆದ ರಾಮನೆಲ್ಲಿ
ಪ್ರೀತಿಯ ಹೊರತು ಮತ್ತೇನೂ ತಿಳಿಯದ ರಾಮನೆಲ್ಲಿ?
ಎಂದು ಹಳಹಳಿಸುವಾಗಲೇ
ಗುಂಡಿನ ಮೊರೆತ.
ತಾತನ ಕರುಳಲ್ಲಿ ಮತ್ತದೇ ಕೂಗು
ಹೇ...ರಾಮ್

–ಪಿ.ಆರ್. ವೆಂಕಟೇಶ್



ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY) 10 ಕೋಟಿ ಕುಟುಂಬಗಳಿಗೆ (ಸುಮಾರು 50 ಕೋಟಿ ಜನರಿಗೆ) 5 ಲಕ್ಷ ರೂಪಾಯಿಗಳ ಆರೋಗ್ಯ ವಿಮಾ ರಕ್ಷಣೆಯನ್ನು ಒದಗಿಸಲಾಗುತ್ತಿದೆ ಎಂದು ಮೋದಿ ಸರ್ಕಾರ ಹೇಳಿಕೊಂಡಿದೆ. ಈ ರೀತಿಯ ವಿಮಾ ರಕ್ಷಣೆಯನ್ನು ಒದಗಿಸಲು ನಿಜವಾಗಿ ಎಷ್ಟು ಹಣ ಬೇಕಾಗಬಹುದು? 10 ಕೋಟಿ ಕುಟುಂಬಗಳಿಗೆ ಆರೋಗ್ಯ ವಿಮೆಯನ್ನು ಒದಗಿಸುವ ಉದ್ದೇಶದಿಂದ ಈ ವರ್ಷಕ್ಕೆ ತೆಗೆದಿರಿಸಿದ್ದು ರೂ 7,500 ಕೋಟಿ ಮಾತ್ರ. ಅಂದರೆ, ಇದು ಪ್ರತಿ ಕುಟುಂಬಕ್ಕೆ ಒಂದು ವರ್ಷಕ್ಕೆ 750 ರೂ. ಅಥವಾ ಪ್ರತಿ ವ್ಯಕ್ತಿಗೆ 150 ರೂ.

ಮೋದಿ–9 ವರ್ಷಗಳು–ಭಾಗ–40

ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY)ಯ ಮೂಲಕ ಕಳೆದ 6 ವರ್ಷಗಳಲ್ಲಿ ಒಟ್ಟು 6.2 ಕೋಟಿ ಉಚಿತ ಆಸ್ಪತ್ರೆ ದಾಖಲಾತಿಗಗಳಿಗೆ 79,000 ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಹಣವನ್ನು ಪೂರೈಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆ. ಅದು ಇಷ್ಟಕ್ಕೆ ಸುಮ್ಮನಾಗದೆ, ಇದು ಆರೋಗ್ಯದ ಮೇಲಿನ ವೆಚ್ಚದಲ್ಲಿ ರೂ.1.25 ಲಕ್ಷ ಕೋಟಿಗೂ ಹೆಚ್ಚು ಹಣ ಬಡವರಿಗೆ ಉಳಿತಾಯವಾಗಿದೆ ಎನ್ನುತ್ತದೆ! ಯೋಜನೆ ಇಲ್ಲದಿದ್ದರೆ, ಅದೇ ಚಿಕಿತ್ಸಾ ವೆಚ್ಚ ಸುಮಾರು 2 ಪಟ್ಟು ಹೆಚ್ಚಾಗುತ್ತಿತ್ತು ಎಂದೂ ಹೇಳುತ್ತದೆ!! ಆದರೆ, ಈ ಅವಧಿಯಲ್ಲಿ ಕೇಂದ್ರದ ಬಜೆಟ್ ನಲ್ಲಿ ಈ ಯೋಜನೆಗೆ ಕೊಟ್ಟಿರುವ ಒಟ್ಟು ಹಣ 35,257 ಕೋಟಿ ರೂ. ಮಾತ್ರ.

ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ರಾಜ್ಯಗಳ ಪಾಲೂ ಇದೆ

ಈ ಹಿಂದೆ ಇದ್ದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ (RSBY)ಯನ್ನೂ ತನ್ನೊಳಗೆ ಸೇರಿಸಿಕೊಂಡಿದೆ

55 ಕೋಟಿ ಜನರಿಗೆ ಆಯುಷ್ಮಾನ್ ಭಾರತ್ ಎನ್ನುತ್ತದೆಯಾದರೂ ಅನುದಾನ ಮಾತ್ರ ನಿಕೃಷ್ಟ

ಸಿ. ಸಿದ್ದಯ್ಯ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 23ನೇ ಸೆಪ್ಟೆಂಬರ್, 2018 ರಂದು ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY) ಅನ್ನು ಪ್ರಾರಂಭಿಸಿದರು. “ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯೊಂದಿಗೆ, ಸರ್ಕಾರವು ಆರೋಗ್ಯ ರಕ್ಷಣೆಯನ್ನು ಹೊಸ ಮಹತ್ವಾಕಾಂಕ್ಷೆಯ ಮಟ್ಟಕ್ಕೆ ಕೊಂಡೊಯ್ಯುತ್ತಿದೆ, ಭಾರತವು ಸಾಮಾನ್ಯ ಜನರಿಗೆ ಪ್ರವೇಶಿಸಬಹುದಾದ ಮತ್ತು ಕೈಗೆಟುಕುವ ಆರೋಗ್ಯ ಸೇವೆಯನ್ನು ಒದಗಿಸುವತ್ತ ದೊಡ್ಡದೊಂದು ಜಿಗಿತ, ಇದರಿಂದ ಪ್ರತಿಯೊಬ್ಬ ನಾಗರಿಕರು ತಮ್ಮ ಆರೋಗ್ಯ ರಕ್ಷಣೆಯ ಪಾಲನ್ನು ಪಡೆಯುತ್ತಾರೆ, ಇದು 50 ಕೋಟಿಗೂ ಹೆಚ್ಚು ಫಲಾನುಭವಿಗಳನ್ನು ಗುರಿಯಾಗಿಸಿಕೊಂಡು "ವಿಶ್ವದ ಅತಿದೊಡ್ಡ ಸರ್ಕಾರಿ ಅನುದಾನಿತ ಆರೋಗ್ಯ ಕಾರ್ಯಕ್ರಮ" ಆಗಿದೆ ಎಂದು ಒಕ್ಕೂಟ ಸರ್ಕಾರ ಹೇಳಿಕೊಂಡಿದೆ.

ಆಯುಷ್ಮಾನ್ ಭಾರತ್ ಯೋಜನೆಯು ನರೇಂದ್ರ ಮೋದಿ ಅವರ ಆಡಳಿತದ ಮತ್ತೊಂದು ದೊಡ್ಡ ಸಾಧನೆ, ಮೋದಿಯವರ ಎಲ್ಲರಿಗೂ ಆರೋಗ್ಯ ಎಂಬ ಮಂತ್ರವು ಭಾರತದ ಸಮಗ್ರ ಯೋಗಕ್ಷೇಮದ ಬಗ್ಗೆ ಅವರ ತಿಳುವಳಿಕೆ ಮತ್ತು ಬದ್ಧತೆಯ ಬಗ್ಗೆ ಹೇಳುತ್ತದೆ ಎಂದು ಪ್ರಚಾರ ಮಾಡತೊಡಗಿದ್ದಾರೆ.

ಆದರೆ, ಆಯುಷ್ಮಾನ್ ಭಾರತ್ ಯೋಜನೆ ಘೋಷಣೆಯಾದ ವರ್ಷ ಆರೋಗ್ಯ ವಿಮೆಯನ್ನು ಒದಗಿಸುವ ಉದ್ದೇಶದಿಂದ ಮೋದಿ ಸರ್ಕಾರ ತನ್ನ ಬಜೆಟ್ ನಲ್ಲಿ ತೆಗೆದಿರಿಸಿದ್ದು 2,000 ಕೋಟಿ ರೂ ಮಾತ್ರ. ಆಯುಷ್ಮಾನ್ ಭಾರತ್ ಯೋಜನೆಯ ಘೋಷಣೆಯ ನಂತರ ಇಲ್ಲವಾಗಿಸಿದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ (RSBY) ಗೆ ಅದರ ಹಿಂದಿನ ವರ್ಷದ ಬಜೆಟ್ ಅನುದಾನ 1,000 ಕೋಟಿ ರೂ. ಮೀಸಲಿಡಲಾಗಿತ್ತು.



ಬಡ ಕುಟುಂಬಗಳ ಆದಾಯದ ಶೇ. 10 ಅನ್ನು ಆರೋಗ್ಯ ಸೇವೆಗಳಿಗಾಗಿ ಖರ್ಚು

71 ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ (NSSO) ಶೇ. 85.9 ಗ್ರಾಮೀಣ ಕುಟುಂಬಗಳು ಮತ್ತು ಶೇ. 82 ನಗರ ಕುಟುಂಬಗಳು ಆರೋಗ್ಯ ವಿಮೆ/ಭರವಸೆಗೆ ಯಾವುದೇ ಪ್ರವೇಶವನ್ನು ಹೊಂದಿಲ್ಲ ಎಂದು ಕಂಡುಕೊಂಡಿದೆ. ದೇಶದ ಜನಸಂಖ್ಯೆಯ ಶೇ. 17 ಕ್ಕಿಂತ ಹೆಚ್ಚು ಜನರು ಕುಟುಂಬದ ಆದಾಯದ ಕನಿಷ್ಠ ಶೇ. 10 ಅನ್ನು ಆರೋಗ್ಯ ಸೇವೆಗಳಿಗಾಗಿ ಖರ್ಚು ಮಾಡುತ್ತಾರೆ. ದುರಂತದ ಆರೋಗ್ಯ ಸಂಬಂಧಿತ ವೆಚ್ಚವು ಕುಟುಂಬಗಳನ್ನು ಸಾಲಕ್ಕೆ ತಳ್ಳುತ್ತದೆ. ಗ್ರಾಮೀಣ ಭಾರತದಲ್ಲಿ ಶೇ. 24 ಕ್ಕಿಂತ ಹೆಚ್ಚು ಕುಟುಂಬಗಳು ಮತ್ತು ನಗರ ಪ್ರದೇಶದಲ್ಲಿ ಶೇ. 18 ಜನಸಂಖ್ಯೆಯು ವಿವಿಧ ರೀತಿಯ ಸಾಲಗಳ ಮೂಲಕ ತಮ್ಮ ಆರೋಗ್ಯದ ವೆಚ್ಚವನ್ನು ಪೂರೈಸಿದೆ.

ಹೆಸರಿಗಷ್ಟೇ ದೊಡ್ಡ ಯೋಜನೆ

‘ರೂ. 1.5 ಲಕ್ಷ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳಿಗೆ 1200 ಕೋಟಿ ಮೀಸಲಿಡಲಾಗಿದೆ’ ಇದು ಪ್ರೆಸ್ ಇನ್ಫರ್ಮೇಶನ್ ಬ್ಯೂರೋ (PIB) 01 ಫೆಬ್ರುವರಿ 2018 ರ ಒಂದು ಪ್ರಕಟಣೆ. ಒಂದೂವರೆ ಲಕ್ಷ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳಿಗೆ 1200 ಕೋಟಿ ರೂಗಳನ್ನು ಹಂಚಿಕೆ ಮಾಡಿದರೆ ತಲಾ ಕೇಂದ್ರಕ್ಕೆ 80,000 ರೂ ಸಿಗುತ್ತದೆ. ಇಷ್ಟು ಕಡಿಮೆ ಹಣದಲ್ಲಿ ಆರೋಗ್ಯ ಕೇಂದ್ರಗಳ ಯಾವ ಸುಧಾರಣೆ ಮಾಡಲು ಸಾಧ್ಯ? ಆಸ್ಪತ್ರೆಗಳ ಯಾವ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಸಾಧ್ಯ? ಆ ಹಣದಲ್ಲಿ ಆ ಕಟ್ಟಡಗಳಿಗೆ ಸುಣ್ಣ ಬಣ್ಣ ಬಳಿಯಬಹುದಷ್ಟೆ.

ಕೇಂದ್ರ ಕೊಟ್ಟ ಹಣ 35,257 ಕೋಟಿ ರೂ. ಮಾತ್ರ. ಆದರೆ

ಕೇಂದ್ರ ಸರ್ಕಾರ AB-PMJAY ಯೋಜನೆಯ ಮೂಲಕ ಇದುವರೆಗೆ ಒಟ್ಟು 6.2 ಕೋಟಿ ಉಚಿತ ಆಸ್ಪತ್ರೆ ದಾಖಲಾತಿಗಗಳಿಗೆ 79,000 ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಹಣವನ್ನು ಪೂರೈಸಲಾಗಿದೆ ಎಂದು ಹೇಳುತ್ತದೆ. ಅದು ಇಷ್ಟಕ್ಕೆ ಸುಮ್ಮನಾಗದೆ, ಇದು ಆರೋಗ್ಯದ ಮೇಲಿನ ವೆಚ್ಚದಲ್ಲಿ ರೂ.1.25 ಲಕ್ಷ ಕೋಟಿಗೂ ಹೆಚ್ಚು ಹಣ ಬಡವರಿಗೆ ಉಳಿತಾಯವಾಗಿದೆ ಎನ್ನುತ್ತದೆ! ಯೋಜನೆ ಇಲ್ಲದಿದ್ದರೆ, ಅದೇ ಚಿಕಿತ್ಸಾ ವೆಚ್ಚ ಸುಮಾರು 2 ಪಟ್ಟು ಹೆಚ್ಚಾಗುತ್ತಿತ್ತಂತೆ!!

ಆದರೆ, ಈ ಅವಧಿಯಲ್ಲಿ ಕೇಂದ್ರದ ಬಜೆಟ್ ನಲ್ಲಿ ಈ ಯೋಜನೆಗೆ ಕೊಟ್ಟಿರುವ ಒಟ್ಟು ಹಣ 35,257 ಕೋಟಿ ರೂ. ಮಾತ್ರ. 2018–19 ರಲ್ಲಿ 2,400 ಕೋಟಿ. 2019–20 ರಲ್ಲಿ 6,400 ಕೋಟಿ. 2020–21 ರಲ್ಲಿ 6,400 ಕೋಟಿ 2021–22 ರಲ್ಲಿ 6,400 ಕೋಟಿ. 2022–23 ರಲ್ಲಿ 6,457 ಕೋಟಿ. 2023–24 ರಲ್ಲಿ 7,200 ಕೋಟಿ ರೂಪಾಯಿಗಳು. ಇತ್ತೀಚೆಗೆ ಮಂಡಿಸಲಾದ 2024–25 ರ ಕೇಂದ್ರದ ಮಧ್ಯಂತರ ಬಜೆಟ್ ನಲ್ಲಿ AB-PMJAY ಗೆ 7,500 ಕೋಟಿ ರೂಗಳನ್ನು ಮೀಸಲಿಟ್ಟಿದೆ.

ಫಲಾನುಭವಿಗಳ ಸಂಖ್ಯೆ ಹೆಚ್ಚಳ ಆದರೆ, ಅನುದಾನ ಹೆಚ್ಚಳವಿಲ್ಲ!

AB-PMJAY ಯೋಜನೆಯಲ್ಲಿ ನೊಂದಾಯಿಸುವ ಕುಟುಂಬಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. 2024ರ ಕೇಂದ್ರ ಬಜೆಟ್ ನಲ್ಲಿ ಈ ಯೋಜನೆಯನ್ನು ಎಲ್ಲಾ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ವಿಸ್ತರಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಆಯುಷ್ಮಾನ್ ಭಾರತ್ ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಬಜೆಟ್ ಹಂಚಿಕೆ ಹೆಚ್ಚಾಗಲಿಲ್ಲ ಮಾತ್ರವಲ್ಲ, ಹಣದುಬ್ಬರ ಹೆಚ್ಚಳಕ್ಕೆ ಅನುಗುಣವಾಗಿಯೂ ಹಣ ಹಂಚಿಕೆ ಹೆಚ್ಚಾಗಲಿಲ್ಲ.

PMJAY 10 ಕೋಟಿ ಕುಟುಂಬಗಳಿಗೆ (ಸುಮಾರು 50 ಕೋಟಿ ವ್ಯಕ್ತಿಗಳಿಗೆ) 5 ಲಕ್ಷ

ಪುಟ 14 ಕ್ಕೆ

ಬಹಳಷ್ಟು ವಂಚನೆ ನಡೆದಿದೆ ಎಂದ ಸಿಏಜಿ ವರದಿ

ಆಯುಷ್ಮಾನ್ ಭಾರತ್ ಕುರಿತಂತೆ ಸಿಏಜಿ ವರದಿಯು ತನ್ನ 2023 ರ ವರದಿ ಬಹಳಷ್ಟು ವಂಚನೆಗಳನ್ನು ಗಮನಿಸಿದೆ. ಸಿಏಜಿ ವರದಿಯು ತನ್ನ 2023 ರ ವರದಿ ಸಂಖ್ಯೆ 11 vi ರಲ್ಲಿ ಹೀಗೆ ಹೇಳಿದೆ;

ಸಮರ್ಪಕ ದೃಢೀಕರಣ ನಿಯಂತ್ರಣಗಳ ಅನುಪಸ್ಥಿತಿಯಲ್ಲಿ, ಫಲಾನುಭವಿ ಡೇಟಾಬೇಸ್ ಅಮಾನ್ಯವಾದ ಹೆಸರುಗಳು, ಅವಾಸ್ತವಿಕ ಜನ್ಮ ದಿನಾಂಕ, ನಕಲಿ PMJAY ಐಡಿಗಳು, ಕುಟುಂಬ ಸದಸ್ಯರ ಅವಾಸ್ತವಿಕ ಗಾತ್ರ ಇತ್ಯಾದಿಗಳಲ್ಲಿ ದೋಷಗಳನ್ನು ಗಮನಿಸಲಾಗಿದೆ. 36 ಪ್ರಕರಣಗಳಲ್ಲಿ, 18 ಆಧಾರ್ ಸಂಖ್ಯೆಗಳ ಮೂಲಕ ಎರಡೆರೆಡು ನೋಂದಣಿಗಳನ್ನು ಮಾಡಲಾಗಿದೆ. ತಮಿಳುನಾಡಿನಲ್ಲಿ ಏಳು ಆಧಾರ್ ಸಂಖ್ಯೆಗಳ ಮೂಲಕ 4,761 ನೋಂದಣಿಗಳನ್ನು ಮಾಡಲಾಗಿದೆ. ಫಲಾನುಭವಿಗಳ ಗುರುತಿನ ವ್ಯವಸ್ಥೆಯಲ್ಲಿ (BIS) 11 ರಿಂದ 7,49,820 ಫಲಾನುಭವಿಗಳ ವ್ಯಾಪ್ತಿಯಲ್ಲಿರುವ ಒಂದೇ ಸಂಖ್ಯೆಯ ಅಥವಾ ಅಮಾನ್ಯವಾದ ಮೊಬೈಲ್ ಸಂಖ್ಯೆಯಲ್ಲಿ ಬಹು ಫಲಾನುಭವಿಗಳ ನೋಂದಣಿಯನ್ನು ಗುರುತಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ನಲ್ಲಿ 2018 ರಿಂದ 2021 ರ ಅವಧಿಯಲ್ಲಿ ಕ್ರಮವಾಗಿ 16,865 ಮತ್ತು 335 ಅನರ್ಹ ಫಲಾನುಭವಿಗಳನ್ನು SECC ಡೇಟಾವನ್ನು ಸ್ವಚ್ಛಗೊಳಿಸಿದ ನಂತರ SHA ಗುರುತಿಸಿದೆ.

ಹಲವಾರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕನಿಷ್ಠ ಮಾನದಂಡಗಳನ್ನು ಪೂರೈಸದ, ಮೂಲಸೌಕರ್ಯ, ಉಪಕರಣಗಳು, ವೈದ್ಯರು ಇತ್ಯಾದಿಗಳ ಕೊರತೆಯಿರುವ ಆಸ್ಪತ್ರೆಗಳನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ. ಲಭ್ಯವಿರುವ ಉಪಕರಣಗಳು ಕಾರ್ಯನಿರ್ವಹಿಸದೇ ಇರುವುದು ಕಂಡುಬಂದಿದೆ. ಕೆಲವು ಎಂಪನೆಲ್ಡ್ ಹೆಲ್ತ್ ಕೇರ್ ಪ್ರೊವೈಡರ್ಗಳು (EHCP ಗಳು) ಬೆಂಬಲ ವ್ಯವಸ್ಥೆ ಮತ್ತು ಮೂಲಸೌಕರ್ಯದ ಕನಿಷ್ಠ ಮಾನದಂಡಗಳನ್ನು ಪೂರೈಸಿಲ್ಲ ಅಥವಾ ಮಾರ್ಗಸೂಚಿಗಳ ಅಡಿಯಲ್ಲಿ ಸೂಚಿಸಲಾದ ಗುಣಮಟ್ಟದ ಮಾನದಂಡಗಳಿಗೆ ಅನುಗುಣವಾಗಿಲ್ಲ.

ಹಲವಾರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೂಲಸೌಕರ್ಯ, ಅಗ್ನಿ ಸುರಕ್ಷತಾ ಕ್ರಮಗಳು, ಜೈವಿಕ–ವೈದ್ಯಕೀಯ ತ್ಯಾಜ್ಯ ನಿರ್ವಹಣೆ, ಮಾಲಿನ್ಯ ನಿಯಂತ್ರಣ ಮತ್ತು ಆಸ್ಪತ್ರೆ ನೋಂದಣಿ ಪ್ರಮಾಣಪತ್ರಕ್ಕೆ ಸಂಬಂಧಿಸಿದ ಆಸ್ಪತ್ರೆಗಳ ಎಂಪನೆಲ್ಮೆಂಟ್ಗೆ ಕಡ್ಡಾಯ ಅನುಸರಣೆ ಮಾನದಂಡಗಳನ್ನು ಸಂಪೂರ್ಣವಾಗಿ ಅನುಸರಿಸಲಾಗಿಲ್ಲ. ಕೆಲವು EHCP ಗಳಲ್ಲಿ, PMJAY ಅಡಿಯಲ್ಲಿ ಎಂಪನೆಲ್ಮೆಂಟ್ ಮಾಡುವ ಮೊದಲು ಅಗ್ನಿ ಸುರಕ್ಷತಾ ಪ್ರಮಾಣಪತ್ರಗಳು ಅವಧಿ ಮುಗಿದಿವೆ.

ಕೆಲವು EHCP ಗಳು ನಿಗದಿತ ಗುಣಮಟ್ಟದ ಮಾನದಂಡಗಳು ಮತ್ತು ಮಾನದಂಡಗಳಿಗೆ ಅನುಗುಣವಾಗಿಲ್ಲ, ಇದು ಆರೈಕೆಯಲ್ಲಿರುವ ಫಲಾನುಭವಿಗಳ ಸುರಕ್ಷತೆ ಮತ್ತು ಯೋಗಕ್ಷೇಮಕ್ಕೆ ನಿರ್ಣಾಯಕವಾಗಿತ್ತು ಮತ್ತು ಎಂಪನೆಲ್ಮೆಂಟ್ಗೆ ಕಡ್ಡಾಯವಾದ ಕನಿಷ್ಠ ಷರತ್ತುಗಳಾಗಿವೆ

ರಾಜ್ಯ ನಿರ್ದಿಷ್ಟ ಯೋಜನೆಗಳೊಂದಿಗೆ PMJAY ಅತಿಕ್ರಮಿಸುವ ಸಾಧ್ಯತೆ.

ನವೆಂಬರ್ 2022 ರ ಹೊತ್ತಿಗೆ, ರೋ. 42,433.57 ಕೋಟಿ ಮೊತ್ತದ 3.57 ಕೋಟಿ ಕ್ಲೈಮ್‌ಗಳನ್ನು ಇತ್ಯರ್ಥಗೊಳಿಸಲಾಗಿದೆ. ಇವುಗಳಲ್ಲಿ, ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ರಾಜಸ್ಥಾನ, ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ಆರು ಬ್ರೌನ್ಫೀಲ್ಡ್ ರಾಜ್ಯಗಳಿಗೆ ಸಂಬಂಧಿಸಿದ ರೂ. 22,619.86 ಕೋಟಿ (ಶೇ. 53.30) ಮೊತ್ತದ ಕ್ಲೈಮ್‌ಗ್ಗಳು. ಈ ರಾಜ್ಯಗಳು ಕ್ಲೈಮ್‌ಗಳನ್ನು ಪ್ರಕ್ರಿಯೆಗೊಳಿಸಲು ತಮ್ಮದೇ ಆದ ಐಟಿ ಪ್ಲಾಟ್ಫಾರ್ಮ್ ಅನ್ನು ಬಳಸುತ್ತವೆ ಮತ್ತು ನಂತರ ಅಪ್ಲಿಕೇಶನ್ ಪ್ರೋಗ್ರಾಮಿಂಗ್ ಇಂಟರ್ಫೇಸ್ (API) ಮೂಲಕ PMJAY ನ ಟ್ರಾನ್ಸಾಕ್ಷನ್ ಮ್ಯಾನೇಜ್ಮೆಂಟ್ ಸಿಸ್ಟಮ್ಗೆ ಫೀಡ್ ಮಾಡುತ್ತವೆ. ಅಂತಹ ಸಂದರ್ಭಗಳಲ್ಲಿ ಕಒಎಂಜ ಫಲಾನುಭವಿಗಳನ್ನು ಪ್ರತ್ಯೇಕಿಸದೆ, ರಾಜ್ಯ ನಿರ್ದಿಷ್ಟ ಯೋಜನೆಗಳೊಂದಿಗೆ PMJAY ಅತಿಕ್ರಮಿಸುವ ಸಾಧ್ಯತೆಯಿದೆ.

ವಿಷಯಾಧಾರಿತವಾಗಿ SKM ನಲ್ಲಿ ಒಗ್ಗಟ್ಟಿನ ಪ್ರದರ್ಶನ, ದೇಶಾದ್ಯಂತ ಪ್ರತಿಭಟನೆಗೆ ಕರೆ

ಹರಿಯಾಣದ ಶಂಬು ಗಡಿಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ಪೊಲೀಸರು ನಡೆಸಿದ ತೀವ್ರತರವಾದ ದಾಳಿಯಿಂದ 24 ವರ್ಷದ ಯುವ ರೈತನೋರ್ವ ಹುತಾತ್ಮನಾಗಿದ್ದಾನೆ. ಈ ಸಾವು ದೇಶಾದ್ಯಂತ ರೈತ ಸಮುದಾಯದಲ್ಲಿ ಮತ್ತಷ್ಟು ಆಕ್ರೋಶವನ್ನು ಉಂಟುಮಾಡಿದೆ.



ಹುತಾತ್ಮನಾದ ಯುವ ರೈತ

ದೆಹಲಿ ಗಡಿಗಳಲ್ಲಿ ಒಂದು ವರ್ಷಗಳ ಕಾಲ ರೈತ ಚಳುವಳಿಯನ್ನು ಮುನ್ನಡೆಸಿದ್ದ 500 ಕ್ಕೂ ಹೆಚ್ಚು ಸಂಘಟನೆಗಳ ವೇದಿಕೆ ಸಂಯುಕ್ತ ಕಿಸಾನ್ ಮೋರ್ಚಾ ಫೆಬ್ರವರಿ 22 ರಂದು ಛತ್ತೀಸ್ಗಢದಲ್ಲಿ ಸಭೆ ಸೇರಿ ಹಲವು ಮಹತ್ತರವಾದ ತೀರ್ಮಾನಗಳನ್ನು ಕೈಗೊಂಡಿದೆ.

ಆಕ್ರೋಶ್ ದಿವಸ್ 23 ಫೆಬ್ರವರಿ

ಯುವ ರೈತನ ಸಾವಿಗೆ ಕಾರಣವಾದ ಪೊಲೀಸ್ ದಾಳಿಯ ವಿರುದ್ಧ ಫೆಬ್ರವರಿ 23 ರಂದು ದೇಶಾದ್ಯಂತ ಆಕ್ರೋಶ್ ದಿವಸ್ ಆಚರಿಸಲು ತೀರ್ಮಾನಿಸಲಾಗಿದೆ. ಇದೇ ಸಂದರ್ಭದಲ್ಲಿ ಹುತಾತ್ಮ ರೈತ ಕುಟುಂಬಕ್ಕೆ ಒಂದು ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ನೀಡಬೇಕೆಂದು ಆಗ್ರಹಿಸಿದೆ.

ಟ್ರ್ಯಾಕ್ಟರ್ ಪೆರೇಡ್ ಫೆಬ್ರವರಿ 26

ಭಾರತ ಎಲ್ಲಾ ರೀತಿಯ ಗ್ಯಾಟ್ ಒಪ್ಪಂದಗಳಿಂದ ಹೊರಬರಬೇಕು ಮತ್ತು ಕೃಷಿಯನ್ನು ಗ್ಯಾಟ್ ಒಪ್ಪಂದದಿಂದ ಹೊರಗಿಡಬೇಕು ಎಂಬ ಬೇಡಿಕೆಯ ಆಧಾರದಲ್ಲಿ ಫೆಬ್ರವರಿ 26 ರಂದು ದೇಶಾದ್ಯಂತ ಸಾವಿರಾರು ಸಂಖ್ಯೆಯ ಟ್ರ್ಯಾಕ್ಟರ್ ಗಳ ಮೆರವಣಿಗೆಯನ್ನು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ರಸ್ತೆಯ ಒಂದು ಬದಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಆಲ್ ಇಂಡಿಯಾ ಕಿಸಾನ್ ಮಜ್ದೂರ್ ಮಹಾ ಪಂಚಾಯತ್ 14 ಮಾರ್ಚ್ ನವದೆಹಲಿ

ದೇಶದ ರೈತರು, ಕಾರ್ಮಿಕರು, ಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರನ್ನು ಒಳಗೊಂಡಂತೆ ಲಕ್ಷಾಂತರ ಸಂಖ್ಯೆಯಲ್ಲಿ ದೆಹಲಿಯ ರಾಮಲೀಲ ಮೈಧಾನದಲ್ಲಿ ಅಖಿಲ ಭಾರತ ರೈತ ಕಾರ್ಮಿಕರ ಮಹಾ ಪಂಚಾಯತ್ ನಡೆಸಲು ತೀರ್ಮಾನಿಸಲಾಗಿದೆ. ಇದುವರೆಗು ಎತ್ತಿರುವ ಸ್ವಾಮಿನಾಥನ್ ವರದಿ ಜಾರಿ, ವಿದ್ಯುತ್ ಖಾಸಗೀಕರಣ ವಿರೋಧಿಸಿ, ಒಂದು ವರ್ಷದ ಹೋರಾಟದಲ್ಲಿ ಹುತಾತ್ಮರಾದ 736 ರೈತ ಕುಟುಂಬಕ್ಕೆ ಮತ್ತು ಈಗ ಹುರಾತ್ಮರಾದ 4 ಕುಟುಂಬಕ್ಕೆ ಸೇರಿ ಒಟ್ಟು 740 ಕುಟುಂಬಕ್ಕೆ ಪರಿಕಾರ ನೀಡಬೇಕು. ಕಾರ್ಮಿಕ ಕಾಯ್ದೆಗಳ ಬದಲಾವಣೆ ವಿರೋಧಿಸಿ... ಈ ಮಹತ್ತರ ಹೋರಾಟವನ್ನು ನಡೆಸಲಾಗಿತ್ತದೆ. ದೇಶದ ಎಲ್ಲಾ ರೈತ ಸಂಘಟನೆಗಳು ಒಟ್ಟಾಗಿವೆ ಎಂಬ ಸಂದೇಶವನ್ನು ಪತ್ರಿಕಾಗೋಷ್ಠಿ ನಡೆಸಿ ಘೋಷಿಸುವುದರ ಜೊತೆಗೆ ರೈತ ಸಮುದಾಯದ ಐಕ್ಯತೆಯನ್ನು ಒಡೆಯಲು ಯಾವ ಶಕ್ತಿಗಳಿಗೂ ಅವಕಾಶ ಮಾಡಿಕೊಡುವುದಿಲ್ಲ ಎಂದರು.

ಇದೇ ಸಂದರ್ಭದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದಿಂದ ಈ ಹೋರಾಟದ ಬೆಳವಣಿಗೆಗಳನ್ನು ಚರ್ಚಿಸಲು 6 ಜನರ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ಘೋಷಿಸಿದರು.

ಸಮಿತಿ ಸದಸ್ಯರು

1. ಹನ್ನನ್ ಮೊಲ್ಲಾ, 2. ರಾಜೇವಾಲ್, 3. ಯದುವೀರ್ ಸಿಂಗ್, 4. ರವೀಂದ್ರ ಪಟಿಯಾಲ, 5. ಉಗ್ರಾಹಾನ್, 6. ದರ್ಶನ್ ಪಾಲ್

ದೆಹಲಿಯ ಗಡಿಗಳಲ್ಲಿ ಗುಡುಗುತ್ತಿರುವ ಅನ್ನದಾತ.... ಪುಟ 6 ರಿಂದ

30 ಸಾವಿರ ಟಿಯರ್‌ಗ್ಯಾಸ್ ಶೆಲ್‌ಗಳ ಖರೀದಿಗೆ ದೆಹಲಿ ಪೊಲೀಸರು ಆದೇಶಿಸಿದ್ದಾರೆ. ಹೀಗೆ ಸಿಡಿಯುವ ಟಿಯರ್ ಗ್ಯಾಸ್‌ಗಳಿಂದ ಬರುವ ಹೊಗೆಯನ್ನು ನಿಯಂತ್ರಿಸಲು ರೈತರು ತಮ್ಮ ಟ್ರ್ಯಾಕ್ಟರ್ ಗಳಿಗೆ ಗಾಳಿ ಹಾಯಿಸುವ ದೊಡ್ಡ ದೊಡ್ಡ ಫ್ಯಾನ್‌ಗಳನ್ನು ಅಳವಡಿಸಿಕೊಂಡು ಆ ಕಡೆಯಿಂದ ಶೆಲ್‌ಗಳು ಸಿಡಿದು ಬಂದರೆ ಈ ಕಡೆಯಿಂದ ದೊಡ್ಡದಾದ ಫ್ಯಾನ್ ಚಲಾಯಿಸಿ ಆ ವಿಷಕಾರಕ ಹೊಗೆ ಸಿಡಿಸಿದವರ ಕಡೆಗೆ ವಾಪಸ್ ಹೋಗುವಂತೆ ಮಾಡುತ್ತಿದ್ದಾರೆ. ಮಾತ್ರವಲ್ಲ ರಾಕೇಟ್ ಬಾಂಬರ್ ರೀತಿಯಲ್ಲಿ ಸಿಡಿದು ಬರುವ ಟಿಯರ್ ಗ್ಯಾಸ್ ಶೆಲ್‌ಗಳನ್ನು ಶಮನಗೊಳಿಸಲು ಅವು ನೆಲಕ್ಕೆ ಬಿದ್ದ ಕೂಡಲೆ ನೀರಿನಿಂದ ನೆನೆಸಿರುವ ಗೋಣಿಚೀಲಗಳನ್ನು ಒಂದರ ಮೇಲೊಂದರಂತೆ ಅದರ ಮೇಲೆ ಹಾಕಿದರೆ ಕೆಲವೇ ಕ್ಷಣಗಳಲ್ಲಿ ಅದು ಹೊಗೆ ಸೂಸುವುದನ್ನು ನಿಲ್ಲಿಸುತ್ತದೆ.

ರಬ್ಬರ್ ಬುಲೆಟ್ ಬಳಕೆ

ಗುರಿಯಿಟ್ಟು ರಬ್ಬರ್ ಬುಲೆಟ್ ಬಳಸಿ ಗನ್‌ಗಳ ಮೂಲಕ ರೈತರ ಮೇಲೆ ಗುಂಡು ಹಾರಿಸಲಾಗುತ್ತಿದೆ. ಇದರಿಂದ ಹಲವರಿಗೆ ತೀವ್ರ ಪೆಟ್ಟುಗಳಾಗಿವೆ. ಗ್ರನೈಡ್ ರೂಪದ ಲೋಹದ ಚೂರುಗಳನ್ನು ಸಿಡಿಸುವ ಬಾಂಬುಗಳನ್ನು ಕೆಲವೆಡೆ ರೈತರ ಮೇಲೆ ಬಳಸಲಾಗುತ್ತಿದೆ ಎಂಬ ವರದಿಗಳು ಕೇಳಿಬರುತ್ತಿವೆ. ಹೆದ್ದಾರಿಗಳಲ್ಲಿ ನಿರ್ಮಾಣವಾಗಿರುವ ಬೃಹತ್ ಗಾತ್ರದ ಕಾಂಕ್ರೀಟ್ ಗೋಡೆಗಳನ್ನು ಕೆಡವಿ ಮುಂದೆ ಹೋಗಲು ರೈತರು ನಿರ್ಧರಿಸಿದ್ದಾರೆ. ಈಗಾಗಲೇ ರಾಷ್ಟ್ರೀಯ ಹೆದ್ದಾರಿಗೆ ಹೊಡೆಯಲಾಗಿದ್ದ ಚೂಪಾದ ಕಬ್ಬಿಣದ ಸಲಾಕೆಗಳನ್ನು ರೈತರು ತಮ್ಮ ಕೈಯಾರೆ ಕಿತ್ತುಹಾಕಿದ್ದಾರೆ. ತಮ್ಮ ಟ್ರ್ಯಾಕ್ಟರ್‌ಗಳ ಸಹಾಯದಿಂದ ಸಿಮೆಂಟ್ ಬ್ಲಾಕ್‌ಗಳನ್ನು ಎಳೆದು ರಸ್ತೆಯಿಂದ ಪಕ್ಕಕ್ಕೆ ಸರಿಸುತ್ತಿದ್ದಾರೆ. ರೈತರ ಮೇಲೆ ಇಲ್ಲಿ ಬಳಸಲಾಗುತ್ತಿರುವ ಎಲ್ಲಾ ರೀತಿಯ ಆಯುದಗಳು ಪೊಲೀಸರು ಬಳಸುವಂತಹದ್ದಲ್ಲ ಬದಲಿಗೆ ಮಿಲಿಟರಿಯವರು ಬಳಸುವಂತಹದ್ದು ಎಂದು ರೈತ ಮುಖಂಡರು ದೂರಿದ್ದಾರೆ. ಇದೇ ಸಂದರ್ಭದಲ್ಲಿ ಮೋದಿ ಸರ್ಕಾರದ ಈ ಕ್ರಮವನ್ನು ಖಂಡಿಸಿ ದೇಶಾದ್ಯಂತ ರೈತರು, ಕಾರ್ಮಿಕರು ವ್ಯಾಪಕ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ.

ಹೆದ್ದಾರಿಗಳಲ್ಲಿ ವಿಪರೀತ ವಾಹನ ದಟ್ಟಣೆ

ಪಂಜಾಬ್, ಹರಿಯಾಣ, ಉತ್ತರ ಪ್ರದೇಶಗಳಿಂದ ದೆಹಲಿಗೆ ಪ್ರವೇಶ ಪಡೆಯುವ ಹೆದ್ದಾರಿಗಳಲ್ಲಿ ವಿಪರೀತ ವಾಹನ ದಟ್ಟಣೆ ಉಂಟಾಗಿದೆ, ಇದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿದೆ ಎಂದು ಕೆಲವರು ದೂರುತ್ತಿದ್ದಾರೆ. ಆದರೆ ಇಂತಹ ಸ್ಥಿತಿ ನಿರ್ಮಾಣವಾಗಲು ಕೇಂದ್ರ ಸರ್ಕಾರದ ಈ ರೀತಿಯ ಕಠಿಣ ನಿಲುವುಗಳೇ ಕಾರಣ ಎಂದು ರೈತ ಮುಖಂಡರು ಆರೋಪಿಸುತ್ತಿದ್ದಾರೆ. ಮತ್ತೊಂದೆಡೆ ಟ್ರಾಕ್ಟರ್‌ಗಳು ಹೊಲ ಗದ್ದೆಗಳಲ್ಲಿ ಕೆಲಸ ಮಾಡಲು ಇರುವುದು ಅವುಗಳನ್ನು ಹೆದ್ದಾರಿಗೆ ತರಬಾರದೆಂದು ಕೆಲವರು ವಾದ ಮಾಡುತ್ತಿದ್ದರೆ, ರೈತರು ನಮ್ಮ ಟ್ರ್ಯಾಕ್ಟರ್ ಗಳಿಗೂ ನಾವು ತೆರಿಗೆ ಕಟ್ಟುತ್ತಿದ್ದೇವೆ. ಆದ್ದರಿಂದ ಇದೇ ನಮ್ಮ ವಾಹನ, ನಾವು ಇವುಗಳಲ್ಲಿಯೇ ದೆಹಲಿಗೆ ಬರುತ್ತೇವೆ ಎಂದಿದ್ದಾರೆ. ಇದೇ ಸಂದರ್ಭದಲ್ಲಿ ಮೂರು ರಾಜ್ಯಗಳ ಗಡಿ ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸ್ಥಗಿತಗೊಳಿಸಲಾಗಿದೆ. ಈ ಹೋರಾಟದ ಸುದ್ದಿಗಳನ್ನು ಬಿತ್ತರಿಸುತ್ತಿದ್ದ ಕೆಲವು ಯೂಟ್ಯೂಬ್ ಚಾನಲ್ ಮತ್ತು ವೆಬ್‌ಸೈಟ್‌ಗಳನ್ನು ಸ್ಥಗಿತಗೊಳಿಸಲಾಗಿದೆ.

ಫೆಬ್ರವರಿ 21 ರಂದು ಹರಿಯಾಣದ ಶಂಬು ಗಡಿಯಿಂದ ದೆಹಲಿಯತ್ತ ತಮ್ಮ ನಡಿಗೆಯನ್ನು ಮುಂದುವರೆಸಲು ರೈತರು ನಿರ್ಧರಿಸಿದ್ದರು, ಈ ಸಂದರ್ಭದಲ್ಲಿ ರೈತರ ಮೇಲೆ ಪೊಲೀಸರು ತೀರ್ವ ದಾಳಿಗಳನ್ನು ನಡೆಸಿ, ಹಲವು ಸುತ್ತು ಅಶೃವಾಯುಗಳನ್ನು ಸಿಡಿಸಿ, ರಬ್ಬರ್ ಬುಲೆಟ್‌ಗಳನ್ನು ಬಳಸಿ ದಾಳಿ ನಡೆಸಿದ್ದರಿಂದ ಪಂಜಾಬಿನ 21 ವರ್ಷದ ಯುವ ರೈತ ಸಾವನ್ನಪ್ಪಿದ್ದಾನೆ.

ದೆಹಲಿಯಿಂದ 200 ಕಿಲೋಮೀಟರ್ ದೂರದಲ್ಲೇ ಇಂತಹ ಪರಿಸ್ಥಿತಿ ನಿರ್ಮಾಣವಾದರೆ, ಇನ್ನು ಈ ರೈತರು ದೆಹಲಿಗೆ ಪ್ರವೇಶ ಪಡೆಯುವವರೆಗೆ ಇನ್ನೆಂತಹ ಕಠಿಣ ಸವಾಲುಗಳನ್ನು, ದೌರ್ಜನ್ಯಗಳನ್ನು ಎದುರಿಸಬಹುದು. ಕಾದು ನೋಡಬೇಕಿದೆ. ಒಂದು ವರದಿಯ ಪ್ರಕಾರ ಸಿಂಘು ಗಡಿ ಭಾಗದಲ್ಲಿ ಜನರನ್ನು ಚದುರಿಸಲು ಇದುವರೆಗೂ ಬಳಸಿರದ ಅತ್ಯಾಧುನಿಕ ಯಂತ್ರೋಪಕರಣಗಳು ಮತ್ತು ಆಯುಧಗಳನ್ನು ದೆಹಲಿ ಪೊಲೀಸರು ಸಿದ್ದಪಡಿಸಿಕೊಂಡಿದ್ದಾರಂತೆ. ದೇಶಕ್ಕೆ ಅನ್ನ ನೀಡುವ ರೈತರ ಮೇಲೆ ಯಾಕೆ ನಿಮ್ಮ ದೌರ್ಜನ್ಯ ಎಂಬ ಪ್ರಶ್ನೆ ಎಲ್ಲೆಡೆ ಕೇಳಲಾರಂಬಿಸಿದೆ. ಇದಕ್ಕೆ ಉತ್ತರಿಸಬೇಕಾದವರು ಮೌನವಾಗಿದ್ದುಕೊಂಡೇ ಎಲ್ಲಾ ಪಿತೂರಿಗಳ ನೇತೃತ್ವ ವಹಿಸಿದ್ದಾರೆ.

ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯ........ ಪುಟ 2 ರಿಂದ

ಸಬಲೀಕರಣಕ್ಕೆ ವಿಶೇಷ ಪ್ರಾಧಾನ್ಯತೆಯನ್ನು ನೀಡುವಂತಾಗಬೇಕು.

5. ಯುವ ಕೃಷಿಕರಿಗೆ ಉದ್ಯೋಗ ಭದ್ರತೆಯನ್ನು ಒದಗಿಸಬೇಕು. ವಿಶೇಷ ತರಬೇತಿ ಹಾಗೂ ಸೌಕರ್ಯಗಳನ್ನು ಒದಗಿಸುವಂತಾಗಬೇಕು.
6. ರೈತರ ಸಂಪೂರ್ಣ ಹಿತ ಕಾಪಾಡುವಂತಹ ವೈಯಕ್ತಿಕ ರಕ್ಷಣಾತ್ಮಕ ಬೆಳೆ ವಿಮೆಯನ್ನು ಜಾರಿಗೆ ತರುವಂತಾಗಬೇಕು.
7. ಗ್ರಾಮ ಪಂಚಾಯತಿಗಳಲ್ಲಿ ಸಂಪೂರ್ಣ ಗ್ರಾಮ ಸ್ವರಾಜ್ಯದ ಅಧಿಕಾರಗಳನ್ನು ನೀಡುವಂತಾಗಬೇಕು.
8. ದೇಸಿ ಬೀಜಗಳ ರಕ್ಷಣೆಗೆ ವಿಶೇಷ ಯೋಜನೆಗಳೊಂದಿಗೆ ಮಿಶ್ರ ಬೆಳೆ ಪದ್ಧತಿಯಲ್ಲಿ ಸಮಗ್ರ ಕೃಷಿಯನ್ನು ಜಾರಿಗೆ ತರುವಂತಾಗಬೇಕು.
9. ವಿಶ್ವದಲ್ಲಿ ಎಲ್ಲೂ ಇಲ್ಲದಂತಹ ಜೀವ ವೈವಿಧ್ಯತೆ ಭಾರತದಲ್ಲಿದ್ದು ಅದನ್ನು ರಕ್ಷಿಸಲು ವಿಶೇಷ ಕಾಳಜಿಯನ್ನು ಅನುಸರಿಸುಂತಾಗಬೇಕು.
10. ಕೃಷಿಗೆ ಅತ್ಯಮೂಲ್ಯವಾದ ಭೂಮಿ ಮತ್ತು ನೀರನ್ನು ರಕ್ಷಣೆ ಮಾಡಲು ವಿಶೇಷ ಯೋಜನೆಯನ್ನು ರೂಪಿಸುವಂತಾಗಬೇಕು.

ಇಂತಹ ಶಿಫಾರಸ್ಸುಗಳೊಂದಿಗೆ ಸುದೀರ್ಘವಾದ ವಿವರಣೆಗಳನ್ನು ನೀಡಿದ್ದು, ಈ ಶಿಫಾರಸ್ಸುಗಳು ಜಾರಿಗೊಳಿಸದೆ ಹೋದಲ್ಲಿ ದೇಶ ಸಂಕಷ್ಟಕ್ಕೆ ಗುರಿಯಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ. ಕೃಷಿಯಲ್ಲಿ ಉತ್ಪಾದನೆ (ಜಿಡಿಪಿ) ಹೆಚ್ಚಾದಲ್ಲಿ ಮಾತ್ರ ಉದ್ಯಮ ವಲಯದಲ್ಲಿ ಅಂತರಿಕ ಉತ್ಪಾದನೆ ಅದರ ದುಪ್ಪಟ್ಟಾಗುತ್ತದೆ. ಇಂದು ಕೃಷಿಯಲ್ಲಿ ಆಂತರಿಕ ಉತ್ಪಾದನೆ ಶೇ.1 ಕ್ಕೆ ಇಳಿದಿದ್ದು ಇದು ದೇಶದ ಅಭಿವೃದ್ಧಿಗೆ ಅಪಾಯಕಾರಿ ಯಾದುದನ್ನು ಅಂಕಿ ಅಂಶಗಳೊಂದಿಗೆ ವಿವರಣೆಗಳನ್ನು ಒದಗಿಸಿದ್ದಾರೆ.

ಸ್ವಾಮಿನಾಥನ್ ರವರಿಗೆ ಭಾರತ ರತ್ನ ಕೊಟ್ಟು ಅವರ ನೇತೃತ್ವದಲ್ಲಿ ರಚನೆಯಾದ ಕೃಷಿ ಆಯೋಗದ ಶಿಫಾರಸುಗಳನ್ನು ಜಾರಿಗೆ ತರದ ನರೇಂದ್ರ ಮೋದಿ ಸರ್ಕಾರದ ಕುರಿತು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

–ಎಚ್.ಅರ್.ನವೀನ್ ಕುಮಾರ್, ಹಾಸನ

ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯೆ...... ಪುಟ 5 ರಿಂದ

ಕಡಿತಗೊಳಿಸುತ್ತಾ ಬಂದಿದೆ. ಇದರಿಂದಾಗಿ ವರ್ಷಕ್ಕೆ 100 ದಿನಗಳ ಕೆಲಸದ ಬದಲಾಗಿ ಸರಾಸರಿ 42 ಕೆಲಸದ ದಿನಗಳು ಮಾತ್ರ ಸಿಗುವಂತಾಗಿದೆ. ಇದೂ ಸಾಲದೆಂಬಂತೆ, ಜನವರಿ 1, 2024 ರಂದು, ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯನ್ನು (ABPS) ಕಡ್ಡಾಯಗೊಳಿಸಿದೆ. ಈ ವ್ಯವಸ್ಥೆ ಗ್ರಾಮೀಣ ಪ್ರದೇಶದ ಮತ್ತಷ್ಟು ಕೂಲಿಕಾರ್ಮಿಕರನ್ನು ಈ ಯೋಜನೆಯಿಂದ ಹೊರತಳ್ಳುತ್ತದೆ. ಕೇಂದ್ರದ ಬಿಜೆಪಿ ಸರ್ಕಾರ ಸಾಮಾಜಿಕ ಭದ್ರತಾ ಯೋಜನೆಗಳನ್ನು ಹೇಗೆ ಹಾಳು ಮಾಡುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನ.

ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು

ನಿರುದ್ಯೋಗಿ ಯುವಜನತೆ ತಮ್ಮ ಆಯ್ಕೆಯ ಉದ್ಯೋಗವನ್ನು ಪಡೆಯುವವರೆಗೆ ಅಥವಾ ತಮ್ಮ ಶೈಕ್ಷಣಿಕ ಅರ್ಹತೆಗಾಗಿ ಕಾಯಲು ಸಾಧ್ಯವಿಲ್ಲ. ಬದಲಾಗಿ ಯಾವುದಾದರೂ ಕೆಲಸಕ್ಕೆ ಹೋಗಲೇಬೇಕು. ಈ ಕಾರಣದಿಂದಾಗಿ, ಕಾರ್ಮಿಕರ ಮಾರುಕಟ್ಟೆಯು ಕಿಕ್ಕಿರಿದು ತುಂಬಿದೆ. ಇದರಿಂದ ಕಾರ್ಮಿಕನು ತನ್ನ ಶ್ರಮ ಶಕ್ತಿಯನ್ನು ಅಗ್ಗದ ಬೆಲೆಗೆ ಮಾರಲು ಒತ್ತಾಯಿಸಲ್ಪಡುತ್ತಾನೆ. ಬಹುಶಃ ಪದವೀಧರರು ನಿರುದ್ಯೋಗ ಪರಿಹಾರವನ್ನು ಪಡೆದರೆ, ಅವರು ಬಯಸಿದ ಉದ್ಯೋಗಕ್ಕಾಗಿ ಒಂದಷ್ಟು ಸಮಯ ಕಾಯಲು ಅನುಕೂಲವಾಗುತ್ತದೆ, ಇದರಿಂದಾಗಿ ಹೆಚ್ಚಿನ ಸ್ಪರ್ಧೆ ಇರುವುದಿಲ್ಲ. ಕಾರ್ಮಿಕ ಶಕ್ತಿಯನ್ನು ಅಗ್ಗದ ಬೆಲೆಗೆ ಮಾರಲು ಬಲವಂತದ ವಾತಾವರಣವನ್ನು ಸೃಷ್ಟಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕು ಎಂದು ಶಾಸನಬದ್ಧಗೊಳಿಸಬೇಕು. ಹಾಗೊಂದು ವೇಳೆ ಶಾಸನ ಮಾಡಿದರೆ, ಉದ್ಯೋಗ ಸಿಗುವವರೆಗೂ ನಿರುದ್ಯೋಗ ಪರಿಹಾರ ನೀಡಬೇಕಾಗುತ್ತದೆ. ಆದ್ದರಿಂದಲೇ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ನಂತಹ ಎಡ ಸಂಘಟನೆಗಳು ದಶಕಗಳ ಕಾಲದಿಂದ ಈ ಬೇಡಿಕೆಯನ್ನು ಇಟ್ಟು ಹೋರಾಟ ನಡೆಸುತ್ತಾ ಬಂದಿವೆ.

ನಿರುದ್ಯೋಗ ಭತ್ಯೆ ನೀಡುವ ಕರ್ನಾಟಕ ರಾಜ್ಯ ಸರ್ಕಾರದ ಇಂದಿನ 'ಯುವ ನಿಧಿ' ಯೋಜನೆಯನ್ನು ಸ್ವಾಗತಿಸುತ್ತಲೇ, ಈ ಮೇಲಿನ ಎಲ್ಲಾ ಬೇಡಿಕೆಗಳಿಗಾಗಿ ಹೋರಾಟ ಮುಂದುವರಿಸೋಣ.

ಬರ್ಬರತೆಯ ಪ್ರಪಾತಕ್ಕೆ ಬಂಡವಾಳಶಾಹಿ



ಬಂಡವಾಳಶಾಹಿಯು ಮಾನವೀಯ ಮೌಲ್ಯಗಳ ಒಂದು ಶಕ್ತಿ ಎಂಬ ಭ್ರಮೆಯೂ ಈಗ ಹರಿದಿದೆ. ಬಂಡವಾಳಶಾಹಿಯು ಬರ್ಬರತೆಯ ಸ್ಥಿತಿಗೆ ಇಳಿದಿರುವುದು ಹಿಂದೆಂದಿಗಿಂತಲೂ ಇಂದು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿದೆ. ಜಾಗತಿಕ ಸಾರ್ವಜನಿಕ ಅಭಿಪ್ರಾಯವನ್ನೂ ಲೆಕ್ಕಿಸದೆ, ತನ್ನ ಅನಾಗರಿಕ ಸ್ವಭಾವವನ್ನು ತೆರೆದು ತೋರಿಸುವಷ್ಟು ಧೈರ್ಯ ಸಾಮ್ರಾಜ್ಯಶಾಹಿಗೆ ಬಂದದ್ದಾದರೂ ಹೇಗೆ? ಮತ್ತು, ಅದನ್ನು ತೋರಿಸಲೇಬೇಕು ಎನ್ನುವಷ್ಟು ಹತಾಶೆ ಸಾಮ್ರಾಜ್ಯಶಾಹಿಗೆ ಉಂಟಾದದ್ದಾದರೂ ಏಕೆ? ಏಕೆಂದರೆ ಜಾಗತಿಕವಾಗಿ ಒಗ್ಗಟ್ಟಾಗಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ನೀತಿಗಳಿಗೆ ಅದಕ್ಕೆ ಬಲಿಯಾಗುತ್ತಿರುವ ದುಡಿಯುವ ಜನಗಳಿಂದ ಎಲ್ಲ ದೇಶಗಳಲ್ಲೂ ತೀವ್ರ ಸವಾಲಿನ ಬೆದರಿಕೆ ಹೆಚ್ಚುತ್ತಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್



ಮೊದಲ ಮಹಾ ಯುದ್ಧದ ಸನ್ನಿವೇಶದಲ್ಲಿ ರೋಸಾ ಲಕ್ಸೆಂಬರ್ಗ್ ಅವರು 1915ರಲ್ಲಿ ಜೈಲಿನಿಂದ ಬರೆದ ಒಂದು ಕರಪತ್ರದಲ್ಲಿ, ಮಾನವ ಸಮಾಜವು ಇನ್ನು ಮುಂದೆ ಬರ್ಬರತೆ ಅಥವಾ ಸಮಾಜವಾದ ಇವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದರು. ಈ ಹೇಳಿಕೆಯ ಬಗ್ಗೆ ಉದಾರವಾದಿ ಅಭಿಪ್ರಾಯವು ತಕರಾರು ತೆಗೆಯುತ್ತದೆ. ಎರಡು ವಿಶ್ವ ಯುದ್ಧಗಳು ಮತ್ತು ಅವುಗಳ ನಡುವಿನ ಅವಧಿಯನ್ನು ಗುರುತಿಸುವ ಬರ್ಬರತೆಗೂ ಮತ್ತು ಬಂಡವಾಳಶಾಹಿಗೂ ಸಂಬಂಧವಿಲ್ಲ ಎಂದು ವಾದಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿ ಎದ್ದು ಕಾಣುವ ಉದಾರವಾದಿ ಪ್ರವೃತ್ತಿಯು ಮಹಾ ಯುದ್ಧದ ಬರ್ಬರತೆಯ ವಿರುದ್ಧ ಹೋರಾಡಿದೆ ಎಂದು ಹೇಳುತ್ತದೆ. ಮಾನವೀಯ ಮೌಲ್ಯಗಳನ್ನು ಬಂಡವಾಳಶಾಹಿಯು ಉತ್ತುಂಗಕ್ಕೆ ಕೊಂಡೊಯ್ದಿತು ಎಂಬುದನ್ನು ಯುದ್ಧಾನಂತರದ ವರ್ಷಗಳು ಸಮರ್ಥಿಸುತ್ತವೆ ಎಂದು ಹೇಳುತ್ತದೆ.

ಬಂಡವಾಳಶಾಹಿಯ ಅಡಿಯಲ್ಲಿ ಮಾನವೀಯ ಮೌಲ್ಯಗಳು ಪ್ರವರ್ಧಮಾನಕ್ಕೆ ಬರುವ ಬಗ್ಗೆ ಮಾತನಾಡುವುದು ಸಾಮ್ರಾಜ್ಯಶಾಹಿ ವಿದ್ಯಮಾನವನ್ನುಸಂಪೂರ್ಣವಾಗಿ ನಿರ್ಲಕ್ಷಿಸುವುದೇ ಆಗಿರುತ್ತದೆ. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ಕ್ಷಾಮಗಳನ್ನು ಸೃಷ್ಟಿಸಿತು ಎಂಬುದು ಎಲ್ಲರಿಗೂ ಚೆನ್ನಾಗಿ ತಿಳಿದ ವಿಷಯವೇ: ತನ್ನ ಸುಲಿಗೆಕೋರ ಕಂದಾಯ ನೀತಿಯಿಂದಾಗಿ 1770ರಲ್ಲಿ ಬಂಗಾಳ ಪ್ರಾಂತ್ಯದ ಜನಸಂಖ್ಯೆಯ ಮೂರನೇ ಒಂದು ಭಾಗ (ಸುಮಾರು ಒಂದು ಕೋಟಿ) ಜನರನ್ನು ಕೊಂದ ಬಂಗಾಳದ ಕ್ಷಾಮದಿಂದ ಈ ಆಳ್ವಿಕೆ ಆರಂಭವಾಯಿತು. ತನ್ನ ಅಂತ್ಯದ ವರ್ಷಗಳಲ್ಲಿ, ಅದು ತೊಡಗಿಕೊಂಡಿದ್ದ ಮಹಾ ಯುದ್ಧಕ್ಕಾಗಿ ಹಣ ಒದಗಿಸಿಕೊಳ್ಳಲು ಸರ್ಕಾರವು ಅನುಸರಿಸಿದ ಕ್ರೂರ ನೀತಿಯಿಂದಾಗಿ 1943ರಲ್ಲಿ ಬಂಗಾಳದಲ್ಲಿ ಸೃಷ್ಟಿಯಾದ ಮತ್ತೊಂದು ಕ್ಷಾಮವು ಕನಿಷ್ಠ ಮೂವತ್ತು ಲಕ್ಷ ಜನರನ್ನು ಮತ್ತೊಮ್ಮೆ ಬಲಿ ತೆಗೆದುಕೊಂಡಿತು. ಹೆಚ್ಚಿನ ಸಂಖ್ಯೆಯ ಬುಡಕಟ್ಟು ಜನರನ್ನು ನಿರ್ನಾಮ ಮಾಡಿದ ಮತ್ತು 1930ರ ದಶಕದಲ್ಲಿ ಹಿಟ್ಲರನ ಸೆರೆಮನೆ–ಮತ್ತು–ಸಾವಿನ ಶಿಬಿರಗಳಿಗೆ "ಮಾದರಿ"ಗಳನ್ನು ರೂಪಿಸಿದ ಜರ್ಮನಿಯ ಆಳ್ವಿಕೆಯು (ಇಂದಿನ ನಮೀಬಿಯಾದಲ್ಲಿ ಸಾವಿನ ಶಿಬಿರಗಳನ್ನು ಪರಿಚಯಿಸಿತು. ಕಾಂಗೋದಲ್ಲಿ ಎಲ್ಲರಿಗೂ ತಿಳಿದಿರುವ ಮನುಷ್ಯರ ಅಂಗಾಂಗಗಳನ್ನು ಊನಗೊಳಿಸಿದ ಮತ್ತು ವಿವರಿಸಲಾಗದ ಘನ ಘೋರ ದೌರ್ಜನ್ಯಗಳನ್ನು ಲಿಯೋಪೋಲ್ಡ್ ಆಳ್ವಿಕೆಯ ಅಡಿಯಲ್ಲಿ ಬೆಲ್ಜಿಯಂ ಎಸಗಿತು. ಯುರೋಪಿಯನ್ ವಲಸಿಗ ವಸಾಹತುಶಾಹಿಯು ವಿಶ್ವದ ಸಮಶೀತೋಷ್ಣ ಪ್ರದೇಶಗಳಲ್ಲಿ ಅಸಂಖ್ಯಾತ ಸ್ಥಳೀಯ ಜನರನ್ನು ಕೊಂದುಹಾಕಿತು ಮತ್ತು ಅಳಿದುಳಿದವರನ್ನು ಎತ್ತಂಗಡಿ ಮಾಡಿಸಿ ಅವರ ವಾಸದ ಸ್ಥಳವನ್ನು ಪ್ರತ್ಯೇಕಿಸಿತು ಮತ್ತು ಅವರ ಭೂಮಿ ಮತ್ತು ಆವಾಸ ಸ್ಥಾನಗಳನ್ನು ಸ್ವಾಧೀನಪಡಿಸಿಕೊಂಡಿತು. ಕ್ರೌರ್ಯದ ಈ ಕಥನವನ್ನು ಕೊನೆ ಇಲ್ಲದಂತೆ ಹೇಳುತ್ತಲೇ ಹೋಗಬಹುದು. ಸಂಕ್ಷಿಪ್ತವಾಗಿ ಈ ಎಲ್ಲವನ್ನೂ ಹೇಳುವುದಾದರೆ, ಸಾಮ್ರಾಜ್ಯಶಾಹಿಯ ಈ ಕ್ರೌರ್ಯದ ಉದ್ದೇಶವು ಕೇವಲ ಅಂದರೆ ಕೇವಲ ಲಾಭವೇ ಆಗಿತ್ತು. ಇದುವೇ ಬಂಡವಾಳಶಾಹಿಯ ಗುಣ ಲಕ್ಷಣ.

ಭ್ರಮನಿರಸನ

ಬಂಡವಾಳಶಾಹಿಯು ಅಸ್ತಿತ್ವಕ್ಕೆ ಬರುವ ಬಹಳ ಮೊದಲೇ ಸಂಪತ್ತನ್ನು ದೋಚುವ ಉದ್ದೇಶವೇ ಯುದ್ಧಗಳಿಗೆ ಪ್ರೇರಣೆಯಾಗಿತ್ತು. ಹಾಗಾಗಿ, ಬಂಡವಾಳಶಾಹಿಯನ್ನು ಏಕೆ ಈ ವಿವಾದದೊಳಗೆ ಎಳೆದು ತರಬೇಕು? ಎಂದು ಕೇಳಬಹುದು. ಉತ್ತರದಲ್ಲಿ ಎರಡು ಭಾಗಗಳಿವೆ: ಮೊದಲನೆಯದು, ಮಾನವೀಯ ಮೌಲ್ಯಗಳನ್ನು ಬಂಡವಾಳಶಾಹಿಯು ಪ್ರವರ್ಧಮಾನಕ್ಕೆ ತಂದಿತು ಎಂಬ ಎಲ್ಲಾ ಮಾತುಗಳೂ ಬರೀ ಉತ್ಪ್ರೇಕ್ಷೆಯೇ. ಬಂಡವಾಳಶಾಹಿಯು ಹೆಚ್ಚೆಂದರೆ, ಅದು ಅಸ್ತಿತ್ವಕ್ಕೆ ಬರುವ ಮೊದಲು ಏನಿತ್ತೋ ಅದಕ್ಕಿಂತ ಉತ್ತಮವೇನಲ್ಲ. ಎರಡನೆಯದು, ಹಿಂದಿನ ಕಾಲದಲ್ಲಿ ನಡೆಯುತ್ತಿದ್ದ ಸುಲಿಗೆ, ಕೊಳ್ಳೆ, ಲೂಟಿ ಮುಂತಾದ ಸಂಪತ್ತನ್ನು ದೋಚುತ್ತಿದ್ದ ವಿಧಾನಗಳು ಬಂಡವಾಳಶಾಹಿಯ ಅಡಿಯಲ್ಲಿ ದೋಚುವ ವಿಧಾನಗಳಿಗಿಂತಲೂ ಬಹಳ ಭಿನ್ನವಾಗಿದ್ದವು. ಹಿಂದಿನ ಲೂಟಿಕೋರರು ಯಾರಿಂದ ಕೊಳ್ಳೆ ಹೊಡೆಯುತ್ತಿದ್ದರೋ ಅವರಿಗೆ ಸ್ವಲ್ಪವನ್ನಾದರೂ ಬಿಟ್ಟುಹೋಗುತ್ತಿದ್ದರು ಅಥವಾ ಅವರಿಗೆ ಕಾಲಕ್ರಮದಲ್ಲಿ ತಮ್ಮ ನಷ್ಟವನ್ನು ತುಂಬಿಕೊಳ್ಳುವ ಅವಕಾಶವನ್ನು ಕೊಡುತ್ತಿದ್ದರು (ನಂತರ ಮತ್ತೊಮ್ಮೆ ಅದನ್ನು ಲೂಟಿ ಮಾಡುತ್ತಿದ್ದರು). ಆದರೆ, ಬಂಡವಾಳಶಾಹಿಯ ಅಡಿಯಲ್ಲಿ ತುಳಿತಕ್ಕೊಳಗಾದವರಿಂದ ಲಪಟಾಯಿಸುವುದು ಶಾಶ್ವತವೇ.

ಮಹಾ ಯುದ್ಧಾನಂತರದ ಅವಧಿಯಲ್ಲಿ, ಬಂಡವಾಳಶಾಹಿಯು ತನ್ನನ್ನು ಎಲ್ಲ ಅನಾಗರಿಕ ಪ್ರವೃತ್ತಿಗಳ ವಿರುದ್ಧ ಹೋರಾಡಿದ ಮಾನವೀಯ ಮೌಲ್ಯಗಳ ಒಂದು ಶಕ್ತಿಯಾಗಿ ಬಿಂಬಿಸಿಕೊಂಡಿತು. ನಿರ್ದಿಷ್ಟವಾಗಿ ಹಾಲಿವುಡ್ ಚಲನಚಿತ್ರಗಳನ್ನು ಬಳಸಿಕೊಂಡು, ಎರಡನೆಯ ಮಹಾ ಯುದ್ಧವು ಮೂಲಭೂತವಾಗಿ ಪಾಶ್ಚಾತ್ಯ ಉದಾರವಾದಿ ಪ್ರಜಾಪ್ರಭುತ್ವ ಮತ್ತು ಫ್ಯಾಸಿಸಂ ನಡುವಿನ ಹೋರಾಟವೆಂದು ಬಿಂಬಿಸಿತು ಮತ್ತು ಈ ಯುದ್ಧದಲ್ಲಿ ಸೋವಿಯತ್ ಒಕ್ಕೂಟವು ವಹಿಸಿದ ನಿರ್ಣಾಯಕ ಪಾತ್ರವನ್ನು ನಗಣ್ಯಗೊಳಿಸಿತು. ಪರಿಣಾಮವಾಗಿ, ವಿಶ್ವಾದ್ಯಂತ ಸೋವಿಯತ್ ಒಕ್ಕೂಟದ ಬಗ್ಗೆ ಮೂಡಿದ್ದ ಅಪಾರ ಸಹಾನುಭೂತಿಯು ಬಂಡವಾಳಶಾಹಿ ದೇಶಗಳ ಜನರಲ್ಲಿ ವ್ಯವಸ್ಥಿತವಾಗಿ ಕಾಣದಾಯಿತು. ತಾವು ಹಿಂದೆಂದೂ ಕಂಡಿರದ ಮಾನವೀಯ ವ್ಯವಸ್ಥೆಯೊಳಗೆ ಬದುಕುತ್ತಿದ್ದೇವೆ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸಲಾಯಿತು. ರೋಸಾ ಲಕ್ಸೆಂಬರ್ಗ್ ಅವರ ಟೀಕೆಯು, ಯುದ್ಧಾನಂತರದ ಅವಧಿಯಲ್ಲಿ ಘಟಿಸಿದ ವಿಯೆಟ್ನಾಂ ಯುದ್ಧ ಮತ್ತು ಇತರ ಯುದ್ಧಗಳ ಹೊರತಾಗಿಯೂ, ಮತ್ತು, ಆ ವರ್ಷಗಳಲ್ಲಿ ವಿಶ್ವಾದ್ಯಂತ CIA ಆಯೋಜಿಸಿದ ಆಳ್ವಿಕೆಗಳ ಬದಲಾವಣೆ ಮತ್ತು ಭಯೋತ್ಪಾದಕ ಕೃತ್ಯಗಳು ಬೀರಿದ ಪರಿಣಾಮಗಳನ್ನು ಉಲ್ಲೇಖಿಸದ ಹೊರತಾಗಿಯೂ, ಪ್ರಸ್ತುತವಲ್ಲ ಎಂದು ಬಿಂಬಿಸಲಾಯಿತು.



1943ರ ಭೀಕರ ಬಂಗಾಳ ಕ್ಷಾಮ
ಚಿತ್ರ: ಚಿತ್ತಪ್ರಸಾದ್

ಇಸ್ರೇಲಿ ಬರ್ಬರತೆ–ಕ್ರೂರ ಉದಾಹರಣೆ

ಬಂಡವಾಳಶಾಹಿಯು ಮಾನವೀಯ ಮೌಲ್ಯಗಳ ಒಂದು ಶಕ್ತಿ ಎಂಬ ಭ್ರಮೆ ಈಗ ನಿರಸನವಾಗಿದೆ. ಬಂಡವಾಳಶಾಹಿಯು ಅನಾಗರಿಕ ಸ್ಥಿತಿಗೆ ಇಳಿದಿರುವುದು ಹಿಂದೆಂದಿಗಿಂತಲೂ ಇಂದು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿದೆ. ಅತ್ಯಂತ ಹೃದಯ ವಿದ್ರಾವಕವೂ ಮತ್ತು ಅತ್ಯಂತ ಕ್ರೂರವೂ ಆಗಿರುವ ಒಂದು ಪ್ರಸ್ತುತ ಉದಾಹರಣೆಯೆಂದರೆ, ಮುಂದುವರಿದ ಎಲ್ಲ ಬಂಡವಾಳಶಾಹಿ ದೇಶಗಳ ಕೃಪೆ ಮತ್ತು ಆಶೀರ್ವಾದದೊಂದಿಗೆ ನಡೆಯುತ್ತಿರುವ ಪ್ಯಾಲೆಸ್ಟೀನಿಯನ್ನರ ನರಮೇಧವೇ. ಕನಿಷ್ಠ 28,000 ಪ್ಯಾಲಸ್ತೀನಿ ನಾಗರಿಕರು ಕೊಲ್ಲಲ್ಪಟ್ಟಿದ್ದಾರೆ. ಅವರಲ್ಲಿ ಸುಮಾರು ಶೇ. 70ರಷ್ಟು ಮಹಿಳೆಯರೇ ಮತ್ತು ಮಕ್ಕಳೇ. ವಾಸ್ತವವಾಗಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಮಂದಿ ಕಾಣೆಯಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ಕೊಲ್ಲಲ್ಪಟ್ಟಿದ್ದಾರೆ ಎಂದು ನಂಬಲಾಗಿದೆ. ಹಾಗಾಗಿ, ಸತ್ತವರ ಸಂಖ್ಯೆಯು 28,000ಕ್ಕಿಂತಲೂ ಹೆಚ್ಚು. ಒಂದು ಬಹು ದೊಡ್ಡ ಸಂಖ್ಯೆಯ ಜನರ ಮನೆಗಳ ಮೇಲೆ ಬಾಂಬ್ ಸ್ಫೋಟಿಸಲಾಗಿದೆ. ಬಂಡವಾಳಶಾಹಿ ದೇಶಗಳು ಗಓಖಫಂ ನಿಧಿಯನ್ನು ಸ್ಥಗಿತಗೊಳಿಸುವುದರಿಂದಾಗಿ ಪರಿಹಾರ ಕಾರ್ಯಾಚರಣೆಗಳು ನಿಂತು ಹೋಗಿವೆ. ವಿಶ್ವ ಸಂಸ್ಥೆಯ ಪಶ್ಚಿಮ ಏಷ್ಯಾ ವಿಭಾಗದ ಆರ್ಥಿಕ ಮತ್ತು ಸಾಮಾಜಿಕ ಆಯೋಗವು ಗಾಜಾದಲ್ಲಿ ಏನಾಗುತ್ತಿದೆ ಎಂಬುದನ್ನು "21ನೇ ಶತಮಾನದ ಅತ್ಯಂತ ಮಾರಣಾಂತಿಕ 100 ದಿನಗಳು" ಎಂದು ಕರೆದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಶಕ್ತಿಶಾಲಿ ಬಂಡವಾಳಶಾಹಿ ದೇಶಗಳ ಸಕ್ರಿಯ ಬೆಂಬಲದೊಂದಿಗೆ ಒಂದು ಸಂಪೂರ್ಣ ಅಮಾನವೀಯ ಮತ್ತು ಆಕ್ರಮಣಕಾರಿ ಯಹೂದಿ ರಾಷ್ಟ್ರವಾದಿ (ಝಿಯೋನಿಸ್ಟ್) ಆಳ್ವಿಕೆಯು ಸ್ವೇಚ್ಛೆಯಾಗಿ ಹರಿಯಬಿಟ್ಟ ಮಾನವ ದುರಂತಕ್ಕೆ ನಾವು ಸಾಕ್ಷಿಯಾಗಿದ್ದೇವೆ.

ಝಿಯೋನಿಸ್ಟ್ ಪ್ರಭುತ್ವದ ಆಕ್ರಮಣಶೀಲತೆಯು ಅದೆಷ್ಟು ಲಜ್ಜಾಹೀನವಾಗಿದೆ ಎಂದರೆ, ಇಸ್ರೇಲ್ ಜನಾಂಗೀಯ ಹತ್ಯೆಯಲ್ಲಿ ತೊಡಗಿದೆ ಎಂದು ಆರೋಪಿಸಿ ದಕ್ಷಿಣ ಆಫ್ರಿಕಾವು ಅಂತಾರಾಷ್ಟ್ರೀಯ ನ್ಯಾಯಾಲಯದ ಮೊರೆ ಹೋದಾಗ, ದಕ್ಷಿಣ ಆಫ್ರಿಕಾದ ವಿದೇಶಾಂಗ ಸಚಿವೆಗೆ ಮತ್ತು ಅವಳ ಕುಟುಂಬದ ಮೇಲೆ ಇಸ್ರೇಲ್ ಘೋರ ಪರಿಣಾಮಗಳ ಬೆದರಿಕೆಯನ್ನು ಹಾಕಿತು. ನ್ಯಾಯಾಲಯವು ದಕ್ಷಿಣ ಆಫ್ರಿಕಾದ ಆರೋಪದ ಸಾರಾಂಶವನ್ನು ಎತ್ತಿಹಿಡಿಯಿತು ಮತ್ತು ಗಾಜಾದಲ್ಲಿ ಯುದ್ಧವನ್ನು ತಕ್ಷಣವೇ ಅಂತ್ಯಗೊಳಿಸಲು ಆದೇಶ ನೀಡುವ ವರೆಗೂ ಹೋಗದಿದ್ದರೂ ನರಮೇಧದ ಕ್ರಮಗಳಿಂದ ದೂರವಿರುವಂತೆ ಇಸ್ರೇಲನ್ನು ಕೇಳಿಕೊಂಡಿತು. ಗಮನಾರ್ಹ ಸಂಗತಿಯೆಂದರೆ, ಮುಂದುವರಿದ ಎಲ್ಲ ಬಂಡವಾಳಶಾಹಿ ದೇಶಗಳೂ ಇಸ್ರೇಲನ್ನು ಬೆಂಬಲಿಸಿದವು. ಇಸ್ರೇಲ್ ವಿರುದ್ಧವಾಗಿ ಜರುಗಿಸಬಹುದಾದ ಕಾನೂನು ಕ್ರಮಗಳನ್ನು "ಅಕಾರಣವಾದವುಗಳು" ಎಂದು ಅಮೆರಿಕಾ ವಾದಿಸಿತು. ಇಸ್ರೇಲ್‌ನಲ್ಲಿ ನರಮೇಧ ನಡೆಯುತ್ತಿದೆ ಎಂದು ಆರೋಪಿಸುವುದು "ನೈತಿಕ ಮಿತಿ"ಯನ್ನು ದಾಟುವ ಕ್ರಮವಾಗುತ್ತದೆ ಎಂಬ ವಾದವನ್ನು ಫ್ರಾನ್ಸ್ ಮತ್ತು **ಪುಟ 14 ಕ್ಕೆ**

ಬರ್ಬರತೆಯ ಪ್ರಪಾತಕ್ಕೆ ಬಂಡವಾಳಶಾಹಿ... ಪುಟ 13 ರಿಂದ

ಜರ್ಮನಿ ದೇಶಗಳು ಮಂಡಿಸಿದವು.

ಗಮನಿಸಬೇಕಿರುವುದು ಏನೆಂದರೆ, ರೋಸಾ ಲಕ್ಸೆಂಬರ್ಗ್ ಬರೆಯುತ್ತಿದ್ದ 1915ರಲ್ಲಿ ಇದ್ದಂತೆಯೇ, ಇಂದೂ ಸಹ ಮುಂದುವರಿದ ಬಂಡವಾಳಶಾಹಿ ದೇಶಗಳ ದುಷ್ಕಾರ್ಯದಲ್ಲಿ ಸೋಷಿಯಲ್ ಡೆಮಾಕ್ರಸಿಯು ಸಂಪೂರ್ಣವಾಗಿ ಭಾಗಿಯಾಗಿದೆ ಎಂಬುದು. ವಿಶ್ವದ ಎಲ್ಲೆಡೆಯೂ ಬೀದಿ ಬೀದಿಗಳಲ್ಲಿ ಜನ ಸಾಮಾನ್ಯರು ಇಸ್ರೇಲಿ ಆಕ್ರಮಣದ ವಿರುದ್ಧ ಒಂದು ಬಹು ದೊಡ್ಡ ಮತ್ತು ಮನ ತಟ್ಟುವ ಸಂಖ್ಯೆಯಲ್ಲಿ ಪ್ರದರ್ಶನಗಳನ್ನು ನೆಡೆಸಿದ್ದಾರೆ. ಆದರೆ, ಉಗ್ರ ಬಲಪಂಥದಿಂದ ಹಿಡಿದು ಸೋಷಿಯಲ್ ಡೆಮಾಕ್ರಸಿ, ಸೋಷಿಯಲ್ ಡೆಮಾಕ್ರಸಿಯ ಎಡಕ್ಕಿರುವ ಒಂದು ಭಾಗ (ಉದಾಹರಣೆಗೆ ಜರ್ಮನಿಯಲ್ಲಿ ಡಿ ಲಿಂಕ್) ಮತ್ತು ಗ್ರೀನ್ಸ್ ವರೆಗೆ, ಪಶ್ಚಿಮದ ದೇಶಗಳ ಇಡೀ ರಾಜಕೀಯ ವ್ಯವಸ್ಥೆಯು ಸಾಮ್ರಾಜ್ಯಶಾಹಿಯ ಹಿಂದೆ ಮತ್ತು ಅದರ ಕೃಪಾಪೋಷಿತ ಇಸ್ರೇಲಿ ವಲಸಿಗ ವಸಾಹತುಶಾಹಿಯ ಹಿಂದೆ ಸಾಲುಗಟ್ಟಿ ನಿಂತಿದೆ.

ಬಂದದ್ದಾದರೂ ಹೇಗೆ? ಏಕೆ?

ತಕ್ಷಣವೇ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ: ಈ ಬರ್ಬರತೆಯ ಬಗ್ಗೆ ವಿಶ್ವದಲ್ಲಿ, ಅದರಲ್ಲೂ ವಿಶೇಷವಾಗಿ ಜಾಗತಿಕ ದಕ್ಷಿಣದಲ್ಲಿ, ಸಾರ್ವಜನಿಕ ಅಭಿಪ್ರಾಯವು ತನ್ನ ಜುಗುಪ್ಸೆಯನ್ನು ಬಹಿರಂಗವಾಗಿ ವ್ಯಕ್ತಪಡಿಸಿದರೂ ಸಹ, ಅದರ ಅನಾಗರಿಕ ಸ್ವಭಾವವನ್ನು ತೆರೆದು ತೋರಿಸುವಷ್ಟು ಧೈರ್ಯ ಸಾಮ್ರಾಜ್ಯಶಾಹಿಗೆ ಬಂದದ್ದಾದರೂ ಹೇಗೆ? ಮತ್ತು, ತನ್ನ ಅನಾಗರಿಕ ಸ್ವಭಾವವನ್ನು ತೋರಿಸಲೇಬೇಕು ಎನ್ನುವಷ್ಟು ಹತಾಶೆ ಸಾಮ್ರಾಜ್ಯಶಾಹಿಗೆ ಇದ್ದಕ್ಕಿದ್ದಂತೆ ಉಂಟಾದದ್ದಾದರೂ ಏಕೆ? ಮೊದಲ ಪ್ರಶ್ನೆಗೆ ಉತ್ತರವು, ಇತರ ವಿಷಯಗಳ ನಡುವೆ, ಸೋವಿಯತ್ ಒಕ್ಕೂಟದ ಪತನದಲ್ಲಿದೆ ಮತ್ತು ಸಾಮಾನ್ಯವಾಗಿ ಸಮಾಜವಾದವು ಒಡ್ಡುತ್ತಿದ್ದ ಸವಾಲಿನಲ್ಲಿದೆ. ಸೋವಿಯತ್ ಯೂನಿಯನ್ ಅಸ್ತಿತ್ವದಲ್ಲಿದ್ದಷ್ಟು ಸಮಯದ ವರೆಗೂ, ಜಾಗತಿಕ ದಕ್ಷಿಣಕ್ಕೆ ಸಂಬಂಧಿಸಿದಂತೆ ಸಾಮ್ರಾಜ್ಯಶಾಹಿಯ ಅನಾಗರಿಕ ನಡತೆ ಮಿತಿಮೀರದಂತೆ ನೋಡಿಕೊಳ್ಳುವಲ್ಲಿ ಸಮಾಜವಾದಿ ರಷ್ಯಾದ ಪ್ರಭಾವವಿತ್ತು. ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಮಾಜವಾದದ ಬಗ್ಗೆ ಇದ್ದ ಹೆದರಿಕೆಯು ಸಾಮ್ರಾಜ್ಯಶಾಹಿಯನ್ನು ಸಂಯಮಿಯಾಗಿರುವಂತೆ ಮಾಡಿತ್ತು. ಇದು ರೋಸಾ ಲಕ್ಸೆಂಬರ್ಗ್ ಅವರ ಹೇಳಿಕೆಯನ್ನು ಒಂದು ಹಿಂದಿನ ಅನಿಸಿಕೆಯ (vicarious) ಅರ್ಥದಲ್ಲಿ ಸಮರ್ಥಿಸುತ್ತದೆ. ಆದರೆ, ಸಾಮ್ರಾಜ್ಯಶಾಹಿಯು ತೋರಿಸುತ್ತಿದ್ದ ಆ ಸಂಯಮ ಈಗ ಇಲ್ಲವಾಗಿದೆ.

ಎರಡನೆಯ ಪ್ರಶ್ನೆಗೆ ಉತ್ತರವನ್ನು ಸಾಮ್ರಾಜ್ಯಶಾಹಿ ವ್ಯವಸ್ಥೆಯು ಹಿಂದೆ ಅಸ್ಥಿರಗೊಂಡ ಅಂಶದಲ್ಲಿ ಕಾಣಬಹುದು. ಬದಲಾದ ಸನ್ನಿವೇಶದಲ್ಲಿ, ನಿರ್ವಸಾಹತೀಕರಣದ ಚಾಲನೆಗೆ ಮತ್ತು ಮೂರನೆಯ ಜಗತ್ತಿನ ನಿಯಂತ್ರಣ ನೀತಿಗಳ ಆಳ್ವಿಕೆಗೆ (dirigisme) ಸಾಮ್ರಾಜ್ಯಶಾಹಿಯು ಸಮ್ಮತಿಸಬೇಕಾಗಿ ಬಂತು. ಆದರೆ, ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎನ್ನುವ ಹಾಗೆ ನವ ಉದಾರವಾದಿ ಆಳ್ವಿಕೆಯನ್ನು ಹೇರುವ ಮೂಲಕ ಮರು ಹುಟ್ಟು ಪಡೆದ ಸಾಮ್ರಾಜ್ಯಶಾಹಿಯು ಈಗ ಮತ್ತೊಮ್ಮೆ ಒಂದು ಮಾರಣಾಂತಿಕ ಬೆದರಿಕೆಯನ್ನು ಎದುರಿಸುತ್ತಿದೆ. ಹಿಂದಿನ ಸಾಮ್ರಾಜ್ಯಶಾಹಿ ವ್ಯವಸ್ಥೆ ಮತ್ತು ಇಂದಿನ ವ್ಯವಸ್ಥೆಯ ನಡುವೆ ಒಂದು ಅತಿ ಮುಖ್ಯವಾದ ವ್ಯತ್ಯಾಸವಿದೆ. ಹಿಂದಿನ ಮಹಾ ಯುದ್ಧ–ಪೂರ್ವ ವ್ಯವಸ್ಥೆಯು ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿಯಿಂದ ನಿರೂಪಿಸಲ್ಪಟ್ಟಿತ್ತು. ಇಂದಿನ ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಪೈಪೋಟಿಯು ಮಸುಕಾಗಿದೆ(muted) ಮತ್ತು ಸಾಮ್ರಾಜ್ಯಶಾಹಿಗಳ ನಡುವೆ ಒಂದು ಅಭೂತಪೂರ್ವ ಮಟ್ಟದ ಐಕ್ಯತೆ ಏರ್ಪಟ್ಟಿದೆ. ಏಕೆಂದರೆ, ಇಂದಿನ ವ್ಯವಸ್ಥೆಯ ಅಧ್ಯಕ್ಷತೆ ವಹಿಸಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಜಗತ್ತನ್ನು ವಿಭಜಿಸಲು ಬಯಸುವುದಿಲ್ಲ. ಹಾಗಾಗಿ, ಇಂದಿನ ವ್ಯವಸ್ಥೆಯು ವಿಶ್ವದ ದುಡಿಯುವ ಜನರಿಗೆ ಎದುರಾಗಿ ಜಾಗತಿಕ ಬಂಡವಾಳವನ್ನು ಒಗ್ಗೂಡಿಸಿದೆ. ಮತ್ತು, ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳ ಕಾರ್ಮಿಕರು ಮಾತ್ರವಲ್ಲ, ಜಾಗತಿಕ ದಕ್ಷಿಣದ ಎಲ್ಲ ಕಾರ್ಮಿಕರು ಮತ್ತು ರೈತರೂ ಈ ಹೊಸ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಬಲಿಪಶುಗಳಾಗಿದ್ದಾರೆ.

ವಿಶ್ವದ ದುಡಿಯುವ ಜನರ ಆರ್ಥಿಕ ಹಿತಾಸಕ್ತಿಗಳನ್ನು ಬಲಿಕೊಡುವ ಅಂಶವೇ ಈ ವ್ಯವಸ್ಥೆಯ ಬಿಕ್ಕಟ್ಟನ್ನು ಸೃಷ್ಟಿಸಿದೆ. ಏಕೆಂದರೆ, ಈ ಅಂಶವು (ಅಂದರೆ, ದುಡಿಯುವ ಜನರ ಹಿಂಡುವಿಕೆಯು) ವಿಶ್ವದ ಅರ್ಥವ್ಯವಸ್ಥೆಯಲ್ಲಿ ಬಳಕೆಯನ್ನು ಇಳಿಕೆ ಮಾಡಿದೆ ಮತ್ತು ಆ ಮೂಲಕ ಮಾರುಕಟ್ಟೆಗಳ ಬೆಳವಣಿಗೆಯನ್ನು ಅಡಗಿಸಿಬಿಟ್ಟಿದೆ ಮತ್ತು ಒಂದು ಅತಿ–ಉತ್ಪಾದನೆಯ ಬಿಕ್ಕಟ್ಟನ್ನು ಸೃಷ್ಟಿಸಿದೆ. ಈ ಬಿಕ್ಕಟ್ಟಿಗೆ ನವ ಉದಾರವಾದಿ ಆಳ್ವಿಕೆಯ ವ್ಯವಸ್ಥೆಯಲ್ಲಿ ಯಾವ ಪರಿಹಾರವೂ ಇಲ್ಲ. ಏಕೆಂದರೆ, ಪ್ರಭುತ್ವವು ಕ್ರಿಯಾಶೀಲವಾಗಿ ಮಧ್ಯಪ್ರವೇಶ ಮಾಡುವುದನ್ನು (ಅಂದರೆ, ಸರ್ಕಾರವು ತನ್ನ ವೆಚ್ಚಗಳಿಗಾಗಿ ಬಜೆಟ್‌ನಲ್ಲಿ ಕೊರತೆಯನ್ನು ಹೆಚ್ಚಿಸಿಕೊಳ್ಳುವುದನ್ನು) ನವ ಉದಾರವಾದವು ಸಹಿಸುವುದಿಲ್ಲ. ಪರಿಣಾಮವಾಗಿ, ಜಾಗತಿಕವಾಗಿ ಒಗ್ಗಟ್ಟಾಗಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ನೀತಿಗಳಿಗೆ ಈಗಾಗಲೇ ಬಲಿಯಾಗಿರುವ ವಿಶ್ವದ ದುಡಿಯುವ ಜನರು ಈಗ ನಿರುದ್ಯೋಗದ ಮೂಲಕ ಇನ್ನೂ ಹೆಚ್ಚು ಬಲಿಯಾಗುತ್ತಾರೆ. ಹಾಗಾಗಿ, ಹೊಸ ವ್ಯವಸ್ಥೆಗೆ ಎದುರಾಗುವ ಬೆದರಿಕೆ ಹೆಚ್ಚುತ್ತದೆ.

ಈ ಬಿಕ್ಕಟ್ಟು ಅನೇಕ ದೇಶಗಳಲ್ಲಿ ಫ್ಯಾಸಿಸ್ಟ್ ಆಳ್ವಿಕೆಯನ್ನು ತಂದಿದೆ. ದುಡಿಯುವ ಜನರನ್ನು ದಮನ ಮಾಡಲು ಫ್ಯಾಸಿಸ್ಟ್ ಮತ್ತು ಫ್ಯಾಸಿಸ್ಟೇತರ ಬಂಡವಾಳಶಾಹಿ ಶಕ್ತಿಗಳೆರಡೂ ಸೇರಿಕೊಂಡು ದೇಶದಲ್ಲಿ ಮತ್ತು ವಿದೇಶಗಳಲ್ಲಿ ಒಂದು ತೀವ್ರ ಸ್ವರೂಪದ ದಮನಕಾರಿ ಆಳ್ವಿಕೆಯನ್ನು ಜಾಗತಿಕವಾಗಿಯೂ ಸಹ ತಂದಿವೆ. ಈ ದಮನದಲ್ಲಿ ನೈತಿಕತೆಗೆ ಅವಕಾಶವಿಲ್ಲ. ಅನಾಗರಿಕತೆ, ಬರ್ಬರತೆ ತಾಂಡವವಾಡುತ್ತಿದೆ. ಅನಾಗರಿಕ ಕೃತ್ಯಗಳನ್ನು ಯಾವುದೇ ನಿರ್ದಿಷ್ಟ ದೇಶ/ಸರ್ಕಾರ ಎಸಗಲಿ, ಈ ಅನಾಗರಿಕತೆಯನ್ನು ರಕ್ಷಿಸಲು ಬಂಡವಾಳಶಾಹಿ ದೇಶಗಳು ಒಟ್ಟಾಗಿ ನಿಲ್ಲುತ್ತವೆ.

ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ರಾಜ್ಯಗಳ ಪಾಲೂ ಇದೆ.......... ಪುಟ 11 ರಿಂದ

ರೂಪಾಯಿಗಳ ಆರೋಗ್ಯ ವಿಮಾ ರಕ್ಷಣೆಯನ್ನು ಒದಗಿಸುತ್ತದೆ ಎಂದು ಸರ್ಕಾರ ಹೇಳಿಕೊಂಡಿದೆ. ಈ ರೀತಿಯ ವಿಮಾ ರಕ್ಷಣೆಯನ್ನು ಒದಗಿಸಲು ನಿಜವಾಗಿ ಎಷ್ಟು ಹಣ ಬೇಕಾಗುತ್ತದೆ? ಫಲಾನುಭವಿಗಳು ಒಂದು ವರ್ಷದಲ್ಲಿ ತಮ್ಮ 5 ಲಕ್ಷ ಕೋಟಾದಲ್ಲಿ ಕೇವಲ ಶೇಕಡಾ ಒಂದರಷ್ಟನ್ನು (ರೂ. 5000) ಖರ್ಚು ಮಾಡಿದರೂ, ಸರಾಸರಿ ವಾರ್ಷಿಕ ವೆಚ್ಚವು 50,000 ಕೋಟಿ ರೂ. ಬೇಕಾಗುತ್ತದೆ. ಆದರೆ, ಒಕ್ಕೂಟ ಸರ್ಕಾರ ಇದಕ್ಕೆ ಮೀಸಲಿಡುವ ವಾರ್ಷಿಕ ಹಣ ಅತಿ ಹೆಚ್ಚೆಂದರೆ 2024–25ರಲ್ಲಿ ನಿಗದಿಪಡಿಸಿರುವ 7,500 ಕೋಟಿ ಮಾತ್ರ.

ವಿಶ್ವದ ಅತಿದೊಡ್ಡ ಆರೋಗ್ಯ ವಿಮಾ ಯೋಜನೆಯೇ?

ಹಣಕಾಸು ಸಚಿವರು 2019ರ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದಂತೆ PMJAY ಅನ್ನು "ವಿಶ್ವದ ಅತಿದೊಡ್ಡ ಸರ್ಕಾರಿ ಅನುದಾನಿತ ಆರೋಗ್ಯ ರಕ್ಷಣಾ ಕಾರ್ಯಕ್ರಮ" ಎಂದು ಬಿಂಬಿಸಲಾಗುತ್ತಿದೆ. ಇತ್ತೀಚಿನ ಒಂದು ಪ್ರಕಟಣೆ ಹೀಗಿದೆ: ಪ್ರಧಾನಮಂತ್ರಿ ಜನ್ ಆರೋಗ್ಯ ಯೋಜನೆಯಿಂದ ಆರಂಭಗೊಂಡು, ಇದುವರೆಗೆ ಸರ್ಕಾರದಿಂದ ಧನಸಹಾಯ ಪಡೆದ ವಿಶ್ವದ ಅತಿದೊಡ್ಡ ಆರೋಗ್ಯ ವಿಮಾ ಯೋಜನೆಯಾಗಿದೆ. 12 ಕೋಟಿ ದುರ್ಬಲ ಕುಟುಂಬಗಳಿಗೆ ಸೇರಿದ ಸುಮಾರು 55 ಕೋಟಿ ಜನರನ್ನು ಒಳಗೊಂಡಿರುವ ಈ ಯೋಜನೆಯು ದ್ವಿತೀಯ ಮತ್ತು ತೃತೀಯ ಆರೈಕೆ ಆಸ್ಪತ್ರೆಗೆ ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5 ಲಕ್ಷ ರೂ. ವರೆಗೆ ಖಚಿತವಾದ ಆರೋಗ್ಯ ರಕ್ಷಣೆಯನ್ನು ನೀಡುತ್ತದೆ ಎಂದು ನರೇಂದ್ರ ಮೋದಿ ಅವರ ವೆಬ್ ಫೇಜ್ ನಲ್ಲಿ 2024ರ ಫೆಬ್ರವರಿ 9 ರ ಪ್ರಕಟಣೆ ಹೇಳಿದೆ.

ಇದು ತುಂಬಾ ತಪ್ಪುದಾರಿಗೆಳೆಯುವಂತಿದೆ. "ಅತಿದೊಡ್ಡ" ಪದವು ಪ್ರಾಯಶಃ 50 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯ ವ್ಯಾಪ್ತಿಯನ್ನು ಸೂಚಿಸುತ್ತದೆ. ಆದರೆ ವಿಶಾಲ ವ್ಯಾಪ್ತಿಯನ್ನು ಪ್ರತಿ–ತಲಾವಾರು ವೆಚ್ಚವನ್ನು ಅತಿ ಕನಿಷ್ಟ ಮಟ್ಟಕ್ಕೆ ಕಡಿಮೆ ಮಾಡುವ ಮೂಲಕ ಸಾಧಿಸಲಾಗುತ್ತದೆ. ಮತ್ತು ಕವರೇಜ್ ಕೂಡ ವಿಶ್ವದಲ್ಲೇ ದೊಡ್ಡದೇನಲ್ಲ. ಚೀನಾದ ಆರೋಗ್ಯ ರಕ್ಷಣಾ ವ್ಯವಸ್ಥೆಯು ಅದರ ಸಾರ್ವತ್ರಿಕ ವ್ಯಾಪ್ತಿಯೊಂದಿಗೆ ಹೆಚ್ಚು ದೊಡ್ಡದಾಗಿದೆ. ತಲಾವಾರು ಲೆಕ್ಕದಲ್ಲಿ, ಚೀನಾದಲ್ಲಿ ಆರೋಗ್ಯದ ಮೇಲಿನ ಸಾರ್ವಜನಿಕ ವೆಚ್ಚವು ಭಾರತಕ್ಕಿಂತ ಐದು ಪಟ್ಟು ಹೆಚ್ಚಾಗಿದೆ. PMJAY ಯುನಿವರ್ಸಲ್ ಹೆಲ್ತ್ ಕೇರ್ (UHC) ಗುರಿಯನ್ನು ಕ್ಷುಲ್ಲಕಗೊಳಿಸುತ್ತದೆ. ಅನೇಕ ದೇಶಗಳು ಈಗಾಗಲೇ ಗಳೂಅ ಸಾಧಿಸಿವೆ, ಅಥವಾ ಅದಕ್ಕೆ ತುಂಬಾ ಹತ್ತಿರದಲ್ಲಿದೆ

ರಾಜ್ಯಗಳ ಪಾಲೂ ಇದೆ

ಆಯುಷ್ಮಾನ್ ಯೋಜನೆಯಲ್ಲಿ ಕೇಂದ್ರ ಸರ್ಕಾರ ಮಾತ್ರವೇ ಹಣ ಒದಗಿಸುತ್ತಿಲ್ಲ. ಇದರಲ್ಲಿ ರಾಜ್ಯಗಳ ಪಾಲೂ ಇದೆ. PM-JAY ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚಿಕೊಳ್ಳಲಾಗುತ್ತದೆ. ಪ್ರಸ್ತುತ ಹಂಚಿಕೆಯ ವ್ಯವಸ್ಥೆಯು ರಾಜ್ಯಗಳಿಗೆ (ಈಶಾನ್ಯ ರಾಜ್ಯಗಳು ಮತ್ತು ಮೂರು ಹಿಮಾಲಯ ರಾಜ್ಯಗಳನ್ನು ಹೊರತುಪಡಿಸಿ) ಮತ್ತು ಶಾಸಕಾಂಗ ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳಿಗೆ 60:40 ಅನುಪಾತವಾಗಿದೆ. ಈಶಾನ್ಯ ರಾಜ್ಯಗಳು, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದ ಅನುಪಾತವು 90:10 ಆಗಿದೆ.

ಕೇಂದ್ರದ ಬಿಜೆಪಿ ಸರ್ಕಾರಕ್ಕೆ ನಿಜವಾಗಿಯೂ, ಬಡಜನರಿಗೆ ಆರೋಗ್ಯ ಸೌಲಭ್ಯಗಳನ್ನು ಉಚಿತವಾಗಿ ಒದಗಿಸಬೇಕೆಂಬ ಕಾಳಜಿ ಇದ್ದರೆ, ಇದೇ ಹಣವನ್ನು ಸರ್ಕಾರಿ ಆಸ್ಪತ್ರೆಗಳಿಗೆ ಕೊಟ್ಟು, ಸರ್ಕಾರಿ ಆಸ್ಪತ್ರೆಗಳ ಮೂಲಕವೇ ಬಡವರಿಗೆ ಆರೋಗ್ಯ ಸೇವೆ ಒದಗಿಸಬಹುದಿತ್ತು, ಈ ಅನುದಾನದ ಜೊತೆಗೆ ಮತ್ತಷ್ಟು ಅನುದಾನ ನೀಡಿ ಮತ್ತಷ್ಟು ಸಾರ್ವಜನಿಕ ಆಸ್ಪತ್ರೆಗಳನ್ನು ನಿರ್ಮಿಸಿ, ಈಗಿರುವ ಆಸ್ಪತ್ರೆಗಳಲ್ಲಿ ಆದುನಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಮುಂದಾಗಬೇಕಿತ್ತು. ಆದರೆ, ಮುಕ್ತ ಆರ್ಥಿಕ ನೀತಿಗಳ ಜಾರಿಯ ಭಾಗವಾಗಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಮೇಲಿನ ಸರ್ಕಾರದ ಸಾಮಾಜಿಕ ಜವಾಬ್ಧಾರಿಯಿಂದ ಹಿಂದೆ ಸರಿಯುವ ಮತ್ತು ಆರೋಗ್ಯ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಒಪ್ಪಿಸುವ ವ್ಯವಸ್ಥಿತ ಕಾರ್ಯ ನಡೆಯುತ್ತಿದೆ.

ರಾಜ್ಯ ಬಜೆಟ್: ಹೊಣೆಗಾರಿಕೆ ಮತ್ತು ಸಾಲ ಹೆಚ್ಚಳ... ಪುಟ 3 ರಿಂದ

ಬರಗಾಲ ಪರಿಹಾರದ ವಿಚಾರದಲ್ಲಿ ರೈತರ ಸಾಲದ ಮೇಲಿನ ಬಡ್ಡಿ ಹಾಗೂ ಸುಸ್ತಿ ಬಡ್ಡಿ ಮನ್ನಾ ಘೋಷಿಸಿದೆ. ಅದೇ ರೀತಿ, ಸಹಕಾರಿ ರಂಗದ ಸಾಲವನ್ನು ಮೂರು ಲಕ್ಷದಿಂದ ಐದು ಲಕ್ಷ ರೂ.ಗಳಿಗೆ ಮತ್ತು ಮಧ್ಯಮಾವಧಿ ಸಾಲ 10 ಲಕ್ಷ ರೂ.ಗಳಿಂದ 15 ಲಕ್ಷ ರೂ.ಗಳಿಗೆ ಹೆಚ್ಚಳ, ಜಿಲ್ಲಾಧಿಕಾರಿಗಳ ಖಾತೆಗೆ ಕುಡಿಯುವ ನೀರು, ಮೇವು ಇತರೆ ವಿಚಾರಗಳಿಗೆ ಹಣ ನೀಡಿಕೆ, ಬೆಳೆ ನಷ್ಟ ಪರಿಹಾರದ ಮೊದಲ ಕಂತು ಎಕರೆಗೆ 2,000 ರೂ., 5000 ಸರೋವರಗಳ ನಿರ್ಮಾಣ, ಭದ್ರಾ ಮೇಲ್ದಂಡೆ ಯೋಜನೆ ಜಾರಿ, ಅಲ್ಪಸಂಖ್ಯಾತರು ಹಾಗೂ ದಲಿತ ವಿಭಾಗಗಳಿಗೆ ಆದ್ಯತೆ, ದೇವದಾಸಿ ಮಹಿಳೆಯರ, ಮಂಗಳ ಮುಖಿಯರ ಪಿಂಚಣಿ ಹೆಚ್ಚಳ, ಹಾಲು ಹಾಗೂ ರೇಷ್ಮೆ ಪ್ರೋತ್ಸಾಹ ಧನ ಹೆಚ್ಚಳ, ಅಂಗನವಾಡಿ ನೌಕರರಿಗೆ ಗ್ರಾಚುಯಿಟಿ, ಮುಂತಾದ ಕ್ರಮಗಳು ಸ್ವಾಗತಾರ್ಹವಾಗಿವೆ.

ರೈತರ ಸಾಲ ಮನ್ನಾ ವಿಷಯವೇ ಇಲ್ಲ

ಒಕ್ಕೂಟ ಹಾಗೂ ರಾಜ್ಯ ಎರಡೂ ಸರ್ಕಾರಗಳು ಬಡ ರೈತರ ಸಾಲ ಮನ್ನಾ ವಿಷಯವನ್ನು ಮುಟ್ಟಲು ಹೋಗಿಲ್ಲ. ಕೃಷಿ ಉತ್ಪನ್ನಗಳ ಬೆಲೆಗಳ ಏರಿಳಿತ ಮಾಡುವ ಮಾರುಕಟ್ಟೆ ಶಕ್ತಿಗಳಿಂದ ಹಾಗೂ ಬರ ಹಾಗೂ ಅತಿವೃಷ್ಟಿ, ಕಳಪೆ ಬೀಜ, ಕ್ರಿಮಿನಾಶಕಗಳಿಂದಾಗುವ ನಷ್ಟದಿಂದ ರೈತರನ್ನು ರಕ್ಷಿಸಲು ಕೇರಳ ಮಾದರಿಯ ಋಣಮುಕ್ತ ಕಾಯ್ದೆಗೆ ಕ್ರಮವಹಿಸಬೇಕು. ಬರದ ಬವಣೆಯಿಂದ ಹಾಗೂ ವಲಸೆಯಿಂದ ರಕ್ಷಿಸಲು ರಾಜ್ಯ ಸರಕಾರ ಉದ್ಯೋಗ ಖಾತ್ರಿ ಯೋಜನೆ ವಿಸ್ತರಣೆಗೆ ಕ್ರಮವಹಿಸಬೇಕು.

ರೈತರಿಗೆ ಸಮಸ್ಯೆಯಾಗಲಿರುವ ವಿದ್ಯುತ್ ನೀತಿ

ವಿದ್ಯುತ್ ತಿದ್ದುಪಡಿ ಮಸೂದೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗುವುದಿಲ್ಲವೆಂದು ಪ್ರಕಟಿಸಲಿಲ್ಲ. ಬದಲಿಗೆ, ಖಾಸಗಿ ಸೌರ ವಿದ್ಯುತ್‌ಗೆ ವಿಪರೀತ ಆದ್ಯತೆ ನೀಡಲಾಗಿದೆ. ರಾಜ್ಯದ ದಶ ಲಕ್ಷಾಂತರ ನೀರಾವರಿ ಪಂಪ್ ಸೆಟ್ ಬಳಕೆದಾರರಿಗೆ ಸೋಲಾರ್ ವಿದ್ಯುತ್ ಅಳವಡಿಸಲು ಯತ್ನಿಸುತ್ತಿದೆ. ಅದಕ್ಕಾಗಿ ಶೇ. 50 ಸಹಾಯಧನ ನೀಡುವುದಾಗಿ ಘೋಷಿಸಿದೆ. ಇದರಿಂದ 80 ಲಕ್ಷ ನೀರಾವರಿ ಪಂಪ್ ಸೆಟ್ ರೈತರು ಹಾಗೂ 1.6 ಕೋಟಿ ಗೃಹ ಜ್ಯೋತಿ ಬಳಕೆದಾರರಿಗೆ ಸಮಸ್ಯೆಯಾಗಲಿದೆ.

ಮೃದು ಕೋಮುವಾದದ ಮೊರೆ

ಇನ್ನು ಬಿಜೆಪಿಯ ಅಯೋಧ್ಯಾ ರಾಮನ ಪ್ರಚಾರಕ್ಕೆ ಬದಲಿಯಾಗಿ ಕರ್ನಾಟಕದ 100 ರಾಮ ದೇವಸ್ಥಾನಗಳಿಗೆ 100 ಕೋಟಿ ರೂ., ಅಂಜನಾದ್ರಿ ಅಭಿವೃದ್ಧಿಗೆ 100 ಕೋಟಿ ರೂ., ವಿವಿಧ ಮಠಗಳಿಗೆ ಮತ್ತು ಮತಧರ್ಮೀಯ ಕೇಂದ್ರಗಳಿಗೆ ಅನುದಾನಗಳನ್ನು ನೀಡುವ ಮೂಲಕ ಮೃದು ಹಿಂದುತ್ವ ಅಥವಾ ಮೃದು ಕೋಮುವಾದದ ಮೊರೆ ಹೋಗಿದೆ.

ಒಟ್ಟಾರೆಯಾಗಿ, ಈ ಬಜೆಟ್, ಒಕ್ಕೂಟ ಮತ್ತು ರಾಜ್ಯ ಸರ್ಕಾರದ ನಡುವಿನ ಹಣಕಾಸು ಹಂಚಿಕೆಯ ಸಂಘರ್ಷ ಮತ್ತು ರಾಜ್ಯ ಕಾಂಗ್ರೆಸ್ ಸರ್ಕಾರದ ಒಳಗಿನ ಸಾಮಾಜಿಕ ನ್ಯಾಯ ಮತ್ತು ಕಾರ್ಪೊರೇಟ್ ಶಕ್ತಿಗಳ ನಡುವಿನ ಸಂಘರ್ಷದ ಪ್ರತೀಕವಾಗಿಯೂ ಕಾಣುತ್ತದೆ.

ಸಾಧ್ಯವಾಗುತ್ತಿಲ್ಲ ಎಂದು ಹಲವರು ಹೇಳುವುದನ್ನು ಕೇಳುತ್ತೇವೆ. ಆದರೆ ಮಾನವ ಇತಿಹಾಸವನ್ನು ಬದಲಿಸಿದ ವರ್ಗ ಕ್ರಾಂತಿಯ ನೇತೃತ್ವ ವಹಿಸಿದ ಹೊರತಾಗಿಯೂ, ಇತಿಹಾಸದಲ್ಲಿ ಎಂದೂ ಕಾಣದ ಒಂದು ದುಡಿಯುವ ವರ್ಗದ ಸರ್ಕಾರ ಸ್ಥಾಪಿಸಿ ಆಡಳಿತ ನಡೆಸಿದರೂ ಲೆನಿನ್ ಓದುವುದನ್ನು ಮಾತ್ರ ಬಿಡಲಿಲ್ಲ.

ಸೋವಿಯತ್ ಆಡಳಿತದ ಮುಖ್ಯಸ್ಥರಾಗಿ ಲೆನಿನ್ ಸೇವೆ ಸಲ್ಲಿಸುತ್ತಿರುವಾಗ, ಅವರ ಕಚೇರಿಗೆ ಭೇಟಿ ನೀಡಿದವರು ಅವರು ಮಾರ್ಕ್ಸ್ ಕುರಿತು ಓದುತ್ತಿರುವುದನ್ನು ನೋಡಿ ಅದನ್ನು ದಾಖಲಿಸಿದ್ದಾರೆ. ಇದನ್ನು ಕೇಳುವ ಕೆಲವರಿಗೆ, ಲೆನಿನ್ ಅದುವರೆಗೂ ಮಾರ್ಕ್ಸ್ ಪುಸ್ತಕವನ್ನು ಓದಿರಲಿಲ್ಲವೇ ಎಂಬ ಪ್ರಶ್ನೆ ಮೂಡಬಹುದು. ಲೆನಿನ್ ತಮ್ಮ 20 ನೇ ವಯಸ್ಸನ್ನು ತಲುಪುವ ಹೊತ್ತಿಗೆ, ಮಾರ್ಕ್ಸ್ವಾದಿ ಆಧಾರಿತ ಪಠ್ಯಗಳನ್ನು ಜೀರ್ಣಿಸಿಕೊಳ್ಳಲು ಮತ್ತು ಕೃತಿಗಳನ್ನು ರಚಿಸುವ ಸಾಮರ್ಥ್ಯವನ್ನು ಹೊಂದಿದ್ದರು.

ರೆಡ್ ಬುಕ್ ಡೇ......

ಪುಟ 16 ರಿಂದ

ಮಾರ್ಕ್ಸ್–ಎಂಗೆಲ್ಸ್ ಪಠ್ಯಗಳನ್ನು ಲೆನಿನ್ ಮತ್ತೆ ಮತ್ತೆ ಓದಿದ್ದೇಕೆ?

ಹಾಗಾದರೆ ಏಕೆ ಮಾರ್ಕ್ಸ್–ಎಂಗೆಲ್ಸ್ ಪಠ್ಯಗಳನ್ನು ಲೆನಿನ್ ಮತ್ತೆ ಮತ್ತೆ ಏಕೆ ಓದಿದರು? ಲೆನಿನ್ ಒಮ್ಮೆ ಅದರ ಬಗ್ಗೆ ಸುಳಿವು ನೀಡಿದರು. ಸಮಕಾಲೀನ ಕಾಲದಲ್ಲಿ ಉದ್ಭವಿಸುವ ಅತ್ಯಂತ ಸವಾಲಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಮಾರ್ಕ್ಸ್‌ನೊಂದಿಗೆ "ಸಮಾಲೋಚನೆ" (consult) ಮಾಡುವುದು ಕಡ್ಡಾಯವಾಗಿದೆ ಎಂಬುದನ್ನು ಲೆನಿನ್ ಗಮನಿಸಿದರು.

ಶ್ರಮಜೀವಿ ಚಳುವಳಿಯು ಸಮಕಾಲೀನ ಘಟನೆಗಳು ಒಡ್ಡುವ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬುದರ ಕುರಿತು "ಸಮಾಲೋಚನೆ" ಮಾಡಲು ಲೆನಿನ್ ನಿಯಮಿತವಾಗಿ ಮಾರ್ಕ್ಸ್–ಎಂಗೆಲ್ಸ್ ಅವರ ಬರಹಗಳನ್ನು ಓದುತ್ತಿದ್ದರು. ಅದಕ್ಕಾಗಿಯೇ ಕ್ರುಪ್ಸ್ಕಾಯಾ ಅವರು, "...ಲೆನಿನ್, ಮಾರ್ಕ್ಸ್ ವಾದದಲ್ಲಿ ಪಾರಂಗತರಾಗಿದ್ದರು ಮಾತ್ರವಲ್ಲ, ಅವರು ತಮ್ಮ ಸಿದ್ಧಾಂತವನ್ನು ಚೆನ್ನಾಗಿ ವಿಶ್ಲೇಷಿಸುತ್ತಿದ್ದರು," ಎನ್ನುತ್ತಾರೆ.

ಲೆನಿನ್ ಗ್ರಂಥಾಲಯಗಳಿಗೆ ಹೋಗಿ, ಲಂಡನ್ ಮ್ಯೂಸಿಯಂ ಲೈಬ್ರರಿ ಮತ್ತು ಸ್ವಿಸ್ ಲೈಬ್ರರಿಯಲ್ಲಿ ಕಾರ್ಲ್ ಮಾರ್ಕ್ಸ್ ಬರೆದ ಪುಸ್ತಕಗಳನ್ನು ಓದಲು ಹಲವು ಗಂಟೆಗಳ ಕಾಲ ಕಳೆಯುತ್ತಿದ್ದರು. ಆ ಸಮಯದಲ್ಲಿ, ಇನ್ನೇನು ಕೆಲವೇ ತಿಂಗಳುಗಳಲ್ಲಿ ಅವರು ಜಗತ್ತಿನ ಅತಿ ದೊಡ್ಡ ರಾಷ್ಟ್ರವೊಂದರ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುತ್ತಾರೆ ಎಂಬುದು ಆ ಲೈಬ್ರರಿಯಲ್ಲಿ ಯಾರಿಗೂ ತಿಳಿದಿರಲಿಲ್ಲ! "ರಷ್ಯಾದಲ್ಲಿ ಬಂಡವಾಳಶಾಹಿಯ ಅಭಿವೃದ್ಧಿ", "ರಾಜ್ಯ ಮತ್ತು ಕ್ರಾಂತಿ", ಹಾಗೂ "ಸಾಮ್ರಾಜ್ಯಶಾಹಿ – ಬಂಡವಾಳಶಾಹಿಯ ಉತ್ತುಂಗ" ಸೇರಿದಂತೆ ಹಲವಾರು ಪುಸ್ತಕಗಳನ್ನು ಬರೆಯಲು ಅವರು ಹತ್ತಾರು ಸಾವಿರ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿದರು.

ಅವರು ಅನೇಕ ಪುಸ್ತಕಗಳು ಮತ್ತು ಲೇಖನಗಳನ್ನು ಓದಿದರು. ಅವರ ಪ್ರಮುಖ ತಾತ್ವಿಕ ಕೊಡುಗೆಗಾಗಿ, "ಮೆಟೀರಿಯಲಿಸಂ: ಆನ್ ಎಂಪಿರಿಸಿಸ್ಟ್ ಕ್ರಿಟಿಕ್", ಅವರು 1000 ಕ್ಕೂ ಹೆಚ್ಚು ಪುಸ್ತಕಗಳು ಮತ್ತು ಲೇಖನಗಳನ್ನು ಓದಿದರು ಮತ್ತು ಬಹಳಷ್ಟು ಮೂಲಗಳನ್ನು ಸಂಗ್ರಹಿಸಿದರು. ಕಾಮ್ರೇಡ್ ಲೆನಿನ್ ಅವರ ಬರಹಗಳು 45 ಸಂಪುಟಗಳಲ್ಲಿ ಪ್ರಕಟವಾಗಿವೆ, ಪ್ರತಿಯೊಂದೂ 650 ಪುಟಗಳನ್ನು ಒಳಗೊಂಡಿವೆ.ಅವರ ಪ್ರತಿಯೊಂದು ಕೃತಿಗೆ ಲಗತ್ತಿಸಲಾದ ಗ್ರಂಥಸೂಚಿ ವಿಸ್ಮಯಕಾರಿಯಾಗಿದೆ.

ಅವರು ಯಾವುದೇ ನಿರ್ಣಯ, ಪರಿಕಲ್ಪನೆ ಅಥವಾ ತೀರ್ಮಾನವನ್ನು ಬರೆಯಲು ಹೆಚ್ಚಿನ ಡೇಟಾವನ್ನು ಸಂಗ್ರಹಿಸುತ್ತಾರೆ. ಅದರ ನಂತರ, ಅವರು ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಕೃತಿಗಳ ಮೇಲೆ ಕೇಂದ್ರೀಕರಿಸುವ ಮೂಲಕ ಅವರು ತಲುಪಿದ ಪರಿಕಲ್ಪನೆಯು ಸರಿಯಾಗಿದೆಯೇ ಎಂದು ಪರಿಶೀಲಿಸುತ್ತಾರೆ. ಆಗಲೇ ಬರವಣಿಗೆಯಲ್ಲಿ ಅದಕ್ಕೆ ರೂಪ ಕೊಡುತ್ತಾರೆ. ಈ ಕಠಿಣ ಪ್ರಯತ್ನಗಳು ಲೆನಿನಿಸಂನ ಸಿದ್ಧಾಂತದ ರಚನೆಗೆ ಆಧಾರವಾಗಿವೆ.

ಆಸಕ್ತಿಯಿಂದ ಅಧ್ಯಯನ ಮಾಡಿದರೆ ಮಾತ್ರ

ಆಸಕ್ತಿಯಿಂದ ಅಧ್ಯಯನ ಮಾಡಿದರೆ ಮಾತ್ರ ತಿಳುವಳಿಕೆ ಬರುತ್ತದೆ. ವರದಿ ಮಾಡಲೆಂದೋ ಅಥವಾ ಉಪನ್ಯಾಸಕ್ಕಾಗಿಯೋ ಅಥವಾ ಯಾಂತ್ರಿಕವಾಗಿ ಓದುವುದರಲ್ಲಿ ಯಾವುದೇ ಅರ್ಥವಿಲ್ಲ. ಏನನ್ನು ಓದಬೇಕೆಂದು ಆಯ್ಕೆಮಾಡುವಾಗ, ವೈಯಕ್ತಿಕ ಆಸಕ್ತಿ ಹಾಗೂ ಸಮುದಾಯದ ಅಗತ್ಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇದು ತಕ್ಷಣದ ಸಮಸ್ಯೆಗಳಿಗೆ ಸೀಮಿತವಾಗಿ ಅಥವಾ ಮೂಲಭೂತ ತತ್ವಗಳಿಂದಾಗಿ ತಪ್ಪು. ಇವೆರಡರ ಸಂಯೋಜನೆ ಇರಬೇಕು. ನಮ್ಮ ಅರಿವನ್ನು ಹೆಚ್ಚಿಸಲು, ಜನಸಾಮಾನ್ಯರಿಗೆ ತಿಳಿಸಲು, ನಮ್ಮಲ್ಲಿರುವ ಗೊಂದಲವನ್ನು ತೊಡೆದುಹಾಕಲು, ನಮ್ಮ ಶತ್ರುಗಳನ್ನು ಎದುರಿಸಲು ನಾವು ಓದಬೇಕು. ತಿಳುವಳಿಕೆ ಮತ್ತು ಅಪಹಾಸ್ಯವನ್ನು ಸಮನ್ವಯಗೊಳಿಸಲಾಗುವುದಿಲ್ಲ.

ಕೆಲವರು, ತಾವು ಥಿಯರಿ ದಡ್ಡರೆಂದು ಭಾವಿಸಿ ಇಷ್ಟು ಓದಲು ಸಾಧ್ಯವಿಲ್ಲ ಅಂದುಕೊಳ್ಳುತ್ತಾರೆ. ಆದರೆ ಅದು ತಪ್ಪು. ಅಜ್ಞಾನವು ನಾಚಿಕೆಪಡುವಂಥದ್ದಲ್ಲ. ಅದನ್ನು ಅಧ್ಯಯನದ ದೀಪದಿಂದ ನಂದಿಸಬೇಕು. ಪುರಾಣ, ಇತಿಹಾಸ, ವಿಜ್ಞಾನ, ರಾಜಕೀಯ, ಆರ್ಥಿಕತೆ ಮತ್ತು ಸಮಾಜ ವಿಜ್ಞಾನಗಳು ಏನನ್ನು ನೋಡಬೇಕು ಎಂಬುದರ ಬಗ್ಗೆ ಸ್ಪಷ್ಟವಾಗಿರಬೇಕು. ಉದಾಹರಣೆಗೆ ರಾಮಾಯಣ ಭಾರತಗಳಂತಹ ವಿಷಯಗಳನ್ನು ಈಗ ಅಪಹಾಸ್ಯ ಮಾಡುವುದರಲ್ಲಿ ಅರ್ಥವಿಲ್ಲ. ಅವುಗಳ ಹಿನ್ನೆಲೆಗಳು ಸಮಾಜದ ಹಾದಿಯಲ್ಲಿ ಹೇಗೆ ವಿಕಸನಗೊಂಡಿವೆ. ಅದರಲ್ಲಿ ಅಂತರ್ಗತವಾಗಿರುವ ಸಮಾಜದ ವಿಕಾಸದ ಕುರುಹುಗಳು ಏನೆಂದು ತಿಳಿಯಬೇಕು. ಆದರೆ ದೇಶದ ಪ್ರಸ್ತುತ ಸ್ಥಿತಿಗತಿಗಳನ್ನು ಮೀರಿ ತಾವು ಓದಿದ ಪುಸ್ತಕಗಳ ಮಿತಿಯನ್ನು ಗೇಲಿ ಮಾಡುವುದು ನಕಾರಾತ್ಮಕವಾಗಿರುತ್ತದೆ. ಮಾರ್ಕ್ಸ್ ಮತ್ತು ಎಂಗಲ್ಸ್ ಅವರು ಬಿಟ್ಟುಹೋದ ಅಂಶಗಳನ್ನು ನಿರ್ದಿಷ್ಟ ಸಂದರ್ಭಗಳಲ್ಲಿ ತೆಗೆದುಕೊಳ್ಳಬೇಕಾದ ನಿರ್ಧಾರಗಳಾಗಿ ತೆಗೆದುಕೊಂಡು ತಕ್ಷಣವೇ ಖಂಡಿಸುವುದು ಅವೈಜ್ಞಾನಿಕವಾಗಿದೆ.

ಆದ್ದರಿಂದಲೇ ಇಂದಿಗೂ ಮಾರ್ಕ್ಸ್‌ವಾದ–ಲೆನಿನ್ ವಾದ ಮಾತ್ರ ಮಾನವ ವಿಮೋಚನೆಗೆ ಪರಿಹಾರವಾಗಿದೆ.

ಮಾರ್ಕ್ಸ್‌ವಾದ–ಲೆನಿನ್ ವಾದ ಕಲಿಯೋಣ!
ರೆಡ್ ಬುಕ್ ಡೇ ಓದುವ ಚಳವಳಿಗೆ ಜಯವಾಗಲಿ!

ನವ–ಉದಾರವಾದಿ ನೀತಿಗಳಿಗೆ ಜೋತು ಬೀಳುವ ಪ್ರಯತ್ನ.....

ಪುಟ 3 ರಿಂದ

ಶುಲ್ಕಗಳನ್ನು ಪರಿಷ್ಕರಣೆ ಮಾಡಲಾಗುವುದು ಎನ್ನಲಾಗಿದೆ. ಅಂದರೆ, ಸರ್ಕಾರ ತನ್ನ ಹೊಣೆಗಾರಿಕೆಯಿಂದ ನಿರ್ವಹಿಸಬೇಕಾದ ಸೇವೆಗಳಿಗೆ ಬಳಕೆದಾರರ ಶುಲ್ಕಗಳನ್ನು ಸಂಗ್ರಹ ಮಾಡಬೇಕೆಂಬ ನವ–ಉದಾರವಾದಿ ನೀತಿಗಳನ್ನು ಜಾರಿಗೊಳಿಸುವುದು ಎಂದರ್ಥ. ಮುಂದೆ ಜಾರಿಗೊಳಿಸಲಾಗುವ ಎಲ್ಲಾ ಬಂಡವಾಳ ವೆಚ್ಚದ ಯೋಜನೆಗಳಿಗೆ ಈ ನೀತಿಯು ಅನ್ವಯವಾಗುತ್ತದೆ ಎಂಬುದನ್ನು ಗ್ರಹಿಸುವುದು ಕಷ್ಟವಲ್ಲ. ಯಾವುದೇ ಸೇವೆಗಳಿಗೆ ಶುಲ್ಕ ನೀಡಬೇಕೆಂಬ ನೀತಿಯು ಜನರ ಜೀವನ ನಿರ್ವಹಣೆಯ ವೆಚ್ಚಗಳನ್ನು ಹೆಚ್ಚಿಸಲಿದೆ.

ಖಾಲಿ ಹುದ್ದೆಗಳ ನೇಮಕಾತಿ ಬಗ್ಗೆ ಪ್ರಸ್ತಾಪವಿಲ್ಲ

ಎರಡನೆಯದು, ವೆಚ್ಚ ತರ್ಕಬದ್ಧಗೊಳಿಸುವುದು:– ಅನಾವಶ್ಯಕ ಹುದ್ದೆಗಳನ್ನು ತೆಗೆದುಹಾಕುವುದು ಮತ್ತು ವೇತನದ ವೆಚ್ಚವನ್ನು ಕಡಿತಗೊಳಿಸುವುದು. ಲಕ್ಷಾಂತರ ಸರ್ಕಾರಿ ಹುದ್ದೆಗಳು ಖಾಲಿಯಿವೆ. ಹೊಸ ಹುದ್ದೆಗಳನ್ನು ಸೃಷ್ಟಿಸಬೇಕಾಗಿದೆ. ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜು ಉಪನ್ಯಾಸಕರ ನೇಮಕಾತಿ ಪ್ರಸ್ತಾವ ಮತ್ತು 24,000 ಗುತ್ತಿಗೆ ಪೌರಕಾರ್ಮಿಕರ ಖಾಯಮಾತಿ ವಿಷಯಗಳು ಹೊರತುಪಡಿಸಿದರೆ ಖಾಲಿ ಹುದ್ದೆಗಳ ನೇಮಕಾತಿ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ. ಜೊತೆಗೆ ಆಡಳಿತ ಸುಧಾರಣಾ ಆಯೋಗಗಳು, ವಿವಿಧ ಇಲಾಖಾ ಮಟ್ಟದ ಆಯೋಗಗಳು ಖಾಯಂ ಉದ್ಯೋಗಗಳ ಬದಲಿಗೆ ಹೊರಗುತ್ತಿಗೆ ಮತ್ತು ಗುತ್ತಿಗೆ ಸ್ವರೂಪದ ಉದ್ಯೋಗಗಳನ್ನೇ ಪ್ರತಿಪಾದಿಸುತ್ತಿವೆ ಎಂಬುದನ್ನು ಗಮನಿಸಬೇಕು.

ಸಾರ್ವಜನಿಕ ಆಸ್ತಿಗಳ ನಗದೀಕರಣ

ಮೂರನೆಯದು, ಆಸ್ತಿ ನಗದೀಕರಣ:– ರಾಜಸ್ವ ಸಂಗ್ರಹ ಮತ್ತು ಹೂಡಿಕೆ ಹೆಚ್ಚಿಸಲು ಸಾರ್ವಜನಿಕ ಆಸ್ತಿಗಳ ನಗದೀಕರಣ ಮಾಡಲಾಗುವುದು ಎಂದು ಹೇಳಲಾಗಿದೆ. ರಾಜ್ಯದ ಗ್ರಾಮ ಪಂಚಾಯತ್ ಸಂಪನ್ಮೂಲಗಳನ್ನು ಹೆಚ್ಚಿಸಲು ಗ್ರಾಮ ಪಂಚಾಯತ್ ಸ್ವತ್ತುಗಳ ನಗದೀಕರಣ ನೀತಿ ಜಾರಿಗೊಳಿಸುವುದಾಗಿ ಹೇಳಲಾಗಿದೆ. ತೆರಿಗೆಯೇತರ ರಾಜಸ್ವ ಸಂಗ್ರಹದ ಸಾಮರ್ಥ್ಯದ ಸದ್ಬಳಕೆ ಮಾಡಿಕೊಳ್ಳುವ ನೆಪದಲ್ಲಿ ಸರ್ಕಾರದ ಆಸ್ತಿ ನಗದೀಕರಣದ ಅವಕಾಶಗಳನ್ನು ಗುರುತಿಸಲು ತಜ್ಞರ ಸಮಿತಿಯನ್ನು ರಚನೆ ಮಾಡಲಾಗುವುದೆಂದು ಹೇಳಲಾಗಿದೆ. ಮೈಶುಗರ್ ಹೊಸ ಕಾರ್ಖಾನೆಯನ್ನು ಸ್ಥಾಪಿಸಲು ಕಾರ್ಖಾನೆ ಆಸ್ತಿಯ ನಗದೀಕರಣ ಮಾಡಲಾಗುವುದೆಂದು ಹೇಳಲಾಗಿದೆ. ಸಾರಿಗೆ ನಿಗಮಗಳ ಆಸ್ತಿಗಳನ್ನು ನಗದೀಕರಣ ಮಾಡಬೇಕೆಂಬ ಸಲಹೆಯನ್ನು ಎಂ.ಆರ್.ಶ್ರೀನಿವಾಸಮೂರ್ತಿ ಸಮಿತಿ ಶಿಫಾರಸು ಮಾಡಿದೆ.

ಉದ್ಯೋಗ ಬೆಳವಣಿಗೆ ಸಾಧಿಸುವ ಸ್ಪಷ್ಟತೆ ಕಾಣುವುದಿಲ್ಲ

ನಾಲ್ಕನೆಯದು, ಹೂಡಿಕೆಗಳ ಆಕರ್ಷಣೆ:– ರಾಜ್ಯಕ್ಕೆ ಹೆಚ್ಚಿನ ಅನುದಾನ ತರುವ ಮತ್ತು ಹೆಚ್ಚು ಉದ್ಯೋಗ ಸೃಷ್ಟಿಸುವ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡಲಾಗುವುದು ಎನ್ನಲಾಗಿದೆ. ವಾಸ್ತವದಲ್ಲಿ ದೇಶದಲ್ಲೂ ಮತ್ತು ರಾಜ್ಯದಲ್ಲೂ ಖಾಸಗಿ ಹೂಡಿಕೆಗಳು ನಿರೀಕ್ಷಿತ ಮಟ್ಟದಲ್ಲಿ ಬರುತ್ತಿಲ್ಲ. ವಿದೇಶೀ ಹೂಡಿಕೆ ಶೇ. 47 ರಷ್ಟು ಕಡಿಮೆಯಾಗಿರುವುದನ್ನು ಗಮನಿಸಬಹುದು. ರಾಜ್ಯದ ಕೈಗಾರಿಕಾ ಬೆಳವಣಿಗೆ 2022–23 ರಲ್ಲಿ ಶೇ. 10.3 ಇದ್ದದ್ದು, 2023–24 ರಲ್ಲಿ ಶೇ. 7.1 ಇಳಿದಿದೆ. ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುವ ಸೇವಾ ವಲಯದಲ್ಲಿ ಬೆಳವಣಿಗೆ ದರ 2022–23 ರಲ್ಲಿ ಶೇ. 17 ಇದ್ದದ್ದು 2023–24 ರಲ್ಲಿ ಶೇ. 12.8 ಕ್ಕೆ ಕುಸಿದಿದೆ. ಕೃಷಿ ಕ್ಷೇತ್ರದ ಬೆಳವಣಿಗೆಯು ಪ್ರಸಕ್ತ ವರ್ಷದಲ್ಲಿ ಶೇ. 1.8 ರಷ್ಟು ಕುಸಿತವಾಗಿದೆ. ಹೀಗಿರುವಾಗ ಖಾಸಗಿ ಹೂಡಿಕೆಗಳು ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಇದು ಜನರಲ್ಲಿನ ಕೊಳ್ಳುವ ಶಕ್ತಿಯ ಕುಸಿತವನ್ನು ಸೂಚಿಸುತ್ತದೆ. ಹೀಗಿರುವಾಗ ಉದ್ಯೋಗ ಬೆಳವಣಿಗೆಯನ್ನು ಸಾಧಿಸುವ ಸ್ಪಷ್ಟತೆ ಕಾಣುವುದಿಲ್ಲ.

ಒಕ್ಕೂಟ–ರಾಜ್ಯ ಹಣಕಾಸು ಸಂಬಂಧಗಳು

ಜಿ.ಎಸ್.ಟಿ. ಸಂಗ್ರಹದಲ್ಲಿ ಅಂದಾಜಿಗಿಂತ ಕಡಿಮೆಯಾದಲ್ಲಿ ಒಕ್ಕೂಟ ಸರ್ಕಾರ ಪರಿಹಾರ ನೀಡದೇ ಇದ್ದುದರಿಂದ ಕಳೆದ ಏಳು ವರ್ಷಗಳಲ್ಲಿ 59,274 ಕೋಟಿ ರೂ. ನಷ್ಟವಾಗಿದೆ. 14 ಮತ್ತು 15 ನೇ ಹಣಕಾಸು ಆಯೋಗಗಳ ಶಿಫಾರಸುಗಳಲ್ಲಿ ತೆರಿಗೆ ಹಂಚಿಕೆ ವಿಧಾನದಲ್ಲಿನ ಬದಲಾವಣೆ ರಾಜ್ಯಕ್ಕೆ ಅನ್ಯಾಯವೆಸಗಿದೆ. ಜಿ.ಎಸ್.ಡಿ.ಪಿ. ಲೆಕ್ಕಾಚಾರ ಮಾಡುವ ವಿಧಾನ ಬದಲಾವಣೆ, ಜನಗಣತಿ ಲೆಕ್ಕಾಚಾರದಲ್ಲಿ ಬದಲಾವಣೆಯಿಂದಾಗಿ ರಾಜ್ಯಕ್ಕೆ 15 ಹಣಕಾಸು ಆಯೋಗದ ಆರು ವರ್ಷಗಳಲ್ಲಿ 62,098 ಕೋಟಿ ರೂ. ನಷ್ಟವಾಗಿದೆ. ಬೆಂಗಳೂರಿನ ಅಭಿವೃದ್ಧಿ ಸೇರಿದಂತೆ ವಿಶೇಷ ಅನುದಾನ 11,495 ಕೋಟಿ ರೂ. ಕೇಂದ್ರದಿಂದ ಬರಲಿಲ್ಲ. ಸೆಸ್ ಮತ್ತು ಸರ್‌ಚಾರ್ಜ್‌ಗಳ ಹೆಸರಲ್ಲಿ ಹಂಚಿಕೆ ಮಾಡಲಾಗದ ತೆರಿಗೆಗಳ ಸಂಗ್ರಹವನ್ನು ಒಕ್ಕೂಟ ಸರ್ಕಾರವು ಮಾಡುತ್ತಿದ್ದು, ರಾಜ್ಯಕ್ಕೆ ಏಳು ವರ್ಷಗಳ ಅವಧಿಯಲ್ಲಿ 45,322 ಕೋಟಿ ರೂ.ಗಳ ನಷ್ಟವಾಗಿದೆ. ಹೀಗಾಗಿ ಜಿ.ಎಸ್.ಟಿ. ಅವೈಜ್ಞಾನಿಕ ಅನುಷ್ಠಾನ, ತೆರಿಗೆ ಹಂಚಿಕೆ ಸೂತ್ರದ ಬದಲಾವಣೆ ಮತ್ತು ಹಂಚಿಕೆ ಮಾಡಲಾಗದ ಸೆಸ್–ಸರ್‌ಚಾರ್ಜ್‌ಗಳ ಹೆಚ್ಚಳದಿಂದಾಗಿ ಒಕ್ಕೂಟ ಸರ್ಕಾರವು ರಾಜ್ಯಕ್ಕೆ ಅನ್ಯಾಯ ಮಾಡಿದೆ ಎಂಬ ರಾಜ್ಯ ಸರ್ಕಾರದ ಬಜೆಟ್ ಪ್ರಸ್ತಾಪವು ಸರಿಯಾದುದಾಗಿದೆ. ಈ ಅನ್ಯಾಯವು ಈ ಚುನಾವಣಾ ವರ್ಷದಲ್ಲಿ ಸರಿಹೋಗುತ್ತದೆಂದು ಹೇಳಲು ಸಾಧ್ಯವಿಲ್ಲ. ಇದು ಸಹಜವಾಗಿ ರಾಜ್ಯದ ಆದಾಯ ಸಂಗ್ರಹದ ಮೇಲೆ ಪರಿಣಾಮ ಬೀರುತ್ತದೆ.


ಉದ್ಯಮಿಗಳಿಗೆ ಬಿಟ್ಟುಕೊಡಲಾದ ತೆರಿಗೆಗಳು

ರಾಜ್ಯದ ಬಜೆಟ್‌ನಲ್ಲಿ ಕೈಗಾರಿಕೆಗಳಿಗೆ ಬಿಟ್ಟುಕೊಡಲಾದ ತೆರಿಗೆಗಳು 2023–24 ರಲ್ಲಿ 816.96 ಕೋಟಿ ರೂ. ಇದ್ದದ್ದು 2024–25 ರಲ್ಲಿ 906.46 ಕೋಟಿ ರೂ.ಗೆ ಹೆಚ್ಚಳವಾಗಿದೆ. ಇದರ ಸಿಂಹಪಾಲು ತೋರಣಗಲ್ಲಿನ ಜಿಂದಾಲ್ ಕಂಪನಿಗೆ 600.56 ಕೋಟಿ ರೂ.ಗಳ ತೆರಿಗೆ ವಿನಾಯಿತಿ, ನಂಜನಗೂಡಿನ ಮೋಲ್ಡ್‌ಟೆಕ್ ಪ್ಯಾಕೇಜಿಂಗ್ ಕಂಪನಿಗೆ 93.38 ಕೋಟಿ ರೂ., ಕೋಲಾರದ ಹೋಂಡಾ ಕಂಪನಿಗೆ 77 ಕೋಟಿ ರೂ., ಗೌರಿಬಿದನೂರಿನ ಎ–ವನ್ ಸ್ಟೀಲ್ ಕಂಪನಿಗೆ 88 ಕೋಟಿ ರೂ., ಗೋಕಾಕಿನ ದಾಲ್ಮಿಯಾ ಸಿಮೆಂಟ್ ಕಂಪನಿಗೆ 64 ಕೋಟಿ ರೂ., ಸೇಡಂನ ಅಲ್ಟ್ರಾಟೆಕ್ ಸಿಮೆಂಟ್‌ಗೆ 51 ಕೋಟಿ ರೂ., ಬಿಡದಿಯ ಟಯೋಟ ಕಿರ್ಲೋಸ್ಕರ್‌ಗೆ 18 ಕೋಟಿ ರೂ. ಧಾರವಾಡದ ಟಾಟಾ ಮೋಟಾರ್ಸ್ ಗೆ 15.4 ಕೋಟಿ ರೂ., ಹೀಗೆ ಕೈಗಾರಿಕೋದ್ಯಮಗಳಿಗೆ ತೆರಿಗೆಗಳನ್ನು ವಿನಾಯಿತಿ ನೀಡಲಾಗಿದೆ.

ಗ್ಯಾರಂಟಿ ಯೋಜನೆಗಳು

2024–25 ರಲ್ಲಿ 52,009 ಕೋಟಿ ರೂ. ಗಳನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆಗಳ ಮೂಲಕ ಪ್ರತಿ ಕುಟುಂಬಕ್ಕೆ ವಾರ್ಷಿಕ 50 ಸಾವಿರದಿಂದ 55 ಸಾವಿರ ರೂ.ಗಳು ತಲುಪಲಿದೆ ಎಂದು ಹೇಳಲಾಗಿದೆ. ಗ್ಯಾರಂಟಿ ಯೋಜನೆಗಳು ತಮಗೆ ಹೆಚ್ಚಿನ ಚುನಾವಣಾ ಲಾಭವನ್ನು ತಂದುಕೊಡಲಿದೆಯೆಂದು ಕಾಂಗ್ರೆಸ್ ಸರ್ಕಾರ ಭಾವಿಸಿದೆ. ನವ–ಉದಾರವಾದಿ ಧೋರಣೆಗಳಿಗೆ ಹೆಚ್ಚುತ್ತಿರುವ ಜನರ ವಿರೋಧವನ್ನು ದಾರಿತಪ್ಪಿಸಿ ಇದೇ ನೀತಿಗಳನ್ನು ಮತ್ತಷ್ಟು ಬಿರುಸಾಗಿ ಜಾರಿ ಮಾಡುವ ವಾಹಕವಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ ಎಂಬುದು ಗಮನಾರ್ಹ.

NEW No. MAG(3)/NPP/205/2021-2022
JANASHAKTHI KANNADA VARA PATRIKE February 26-March 3, 2024 Price: Rs. 10/- Date of Publication: 23 February 2024 RNI No. KARKAN /2006/17926 Posted on 24-02-2024
Posted at BG PSO, BG - 560026 **Posted at Periodical Rate -** Rs. 2





ಸೆಕ್ಯೂಲರಿಸಂ ಅನ್ನು ಸೋಶಿಯಲಿಸಂ ಜೊತೆಯಲ್ಲಿಯೇ ಕೊಂಡ್ಯೊಯ್ಯಬೇಕಿದೆ: ಡಾ.ಕೆ.ಪ್ರಕಾಶ್


"ಪ್ರಾದೇಶಿಕ ಪಕ್ಷಗಳು ಜಾತಿಗಳಿಗೆ ಅಂಟಿಕೊಂಡೆ ಹುಟ್ಟಿವೆ. ಆ ಪಕ್ಷಗಳು ಮಿತಿಯ ಒಳಗೆ ಸೆಕ್ಯೂಲರಿಸಂ ಅನ್ನು ಇಟ್ಟುಕೊಂಡಿವೆ. ಮೃದು ಹಿಂದುತ್ವದ ಧೋರಣೆ ಉಳ್ಳವರು ಹಿಂದುತ್ವದ ವಿರುದ್ಧ ಹೋರಾಡಲು ಸಾಧ್ಯವಿಲ್ಲ. ಸೆಕ್ಯೂಲರಿಸಂ ಅನ್ನು ಸೋಶಿಯಲಿಸಂ ಜೊತೆಯಲ್ಲಿಯೆ ಕೆಲಸ ಮಾಡಬೇಕಿದೆ. ಸೆಕ್ಯೂಲರಿಸಂ ಬಲಿಷ್ಟವಾಗಬೇಕಾದರೆ ಸೋಶಿಯಲಿಸಂ ಕೂಡಾ ಬಲಿಷ್ಟವಾಗಬೇಕು. ಸಂವಿಧಾನ ಪೂರ್ವ ಪೀಠಿಕೆಯಲ್ಲಿ ಸೆಕ್ಯೂಲರಿಸಂ, ಸೋಶಿಯಲಿಸಂ ಪದಗಳನ್ನು ತೆಗೆಯಲು ಬಿಜೆಪಿ ಪ್ರಯತ್ನಿಸುತ್ತಲೆ ಇದೆ. ಹಾಗಾಗಿ ಈ ಎರಡು ಶಕ್ತಿಗಳನ್ನು ನಾವು ಒಟ್ಟಾಗಿ ಕೊಂಡೊಯ್ಯಬೇಕಿದೆ" ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಾ. ಕೆ.ಪ್ರಕಾಶ್ ಒತ್ತಿ ಹೇಳಿದರು. ಅವರು ಇತ್ತೀಚೆಗೆ ಕ್ರಿಯಾ ಮಾಧ್ಯಮ ಬೆಂಗಳೂರಿನಲ್ಲಿ ಆಯೋಜಿಸಿದ್ದ 'ವಿ.ಡಿ ಸಾವರ್ಕರ್– ಏಳು ಮಿಥ್ಯೆಗಳು' ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

ಮತೀಯ ಪ್ರಭುತ್ವ ಎಂದರೇನು? ಧಾರ್ಮಿಕ ಸಂಸ್ಥೆಗಳು ಸರ್ಕಾರ ಒಂದಕ್ಕೊಂದು ಬಲಿಷ್ಠವಾಗಿ ಬೆಸೆದುಕೊಂಡು, ಮತೀಯ ನೆಲೆಗಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳುವುದೇ ಮತೀಯ ಪ್ರಭುತ್ವ. ಎನ್.ಡಿ.ಎ. ಅವಧಿಯಲ್ಲಿ ನೇಮಕಗೊಂಡ ನ್ಯಾಯಾದೀಶರು ತೀರ್ಪು ಕೊಡುವಾಗ ಮತ ಧರ್ಮದ ನಂಬಿಕೆಯ ಆಧಾರದ ಮೇಲೆ ತೀರ್ಪು ಕೊಟ್ಟಿರುವ ಉದಾಹರಣೆಗಳಿವೆ.

ನ್ಯಾಯ ವ್ಯವಸ್ಥೆ ಮತಧರ್ಮದ ಆಧಾರದಲ್ಲಿ ಪರಿವರ್ತನೆ ಆಗುತ್ತಿದೆ. ಇಂತಹ ಸಂದರ್ಭದಲ್ಲಿ ಸೆಕ್ಯೂಲರ್ ಪ್ರಜಾಪ್ರಭುತ್ವವನ್ನು ಹೇಗೆ ನೋಡಬೇಕು ಎಂಬುದು ಚರ್ಚಿತವಾಗ ಬೇಕಿರುವ ವಿಷಯ. ಸೆಕ್ಯೂಲರ್ ಎಂಬ ಪದ ವೈಚಾರಿಕ ಚರ್ಚೆ, ವೈಜ್ಞಾನಿಕ ಚರ್ಚೆ ಆರಂಭವಾದಾಗ ಹುಟ್ಟಿಕೊಂಡಿದೆ. ಚರ್ಚೆ ಪ್ರಖರವಾಗುತ್ತಿದ್ದಂತೆ ಧರ್ಮ ಮತ್ತು ಪ್ರಭುತ್ವವನ್ನು ವಿರೋಧಿಸುವ ಹೊಸ ಚಿಂತನೆಗಳು ಆರಂಭವಾದವು.

ಬ್ರಿಟಿಷರ ಕಾಲಿಗೆ ಬಿದ್ದ ಸಾವರ್ಕರ್ ದೇಶಭಕ್ತನಾಗಲು ಸಾಧ್ಯವೆ?

"ನಿಮ್ಮ ಕಾಲ ಬೀಳ್ತಿನಿ, ನನ್ನ ಬಿಟ್ಟ ಬಿಡ್ರಿ" ಎಂದು ಬ್ರಿಟೀಷರಿಗೆ ಹೇಳಿದ್ದು ಇದೇ ಸಾವರ್ಕರ್, ಗಾಂಧಿ ಹತ್ಯೆಯಲ್ಲಿ ಸಾವರ್ಕರ್ ಭಾಗಿಯಾಗಿದ್ದ ಎಂಬುದಕ್ಕೆ ಹಲವು ದಾಖಲೆಗಳಿವೆ. ಇದಕ್ಕೆ "ವಿ.ಡಿ ಸಾವರ್ಕರ್– ಏಳು ಮಿಥ್ಯೆಗಳು'ಎಂಬ ಈ ಪುಸ್ತಕವು ಸಾಕಷ್ಟು ದಾಖಲೆಗಳನ್ನು ನೀಡುತ್ತಿದೆ. ಬ್ರಿಟಿಷರ ಕಾಲಿಗೆ ಬಿದ್ದ ಈ ಸಾವರ್ಕರ್ ದೇಶಭಕ್ತನಾಗಲು ಸಾಧ್ಯವೆ?" ಇದು ಮೀನಾಕ್ಷಿ ಬಾಳಿ ಅವರ ಮಾತುಗಳು.




ಕ್ರಿಯಾ ಮಾಧ್ಯಮ ಬೆಂಗಳೂರಿನಲ್ಲಿ ಆಯೋಜಿಸಿದ್ದ 'ವಿ.ಡಿ ಸಾವರ್ಕರ್– ಏಳು ಮಿಥ್ಯೆಗಳು' ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಚಾತುರ್ವಣವನ್ನು ಒಪ್ಪಿದ್ದ ಈತ, ಅಸ್ಪೃಶ್ಯತೆ ವಿರುದ್ಧ ಹೋರಾಡಿದ್ದ ಎಂಬುದು ಹಸಿ ಸುಳ್ಳು. ಬ್ರಿಟಿಷರ ವಿರುದ್ಧ ಹೋರಾಡಿದ್ದ ಎಂಬುದೆಲ್ಲ ಸುಳ್ಳು. 1911ರಲ್ಲಿ ಜೈಲು ಸೇರಿದ ಆತ, ಬ್ರಿಟಿಷರ ನಿಷ್ಠಾವಂತನಾಗಿ ಎರಡೇ ವಾರದಲ್ಲಿ ಕ್ಷಮೆ ಕೋರಿ ಪತ್ರ ಬರೆದಿದ್ದ. ಈತನ ಸುಳ್ಳುಗಳನ್ನು ವೈಭವೀಕರಿಸುವ ಕೆಲಸಗಳಾಗುತ್ತಿವೆ. ಈತ ಬುಲ್ ಬುಲ್ ಹಕ್ಕಿಯ ಮೇಲೆ ಓಡಾಡುತ್ತಿದ್ದ ಎಂದೆಲ್ಲ ಚಕ್ರವರ್ತಿ ಸೂಲಿಬೆಲೆ ಯಂತವರು ಹಸಿ ಹಸಿಯಾಗಿ ಸುಳ್ಳು ಹೇಳಿ, ಯುವಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡಿದ್ದರು. ಸಮಾಜ ವಿಜ್ಞಾನ ಕುರಿತಂತೆ ಸಂಘಪರಿವಾರರಿಗೆ ಭಯ ಇದೆ. ದೇಶವೇ ಜೈಲಾಗಿರುವ ಮತ್ತು ಮನಸ್ಸುಗಳು ಕಸದ ತೊಟ್ಟಿಯಾಗಿರುವ ಈ ಸಂದರ್ಭದಲ್ಲಿ ಈ ಸತ್ಯಗಳನ್ನು ಜನರ ನಡುವೆ ಕೊಂಡೊಯ್ಯಬೇಕಿದೆ. ಅವರನ್ನು ಚರ್ಚೆಗೆ ಹಚ್ಚಬೇಕಿದೆ ಎಂದು ಮೀನಾಕ್ಷಿ ಬಾಳೆಯವರು ಹೇಳಿದರು.

ಪುಸ್ತಕದ ಅನುವಾದಕರಾದ ಟಿ. ಸುರೇಂದ್ರರಾವ್ ಮಾತನಾಡಿ, ಎರಡು ವರ್ಷದ ಹಿಂದೆ ಅಂದಿನ ಬಿಜೆಪಿ ಸರ್ಕಾರ ಯಲಹಂಕದ ಫ್ಲೈ ಓವರ್ ಗೆ 'ವೀರ' ಸಾವರ್ಕರ್ ಎಂಬ ಹೆಸರನ್ನು ಇಟ್ಟಿತ್ತು. ಇದಕ್ಕೆ ತುಂಬಾ ವಿರೋಧ ವ್ಯಕ್ತವಾಗಿತ್ತು. ಆತ ಸ್ವಾತಂತ್ರ್ಯ ಹೋರಾಟಗಾರ ಅದಕ್ಕೆ ಆತನ ಹೆಸರಿಟ್ಟಿದ್ದೇವೆ ಎಂದು ಸರ್ಕಾರ ಸಮರ್ಥನೆ ಮಾಡಿಕೊಂಡಿತ್ತು. ಆತ ಕರ್ನಾಟಕದವನೇ ಅಲ್ಲ. ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನೇ ಇಡಬೇಕಿದ್ದರೆ ಕರ್ನಾಟಕದ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣರಂತವರ ಹೆಸರಿಡಬಹುದಿತ್ತು. ಹಾಗಾಗಿ ಸಾವರ್ಕರ್ ಕುರಿತು ಇರುವ ವಾದಗಳು ಎಷ್ಟು ಸತ್ಯ, ಎಷ್ಟು ಸುಳ್ಳು ಎಂಬುದನ್ನು ತಿಳಿಯಬೇಕು ಅನಿಸಿತು. ಆಗ ನನ್ನ ಕಣ್ಣಿಗೆ ಬಿದ್ದದ್ದು ಶಂಸುಲ್ ಇಸ್ಲಾಂ ಅವರ 'ಸಾವರ್ಕರ್ ಅನ್ ಮಾಸ್ಕಡ್' (SAVARKAR UNMASKED) ಎಂಬ ಕೃತಿ. ಹಾಗಾಗಿ ಅದನ್ನು ಕನ್ನಡಕ್ಕೆ ಅನುವಾದಿಸಿದೆ ಎಂದರು.

ಪುಸ್ತಕ ಬಿಡುಗಡೆ ನಂತರ ನಡೆದ "ಮತೀಯ ಪ್ರಭುತ್ವ ಮತ್ತು ಸೆಕ್ಯೂಲರ್ ಪ್ರಜಾಪ್ರಭುತ್ವ" ವಿಷಯದ ಕುರಿತು ವಿಚಾರ ಸಂಕಿರಣ ಕಾರ್ಯಕ್ರಮ ನಡೆಯಿತು. ಡಾ. ಶಂಸುಲ್ ಇಸ್ಲಾಂ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮನುಸ್ಮೃತಿಯನ್ನು ಆಚರಿಸುತ್ತಿರುವ ಜನರಿಂದ ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಬ್ರಿಟಿಷ್ ಆಳರಸರ ಕ್ಷಮೆ ಕೋರಿ, ತನ್ನನ್ನು ಬಿಡುಗಡೆ ಮಾಡಬೇಕು ಎಂದು ಒಂದಲ್ಲ, ಎರಡಲ್ಲ, ಐದು ಕ್ಷಮಾಪತ್ರಗಳನ್ನು ಬರೆದಿದ್ದ ಸಾವರ್ಕರ್ ನಂತವರನ್ನು ಬಳಸಿಕೊಂಡು ಸುಳ್ಳುಗಳ ಮೂಲಕ ಜನರ ದಿಕ್ಕನ್ನು ತಪ್ಪಿಸುತ್ತಿದ್ದಾರೆ ಎಂದರು.

ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಆರ್‌ಎಸ್‌ಎಸ್ ಸಂಸ್ಥಾಪಕ ಹೆಗಡೆವಾರ್ ಗೆ ಸಾವರ್ಕರ್ ಪ್ರೇರಣೆ. ಅವರೆಲ್ಲರಿಗೂ ಇಟಲಿಯಲ್ಲಿದ್ದ ಮೂಂಜೆ ಆದರ್ಶನಾಗಿದ್ದ. ಜನರನ್ನು ಮರುಳು ಮಾಡಲು ಧರ್ಮವನ್ನು ಬಳಸಿಕೊಳ್ಳಲಾಗುತ್ತಿದೆ. ಪುರಾಣವನ್ನು ಇತಿಹಾಸ ಎಂದು ಅಂಧ ಭಕ್ತರ ತಲೆಗೆ ತುಂಬಿದ್ದಾರೆ. ಕರ್ನಾಟಕವನ್ನು ಹಿಂದುತ್ವದ ಪ್ರಯೋಗ ಶಾಲೆಯನ್ನಾಗಿಸಲಾಗಿದೆ. ನಾವು ಇದಕ್ಕೆ ಪರ್ಯಾಯವಾಗಿ ಕರ್ನಾಟಕದ ಶಾಂತಿಯ ತೋಟವನ್ನು ಕಟ್ಟಬೇಕಿದೆ ಎಂದರು.

ಪ್ರಾಸ್ಥಾವಿಕವಾಗಿ ಕ್ರಿಯಾ ಮಾಧ್ಯಮದ ನಿರ್ದೇಶಕ ಎನ್.ಕೆ. ವಸಂತರಾಜ್ ಮಾತನಾಡಿದರು, ಕಾರ್ಯಕ್ರಮದಲ್ಲಿ ಹಲವು ಗಣ್ಯರು ಭಾಗಿಯಾಗಿದ್ದರು.



ರೆಡ್ ಬುಕ್ ಡೇ

ಮಾರ್ಕ್ಸ್–ಎಂಗಲ್ಸ್ ಪಠ್ಯಗಳನ್ನು ಮತ್ತೆ ಮತ್ತೆ ಓದುತ್ತಿದ್ದ ಲೆನಿನ್

ಕಾಮ್ರೇಡ್ ಲೆನಿನ್ ಅವರ ಶತಮಾನೋತ್ಸವದ ಅಂಗವಾಗಿ (ಫೆಬ್ರವರಿ–21) ಈ ವರ್ಷದ ಕೆಂಪು ಪುಸ್ತಕ ದಿನ ಆಚರಿಸುತ್ತಿದ್ದೇವೆ. ಓದುವುದು ಎಂಬುದಕ್ಕೆ ಒಂದು ಉತ್ತಮ ಉದಾಹರಣೆಯನ್ನು ಕಾಮ್ರೆಡ್ ಲೆನಿನ್ ಅವರ ಬದುಕು ತೋರಿಸಿಕೊಟ್ಟಿದೆ. ಪುಸ್ತಕಗಳನ್ನು ಓದಲು ಲೆನಿನ್ ಅವರು ಅತ್ಯುತ್ತಮ ಮಾರ್ಗದರ್ಶಿಯಾಗಿದ್ದಾರೆ. ಮಾನವ ಜೀವನವು ಮೇಲ್ನೋಟದ ಓದಿನಿಂದ ಅಥವಾ ಓದದೇ ಇರುವ ಜೀವನವನ್ನು ಸಾಗಿಸುತ್ತಿರುವಾಗ ಲೆನಿನ್ ಅವರ ಓದನ್ನು ಅವರ ಬದುಕಿನಿಂದ ತಿಳಿದುಕೊಳ್ಳುವುದು ಅವಶ್ಯಕ.

ಲೆನಿನ್ ಅವರ ಪತ್ನಿ ಕ್ರುಪ್ಸ್ಕಯಾ, ಲೆನಿನ್ ಅವರ ಓದಿಗೆ ಪ್ರತ್ಯಕ್ಷ ಸಾಕ್ಷಿ. ಲೆನಿನ್ ಹೆಚ್ಚು ಓದಿಕೊಂಡ ಮಾರ್ಕ್ವಾದಿ ವಿದ್ವಾಂಸರು. ಮಾರ್ಕ್ಸ್ ಬರಹಗಳನ್ನು ಲೆನಿನ್ ಹೇಗೆ ಅಧ್ಯಯನ ಮಾಡಿದರು ಎಂಬುದನ್ನು ಕ್ರುಪ್ಸ್ಕಯಾ ವಿವರಿಸುತ್ತಾರೆ. ಲೆನಿನ್ ಅವರು ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಬರಹಗಳನ್ನು ಮತ್ತೆ ಮತ್ತೆ ಓದುವ ಮತ್ತು ಅವರ ಟಿಪ್ಪಣಿಗಳನ್ನು ಬರೆಯುವ ಅಭ್ಯಾಸವನ್ನು ಹೊಂದಿದ್ದರು.

ಕ್ರಾಂತಿಯ ನಂತರವೂ ಲೆನಿನ್ ಓದನ್ನು ಬಿಡಲಿಲ್ಲ

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಕೆಲಸದ ಹೊರೆಯಿಂದ ಓದಲು **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**